ಅಧ್ಯಯನಾಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್. ಪದವಿಯ ನಿಬಂಧ

"ವಿ.ಎಂ. ಇನಾಂದಾರ್‌ರವರ ಮೋಹಿನಿ ಕಾದಂಬರಿ ಒಂದು ಅಧ್ಯಯನ"

ಸಂಶೋಧನಾ ವಿದ್ಯಾರ್ಥಿ :

ನೋಂದಣಿ ಸಂಖ್ಯೆ : ೧೪೦೭೦೧೦೩೦೦೮೫

ಅಧ್ಯಯನಾಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್. ಪದವಿಯ ನಿಬಂಧ

"ವಿ.ಎಂ. ಇನಾಂದಾರ್‌ರವರ ಮೋಹಿನಿ ಕಾದಂಬರಿ ಒಂದು ಅಧ್ಯಯನ"

ಮಾರ್ಗದರ್ಶಕರು :

ಡಾ|| ಎಸ್. ಶಾಂಭವಿ

ಸಹಾಯಕ ಪ್ರಾಧ್ಯಾಪಕಿ
ಗೃಹವಿಜ್ಞಾನ ಕಾಲೇಜು
ಶೇಷಾದ್ರಿ ರಸ್ತೆ, ಬೆಂಗಳೂರು – ೫೬೦೦೦೧

ಸಂಶೋಧನಾ ವಿದ್ಯಾರ್ಥಿ : ಸುಧಾ ಬಿ. ಆರ್

ನೋಂದಣಿ ಸಂಖ್ಯೆ : ೧೪೦೬೦೧೦೩೦೦೮೫

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ


ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು – ೫೬೦೦೧೯

೨೦೧೪ –೨೦೧೫

ಪರಿವಿಡಿ

ವಿ.ಎಂ. ಇನಾಂದಾರ್





ಅಧ್ಯಾಯ ೧.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಅಧ್ಯಾಯ ೧.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಸಾಹಿತಿ ಜೀವನದ ಕನ್ನಡಿ ಮಾತ್ರವಲ್ಲ. ಅದರ ಮಹಾ ಶಿಲ್ಪಿಯೂ ಆಗಿರುತ್ತಾನೆ. ಜೀವನದ ಕಸವನ್ನು ತೆಗೆದು ಅದನ್ನು ನಿತ್ಯ ನೂತನವಾಗಿಸಿ ಹೆಚ್ಚು ಸುಂದರವಾಗಿಸುವ ಕೆಲಸ ಅವನದಾಗಿದೆ. ಇಂತಹ ಒಂದು ಕೆಲಸವನ್ನು ಮಾಡಲು ಹೊರಟ ಶ್ರೇಷ್ಠ ಬರಹಗಾರರಲ್ಲಿ ಇನಾಂದಾರರೂ ಒಬ್ಬರು. ಕನ್ನಡ ಸಾಹಿತ್ಯ ಲೋಕ ಕಂಡ ಅತ್ಯಂತ ಮಹತ್ವದ ಬರಹಗಾರರಲ್ಲಿ ಇವರೂ ಒಬ್ಬರೆನಿಸಿದ್ದಾರೆ.

ಪ್ರೊ. ವಿ.ಎಂ. ಇನಾಂದಾರರು ನಮ್ಮ ನವೋದಯ ಸಂದರ್ಭದ ಅತ್ಯಂತ ಪ್ರಮುಖ ಬರಹಗಾರರು. ಬಿ.ಎಂ.ಶ್ರೀ, ಎಸ್.ವಿ. ರಂಗಣ್ಣ, ಗೋಕಾಕ್, ಎ.ಎನ್. ಮೂರ್ತಿ ರಾಯರು ಮೊದಲಾದ ಸೃಜನಶೀಲ ಬರಹಗಾರರಂತೆ ಆಂಗ್ಲ ಪ್ರಾಧ್ಯಾಪಕರಾಗಿ ಕನ್ನಡದಲ್ಲಿ ಚಿಂತಿಸಿ ಬರೆದು ಕನ್ನಡದ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಿದವರು.

ಕನ್ನಡ ಕಾದಂಬರಿಗಳು ಇನ್ನೂ ಬೆಳವಣಿಗೆಯ ಹಂತದಲ್ಲಿರುವಾಗಲೇ ಕಾದಂಬರಿಗಳನ್ನು ರಚಿಸ ಹೊರಟ ಇವರು ನವೋದಯ, ಪ್ರಗತಿಶೀಲ, ನವ್ಯ ಎಲ್ಲಾ ಪಂಥಗಳಲ್ಲಿಯೂ ಕೃತಿ ರಚನೆಯನ್ನು ಮಾಡಿದ್ದಾರೆ. ಆದರೆ ಆ ಕಾಲದ ಅಂಶಗಳನ್ನು ತೆಗೆದುಕೊಂಡು ಯಾವುದೋ ಪಂಥಕ್ಕೂ ಅಂಟದೆಯೆ ಅವರದೇ ಆದ ವಿಶಿಷ್ಟ ರೀತಿಯಲ್ಲಿ ರಚನೆಯನ್ನು ಕೈಗೊಂಡವರು.

ಕಥೆ ಹೇಳುವುದು ಒಂದು ಕಲೆ. ಅದರಲ್ಲೂ ಕಾದಂಬರಿಯ ಚೌಕಟ್ಟಿನಲ್ಲಿ ಕಥೆ ಹೇಳುವುದು ವಿಶಿಷ್ಟಕಲೆ.

ಆ ಕಲೆ ಇನಾಂದಾರರಿಗೆ ಅಪೂರ್ವವಾಗಿ ಒಲಿದಿತ್ತು ಎಂದು ಹೇಳಬಹುದು. ಇನಾಂದಾರರು ಬರೆದ ಮೋಹಿನಿ ಕಾದಂಬರಿಯು ಸಾಮಾಜಿಕ ಕಾದಂಬರಿಯಾಗಿದ್ದರೂ ಕೌಟುಂಬಿಕ ಹಿನ್ನೆಲೆಗೆ ಹೆಚ್ಚು ಒತ್ತನ್ನು ನೀಡಿರುವಂತೆ ಕಂಡು ಬರುತ್ತದೆ.

ಬದುಕಿನಲ್ಲಿ ನೋವು, ದು:ಖಗಳು ಯಾಕಿರಬೇಕು. ಅವು ಅನಿವಾರ್ಯವೆ ಎನ್ನುವ ವ್ಯರ್ಥ ಪ್ರಶ್ನೆಗಳಿಗಿಂತ ಆ ನೋವು ದು:ಖ ಯಾವ ರೀತಿಯಲ್ಲಿ ನಮ್ಮನ್ನು ಸಾಗಿಸಬಹುದು ಎಂಬ ಪ್ರಶ್ನೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ.

ಒಂದು ವರ್ಷದ ಕಾಲಾವಧಿಯನ್ನು ಆರು ಭಾಗಗಳಾಗಿ ಗುರುತಿಸುತ್ತ ವಸಂತ, ಗ್ರೀಷ್ಮ, ಶರತ್, ಹೇಮಂತ, ಶಿಶರ ಎಂಬ ಆರು ಋತುಗಳನ್ನು ವಿಂಗಡಿಸುವುದು ಕ್ರಮ. ಮೋಹಿನಿ ಕಾದಂಬರಿಯ ಕೇಂದ್ರ ಬಿಂದು ಮೋಹಿನಿ ಈ ಋತು ಮಾನಗಳಂತೆ ಅರಳಿ ಬಾಡಿದ ನಿಡಿದಾದ ಬದುಕಿನ ಚಿತ್ರಣವನ್ನು ಇನಾಂದಾರರು ಪ್ರಸ್ತುತ ಮೋಹಿನಿ ಕೃತಿಯಲ್ಲಿ ನೀಡಿದ್ದಾರೆ.

ಜಡಗಟ್ಟಿದ ಸಂಪ್ರದಾಯಗಳ ನಡುವೆಯೇ ಹುಟ್ಟಿದ ಮೋಹಿನಿ ತನ್ನದೇ ಆದ ಪ್ರಪಂಚ ತನ್ನದೇ ಆದ ಗೂಡು ತನ್ನವನ ತೋಳ್ಸೆರೆಯಲ್ಲಿ ಸುಖಿಸುವ ಯಾವುದೇ ಸಾಮಾನ್ಯ ಹೆಣ್ಣಿನಂತೆ ಕಟ್ಟಿಕೊಂಡ ಕನಸು ಮುರಿದು ಹೆಂಡತಿ ಎಂಬ ಪ್ರಾಣಿಯಂತೆ ಬಂಧಿತಳಾಗಿ ಜೀವನ ನಡೆಸಬೇಕಾಗುತ್ತದೆ. ಆನಂದ – ಮೋಹಿನಿಯರ ಸಂಬಂಧ

ಅರಸ – ದಾಸಿಯ ಸಂಬಂಧವಾಗಿ ಆಕೆಗೆ ಕಂಡಾಗ ಮನೆಯಿಂದ ಹೊರ ಹೊರಡುತ್ತಾಳೆ. ತಾನು ಬಯಸಿದ ವಸಂತನೊಂದಿಗೆ ಬದುಕು ಸಾಧ್ಯ ಎಂದು ಕನಸು ಕಾಣುವಾಗಲೇ ವಸಂತ ಶಕುಂತಲೆಯೊಂದಿಗೆ ವಿವಾಹವಾಗುತ್ತಾನೆ. ಈ ನೋವು ದಾರುಣವಾದರೂ ಕೈ ಗೆಟುಕದ ಪ್ರೇಮ, ಮನಸ್ಸಿನಲ್ಲಿ ಕೊನೆಯವರೆಗೂ ಉಳಿಯುತ್ತದೆ. ಮುಂದೆ ಆಕೆಯ ವ್ಯಾವಹಾರಿಕ ಬದುಕಿನಲ್ಲಿ ಪ್ರವೇಶಿಸಿದ ಆಕೆಯ ಕೀರ್ತಿ, ಯಶಸ್ಸಿಗೆ ಕಾರಣವಾದ ರಂಗನಾಥನೂ ಕೂಡಾ ಆ ಒಲವನ್ನು ನೀಡುವಲ್ಲಿ ಯಶಸ್ವಿಯಾಗುವುದಿಲ್ಲ.

ಹೀಗೆ ತನಗೆ ಪರಿಚಯವಾದ ತಾನು ಬಯಸಿದ ಕೆಲ ಗಂಡಸರು ತನ್ನಿಂದ ದೂರವಾಗುತ್ತಿರುವ ಪತಿಯಾಗಿರಬಹುದು, ಸ್ನೇಹಿತನಾಗಿರಬಹುದು ಎಲ್ಲರೂ ದೂರಾಗುವುದನ್ನು ಇನಾಂದರರು ಹೇಳುತ್ತಾ ಒಂದು ಹೆಣ್ಣಿನ ಕನ್ನಡಿಯಂತಿರುವ ಪರಿಶುಭ್ರವಾದ ಪ್ರೀತಿ ತುಂಬಿದ ಹೃದಯ ಛಿದ್ರಛಿದ್ರವಾಗಿರುವುದನ್ನು ಚಿತ್ರಿಸುತ್ತಾ ಹೋಗುತ್ತಾರೆ.

"ಜುಸ್ತು ಜೂ ಜಿಸ್ಕಿ ಥೀ

ಉಸ್ಕೋ ತೊ ನ ಪಾಯಾ

ಹಮ್ನೆ

ಇಸ್ ಬಹಾನೆ ಸೆ ಮಗರ್

ದೇಖ್ಲೀ ದುನಿಯಾ

ಹಮ್ನೆ"

ಉಮ್ರಾವ್ ಜಾನ್ ಯಾವುದಕ್ಕಾಗಿ ಇಡೀ ಜೀವನ ಹಂಬಲಿಸಿದಳೋ, ಅದು ತನ್ನ ಪಾಲಿಗೆ ಸಿಕ್ಕಲೇ ಇಲ್ಲವೋ ಹಾಗೆ, ಮೋಹಿನಿಯ ಜೀವನವೂ ಈ ಹಾಡಿನ ಸಾಲಿನಂತೆ ಬಯಸಿದ್ದಾವುದೂ ದೊರೆಯದೆ ಆದರೆ ಪ್ರಪಂಚ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಕೊಡುತ್ತದೆ.

ಒಟ್ಟಾರೆಯಾಗಿ ಹೆಣ್ಣನ್ನು ಒಲಿಸಿಕೊಳ್ಳುವ ಅಥವಾ ಅಸಹನೆಯನ್ನು ಹುಟ್ಟು ಹಾಕುವ ನಡುವಿನ ಗೆರೆ ಎಂಥಹ ಕಂದರವನ್ನು ಹೆಣ್ಣಿನ ಮನಸ್ಸಿನಲ್ಲಿ ಕೊರೆದೀತು ಎಂಬುದನ್ನು ಇನಾಂದಾರರು ಮುಖ್ಯವಾಗಿ ಶೋಧಿಸಲು ಹೊರಟಿದ್ದಾರೆನಿಸುತ್ತದೆ.

ನನ್ನ ಈ ಕಾದಂಬರಿಯ ಅಧ್ಯಯನದ ಅನುಕೂಲಕ್ಕಾಗಿ ಕಾದಂಬರಿ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಹಾಗೂ ಮೋಹಿನಿ ಕಾದಂಬರಿ ಪಡೆದ ಸ್ಥಾನವನ್ನು ಗುರುತಿಸುವುದಕ್ಕಾಗಿ ಹೊರಟಿದ್ದೇನೆ.

ಲೇಖಕರ ಅನುಭವ ಜೀವನ ದೃಷ್ಟಿಗಳನ್ನು ಕಡೆದಿರಿಸಿದಂತಿದೆ. ಈ ದೃಷ್ಟಿಯಿಂದ ಅವರ ಬದುಕು ಬರಹಕ್ಕೆ ಅವಿನಾಭಾವ ಸಂಬಂಧವಿರುವುದರಿಂದ ಒಟ್ಟು ಅವರ ಬದುಕು ಬರಹವನ್ನು ಕುರಿತು ಸ್ಥೂಲವಾಗಿ ಈ ಪ್ರಬಂಧದಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ.

ಹಾಗೂ ಇನಾಂದಾರರು ಕಾಲದ ಪ್ರವಾಹದಲ್ಲಿ ಮೋಹಿನಿಯ ಕಥೆಯನ್ನು ಹೇಗೆ ಬೆಳೆಸಿಕೊಂಡು ಹೋಗುತ್ತಾರೆ ಎಂಬುದನ್ನು ವಿಶ್ಲೇಷಿಸುವುದು. ತಮ್ಮದೇ ಆದ ವಿಶಿಷ್ಟ ಮಾರ್ಗದಲ್ಲಿ ಕೃತಿ ರಚನೆ ಮಾಡುವ ಇವರ ಬರಹದ ವಿಶಿಷ್ಟತೆಗಳೇನು, ಕಾದಂಬರಿಯ ವಸ್ತು, ಪಾತ್ರ, ಭಾಷೆ ಹಾಗೂ ಶೈಲಿಯ ಸೊಬಗು, ತಂತ್ರಗಾರಿಕೆಗಳಿಂದ ಸಾಮಾಜಿಕ ಹಾಗೂ ನೈತಿಕ ನೆಲೆಗಳಲ್ಲಿ ಈ ಕಾದಂಬರಿಯು ಹೇಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆ ಎಂಬುದನ್ನು ಗುರುತಿಸುವುದು ನನ್ನ ಸಂಶೋಧನಾ ಅಧ್ಯಯನದ ಮುಖ್ಯ ಉದ್ದೇಶವಾಗಿರುತ್ತದೆ.

ಅಧ್ಯಾಯ ೨.

ಕಾದಂಬರಿ ಸಾಹಿತ್ಯದ ಭೂಮಿಕೆ

ಅಧ್ಯಾಯ ೨.

ಕಾದಂಬರಿ ಸಾಹಿತ್ಯದ ಭೂಮಿಕೆ

" A novel is a fictional piece of prose that is typically written in a narrative style and presented as a bound book. Novels tell stories, which are usually defined as a series of events described in a sequence. The novel has been a part of human culture for over a thousand years, although its origins are somewhat debated. Regardless of how it began, the novel has risen to prominence and remained one of the most popular and treasured examples of human culture and writing. Its form and presentation tends to change with the times, but it remains an essential part of the literary cultures of nearly all societies around the world".

ಹಿನ್ನೆಲೆ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾದಂಬರಿಗೆ ವಿಶಿಷ್ಟವಾದ ಸ್ಥಾನವಿದೆ. ಆಧುನಿಕ ಯುಗದಲ್ಲಿ ಅತ್ಯಂತ ಜನಪ್ರಿಯವಾದ ಪ್ರಕಾರ ಇದು. ಕಾದಂಬರಿ ಕಲ್ಪನೆಯ ಒಂದು ಸಾಕಾರ ರೂಪ ಎಂದು ಹೇಳಬಹುದು. ಕಲ್ಪನೆಯನ್ನು ಬದುಕಿನ ವಾಸ್ತವತೆ ಮತ್ತು ವೈವಿಧ್ಯತೆಗಳೊಡನೆ ಎರಕ ಹೊಯ್ದು ಆದರ್ಶದ ಅರಿವಿನಲ್ಲಿ ಅಭಿವ್ಯಕ್ತಿ ಮಾಡುವುದರಿಂದ ಇತರ ಕಲಾ ಪ್ರಕಾರಗಳಿಗಿಂತ ಸಾಮಾಜಿಕ ಅವಶ್ಯಕತೆಯನ್ನು ಪೂರೈಸುವ ಗುರಿ ಕಾದಂಬರಿಗಳಲ್ಲಿ ಸಾರ್ಥಕವಾಗಿದೆ. ಈ ಪ್ರಕಾರವು ಅವತರಿಸಿ ಕೇವಲ ಒಂದು ಶತಕವಷ್ಟೇ ಆಗಿದ್ದರೂ ಇದು ಗಳಿಸಿರುವ ಮನ್ನಣೆ ಅದರ ನೆಲೆ ಬೆಲೆಗಳನ್ನು ತೋರಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಅತ್ಯಂತ ವೈವಿಧ್ಯಮಯವಾದ ವಿಭಿನ್ನ ರೀತಿಯ ವಸ್ತು ಮತ್ತು ತಂತ್ರಗಳನ್ನು ಉಳ್ಳದ್ದು ಕಾದಂಬರಿ. ಸಂಸ್ಕೃತದಲ್ಲಿ ಬಾಣಭಟ್ಟನು ಬರೆದ ಸುಧೀರ್ಘವಾದ ಗದ್ಯ ಕಥೆಯ ಹೆಸರಾದ ಕಾದಂಬರಿ ನಾವೆಲ್‌ಗೆ ಸಂವಾದಿಯಾಗಿ ಬಳಕೆಯಾಗಿದೆ. ನಾವೆಲ್ ಎಂಬ ಪದವೂ ಇಟಾಲಿಯನ್ ಭಾಷೆಯ "ಹೊಸದು" ಎಂಬ ಅರ್ಥದ ನಾವೆಲ್ಲಾದಿಂದ ಬಂದದ್ದು.

ಹಲವು ಅವಸ್ಥೆಗಳನ್ನು ದಾಟಿ ಬಂದಂತಹ ಕಾದಂಬರಿಗೆ ವ್ಯಾಪಕವಾದ ಹಿನ್ನೆಲೆ ಇದೆ. ಕಾವ್ಯ, ನಾಟಕಕ್ಕಿಂತ ಹೆಚ್ಚು ಜನಪ್ರಿಯತೆಯನ್ನು, ಹೆಚ್ಚು ಓದುಗರನ್ನು ಕಾದಂಬರಿ ಪಡೆದುಕೊಂಡಿದೆ. ಕಾವ್ಯದಂತೆ ಕಾದಂಬರಿಯನ್ನು ಆಸ್ವಾದಿಸುವುದು ಸಾಧ್ಯವಿಲ್ಲ ಏಕೆಂದರೆ ಕಾವ್ಯದ ಒಂದು ಕೃತಿಯನ್ನು ಹತ್ತು ಜನ ಒಟ್ಟಿಗೆ ಆಸ್ವಾದಿಸಲು ಸಾಧ್ಯ. ಆದರೆ ಕಾದಂಬರಿ ಸ್ವಂತ ಓದಾಗಿದೆ. ಮುದ್ರಣಕಲೆ ಬೆಳೆದ ಮೇಲೆ ಕಾದಂಬರಿಗಳು ಹೆಚ್ಚು ಪ್ರಚಾರ ಪಡೆಯಿತೆಂದು ಹೇಳಬಹುದು.

ಹತ್ತೊಂಬತ್ತನೆಯ ಶತಮಾನ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಪರಿವರ್ತನೆಯನ್ನು , ಪ್ರಬುದ್ಧತೆಯನ್ನು ನೀಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ಸೃಷ್ಟಿಕಾರ್ಯ ನಡೆಯುತ್ತಿದ್ದರೂ ಭಾವ- ಭಾಷೆಗಳಲ್ಲಿ, ಆಲೋಚನೆಯ ಕ್ರಮದಲ್ಲಿ ಹೊಸತನವನ್ನು ತಂದುಕೊಟ್ಟಿದೆ. ಬ್ರಿಟಿಷರ ಆಳ್ವಿಕೆಗೆ ಒಳಗಾಗಿದ್ದ ಭಾರತದಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಮಿಷನರಿಗಳು ಕೈಗೊಂಡ ಸಾಹಿತ್ಯಕಾರ್ಯ ಹಾಗೂ ಆಡಳಿತದ ಅನುಕೂಲಕ್ಕಾಗಿ ಬ್ರಿಟಿಷ್ ಅಧಿಕಾರಿಗಳು ಕೈಗೊಂಡ ಮಹತ್ತರ ಕಾರ್ಯಗಳು ಸಾಹಿತ್ಯಾಭಿವೃದ್ಧಿಯ ಹೊಸತನಕ್ಕೆ ನಾಂದಿ ಹಾಡಿತು. ಆಂಗ್ಲಭಾಷಾ ಸಾಹಿತ್ಯ ಪ್ರೇರಣೆಯಿಂದ ಭಾರತೀಯ ಭಾಷಾ ಸಾಹಿತ್ಯಗಳಲ್ಲೆಲ್ಲಾ ಹೊಸ ಆಲೋಚನೆ, ಹೊಸನಡೆ ಕಂಡುಕೊಂಡವು. ಕನ್ನಡದಲ್ಲಿ ಅದುವರೆಗೂ ಹುಲುಸಾಗಿ ಬೆಳೆದಿದ್ದ ಕಾವ್ಯಕ್ಕೆ ಮತ್ತಷ್ಟು ಹರವು ಭಾವಗೀತೆ ಪ್ರಕಾರವು ಕಂಡುಕೊಳ್ಳುವುದರ ಮೂಲಕ ಆಯಿತು. ಹಾಗೆಯೇ ಗದ್ಯದಲ್ಲಿ ಇಂಗ್ಲಿಷ್‌ನಿಂದ ಪ್ರೇರಿತವಾದ ಸಣ್ಣಕತೆ, ಕಾದಂಬರಿ, ಪಬಂಧ, ಪ್ರವಾಸಕಥನ, ನಾಟಕ ಹೀಗೆ ಹಲವು ಪ್ರಕಾರಗಳಲ್ಲಿ ಕನ್ನಡದ ಬರವಣಿಗೆ ಸಾಗಿತು. ಹತ್ತೊಂಬತ್ತನೆಯ ಶತಮಾನ ಒಂದು ಮುಖ್ಯ ಘಟ್ಟ ಎಂದೇ ಹೇಳ ಬಹುದು. ಕಾದಂಬರಿ ಕಥೆಯ ಗಾತ್ರದ ಹಿರಿಯ ಪ್ರಮಾಣವಾಗಿದ್ದು ಒಂದು ಇಡೀ ಬದುಕನ್ನೇ ಹೇಳುತ್ತದೆ.

ಕಥೆ ಎಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ ಚಿಕ್ಕವರಿಂದ ಮುದುಕರವರೆಗೂ ಎಲ್ಲರಿಗೂ ಕಥೆ ಬೇಕು. ಕಾದಂಬರಿಗಳು ಕಥೆ ಹೇಳುತ್ತವೆ, ಈ ಕಾರಣದಿಂದ ಕಾದಂಬರಿಗಳು ಹೆಚ್ಚು ಜನಪ್ರಿಯತೆಯನ್ನು ಪಡೆಯುತ್ತದೆ. ತನ್ನ ಪರಿಸರದಲ್ಲಿ ಉಂಟಾದ ಬದಲಾವಣೆಗಳಿಗೆ ಸ್ಪಂಧಿಸುತ್ತ ,ವಿಶಿಷ್ಟವಾದ ಬದುಕಿನ ವಿವರಗಳನ್ನು ಓದುಗನ ಮುಂದೆ ತೆರೆದಿಡುತ್ತದೆ. ಈ ಕಾರಣದಿಂದ ಕಾದಂಬರಿಯ ಪ್ರಕಾರವು ಸಾಕಷ್ಟು ಬೆಳವಣಿಗೆಯನ್ನು ಹೊಂದಿ ಹೊಸ ಹೊಸ ದಿಕ್ಕುಗಳಿಗೆ ಚಾಚಿಕೊಂಡಿದೆ. ಕಾದಂಬರಿಗಳು ಹೆಚ್ಚು ಜನಪ್ರಿಯತೆಯನ್ನು, ವ್ಯಾಪಕತೆಯನ್ನು ಪಡೆಯಲು ಮತ್ತೊಂದು ಕಾರಣ ಕಾದಂಬರಿಕಾರ ಸೃಷ್ಟಿಸಿದ ಕಾಲ್ಪನಿಕ ಜಗತ್ತಿನಲ್ಲಿ ಓದುಗನ್ನು ಸ್ವಚ್ಛಂದವಾಗಿ ವಿಹರಿಸುವಂತೆ ಮಾಡುತ್ತದೆ. ಓದುಗ ತನ್ನ ಎಲ್ಲ ನೋವುಗಳನ್ನು ಮರೆತು ಕಾದಂಬರಿಯಲ್ಲಿ ತಲ್ಲೀನನಾಗುತ್ತಾನೆ.

ಕಾದಂಬರಿ ಪ್ರಕಾರವು ಅತ್ಯಂತ ಸ್ವತಂತ್ರ , ಹಾಗೂ ಸ್ವಚ್ಛಂದವಾಗಿ ನಿರ್ಮಾಣಗೊಂಡ ಒಂದು ಸಾಹಿತ್ಯ ಪ್ರಕಾರ ಎಂದರೆ ತಪ್ಪಾಗಲಾರದು. ಕಾದಂಬರಿಯನ್ನು "ಕರತಲ ರಂಗಭೂಮಿ" ಎಂದು ಕರೆಯಲಾಗುತ್ತದೆ. ಕಾದಂಬರಿ ಎಂಬುದು ಘಟನೆಗಳ ಮತ್ತು ಕ್ರಿಯೆಗಳನ್ನು ಅನುಭವಿಸಿ ಮಾಡಿದ ಸಂಗತಿಗಳಾಗಿವೆ. ಕಾದಂಬರಿಯಲ್ಲಿ ಪಾತ್ರಗಳ ಸಂಭಾಷಣೆ, ಭಾಷಾಶೈಲಿ , ಜೀವನದ ಬಗೆಗಿನ ದೃಷ್ಟಿಕೋನ ಹಾಗೂ ಬದುಕಿನ ಕೆಲವು ಸಮಸ್ಯೆಗಳು ಪ್ರಮುಖವಾದ ಅಂಶವಾಗಿದೆ. ಕಾದಂಬರಿಗಳು ಕಥೆಯನ್ನು ಹೇಳುತ್ತವೆ.

ಈ ಕಥೆಯನ್ನು ಹೇಳಲು ಅಗತ್ಯವಾದ ಸಾಧನಗಳೆಂದರೆ ಘಟನೆಗಳು ಮತ್ತು ಪಾತ್ರಗಳು. ನವಿರಾದ ನಿರೂಪಣೆ ಮತ್ತು ವಸ್ತುವನ್ನು ಪರಿಣಾಮಕಾರಿಯಾಗಿ ಹೇಳಬಲ್ಲ ಶಕ್ತಿ ಲೇಖಕನಿಗಿದ್ದರೆ ಅದೊಂದು ಉತ್ತಮ ಕಾದಂಬರಿ ಎನಿಸುತ್ತದೆ.

ಕಾದಂಬರಿ ಎಂದರೆ ಹೆಂಡ, ಮದ್ಯ ಎಂದರ್ಥ, ಅದರ ಕುಡಿತವು ಹೇಗೆ ಮೈಮರೆಸುತ್ತದೆಯೋ ಹಾಗೆಯೇ ಕಾದಂಬರಿಯೂ ಮೈ ಮರೆಸುವುದರಿಂದ ಈ ಸಾಹಿತ್ಯ ಪ್ರಕಾರಕ್ಕೆ ಈ ಹೆಸರು ಸೂಕ್ತವಾಗಿ ಹೊಂದಿಕೆಯಾಗುತ್ತದೆ ಎನ್ನುತ್ತಾರೆ – ತ. ಸು.ಶಾಮರಾಯರು.* ಇವರ ಮಾತಿನಂತೆ ಹೆಂಡದ ಚಟ ಹತ್ತಿದವನು ಹೇಗೆ ಅದನ್ನು ಬಿಡಲು ಆಗುವುದಿಲ್ಲವೋ ಹಾಗೆ ಕಾದಂಬರಿ ಓದುವ ಚಟಬಿಡುವುದು ಅಸಾಧ್ಯ ಎಂಬುದು ನನ್ನ ಅನಿಸಿಕೆ. ಜೊತೆಗೆ ಆ ಓದು ನಮ್ಮನ್ನು ಮೈ ಮರೆಯುವಂತೆ ಮಾಡುತ್ತದೆ. ಐತಿಹಾಸಿಕ, ಸಾಮಾಜಿಕ, ವಾಸ್ತವಿಕ, ಪೌರಾಣಿಕ, ಮನೋವಿಶ್ಲೇಷಣಾತ್ಮಕ, ಪತ್ತೇದಾರಿ ಹೀಗೆ ಕಾದಂಬರಿಗಳಲ್ಲಿ ಹಲವು ರೀತಿಗಳನ್ನು ಕಾಣಬಹುದಾಗಿದೆ.

ಹದಿನೆಂಟನೆಯ ಶತಮಾನದಲ್ಲಿಯೇ ಕನ್ನಡದಲ್ಲಿ ಗದ್ಯ ಪ್ರಕಾರವು ಬೆಳೆಯ ತೊಡಗಿತ್ತು, ಪಾಶ್ಚಾತ್ಯ ಕಾದಂಬರಿಗಳು ಪ್ರಭಾವ ಬೀರುವುದಕ್ಕೆ ಮೊದಲೇ ಕಾದಂಬರಿ ಎಂದು ಹೇಳ ಬಹುದಾದ ಸ್ವತಂತ್ರ ಕೃತಿಗಳು ಕನ್ನಡದಲ್ಲಿ ರಚಿತವಾಗಿದ್ದವು. ಯಾದವನ "ಕಲಾವತೀ ಪರಿಣಯ"(೧೮೧೫), ಮುಮ್ಮಡಿಕೃಷ್ಣದೇವರಾಜರ "ಸೌಗಂಧಿಕಾ ಪರಿಣಯ" (೧೮೨೧) ಮತ್ತು ಕೆಂಪುನಾರಾಯಣನ "ಮುದ್ರಾಮಂಜೂಷ"(೧೮೨೩) – ಈ ಅದ್ಭುತ ಗದ್ಯ ಕಥಾನಕಗಳು ಕಾದಂಬರಿಯ ಮೊದಲನೆಯ ಸೋಪಾನವೆಂದೇ ಹೇಳಬಹುದಾಗಿದೆ. ಇಂಗ್ಲಿಷಿನ ಸಂಪರ್ಕ , ಗಂಧವೂ ತಿಳಿಯದ ಕಾಲದಲ್ಲಿ ರಚಿತವಾದ ಸ್ವತಂತ್ರ, ಸತ್ವಪೂರ್ಣ ಕೃತಿಗಳಿವು.

ಇಂಗ್ಲಿಷಿನ ಜಾನ್ ಬನ್‌ಯನ್ ಬರೆದ "ಪಿಲಿಗ್ರಿಮ್ಸ್ ಪ್ರೋಗ್ರೆಸ್" – "ಯಾತ್ರಿಕನ ಪ್ರವಾಸ" ಎಂಬ ಹೆಸರಿನಲ್ಲಿ (೧೮೪೭) ರಲ್ಲಿ ಕನ್ನಡದಲ್ಲಿ ಪ್ರಕಟವಾಯಿತು. ೧೮೯೭ ರಲ್ಲಿ "ಸ್ಯಾಂಟ್ ಫರ್ಡ ಅಂಡ್ ಮರ್ಟನ್" ನ ಅನುವಾದವನ್ನು ಪುಟ್ಟಣ್ಣನವರು ಪ್ರಕಟಿಸಿದರು.

---

*ಕನ್ನಡ ಸಾಹಿತ್ಯ ಚರಿತ್ರೆ ಪುಟ ೨೧೭

ಈ ನಡುವೆ ಡ್ಯಾನಿಯಲ್ ಡಿಫೋನ್ "ರಾಬಿನ್ಸನ್ ಕ್ರೂಸೋ" ಮತ್ತು ೧೮೬೯ರಲ್ಲಿ ಮರಾಠಿ ಕಾದಂಬರಿ"ಯಮುನಾ ಪರ್ಯಟನ"ದ ಅನುವಾದ ಪ್ರಕಟಗೊಂಡವು. ಭಾರತೀಯ ಭಾಷೆಯಿಂದ ಅನುವಾದಗೊಂಡ ಮೊಟ್ಟ ಮೊದಲ ಅನುವಾದ ಇದು. ೧೯ನೇ ಶತಮಾನದ ಕಟ್ಟಕಡೆಯ ಭಾಗದಲ್ಲಿ ತೆಲುಗು ಕಾದಂಬರಿಗಳ ಅನುವಾದವೂ ಕಾಣಿಸಿಕೊಂಡವು.

ಬಂಗಾಳಿ ಕಾದಂಬರಿಗಳ ಭಾಷಾಂತರದ ಮೂಲಕ ಕನ್ನಡಿಗರಿಗೆ ಕಾದಂಬರಿಗಳನ್ನು ಮೊದಲ ಬಾರಿಗೆ ಪರಿಚಯಿಸಲಾಯಿತು. ಬಿ. ವೆಂಕಟಾಚಾರ್ಯರು ೧೮೮೫ರಲ್ಲಿ ಬಂಕಿಮಚಂದ್ರರ "ದುರ್ಗೇಶನಂದಿನಿ"ಯನ್ನು ಕನ್ನಡಕ್ಕೆ ಅನುವಾದಿಸಿದರು. ಅದರ ಮುನ್ನುಡಿಯಲ್ಲಿ ಮೊದಲ ಬಾರಿಗೆ "ನಾವೆಲ್" ಪದವನ್ನು ಬಳಸಿದರು. ತಮ್ಮ ಮೊದಲ ಅನುವಾದ ಕೃತಿಯಾದ "ಭ್ರಾಂತಿವಿಲಾಸ"ದ ಮೂಲಕ ವೆಂಕಟಾಚಾರ್ಯರು ಕಾದಂಬರಿಗಳ ಆರಂಭಕ್ಕೆ ನಾಂದಿ ಹಾಡಿದರು. ಅಂದಿನಿಂದ ಇಂದಿನವರೆಗೂ ಕಾದಂಬರಿ ಪ್ರಕಾರದ ಬೆಳವಣಿಗೆಯನ್ನು ಮೂರು ಹಂತದಲ್ಲಿ ಗುರುತಿಸ ಬಹುದು.

೧) ಆರಂಭಕಾಲ : ೧೯ನೇ ಶತಮಾನದ ಉತ್ತರಾರ್ಧದಿಂದ
೨೦ನೇ ಶತಮಾನದ ಕಾಲು ಶತಕ

೨) ನಿರ್ಮಾಣಶೀಲಯುಗ : ಸುಮಾರು ೧೯೨೫ರಿಂದ ಸ್ವಾತಂತ್ರದವರೆಗೆ

೩) ಸ್ವಾತಂತ್ರೋತ್ತರ ಯುಗ : ಸ್ವಾತಂತ್ರಾನಂತರದಿಂದ ಇಂದಿನವರೆಗೆ

೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯರು ಬರೆದ "ಇಂದಿರಾಬಾಯಿ" ಅಥವ "ಸದ್ಧರ್ಮ ವಿಜಯು" ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿಯಾಗಿದೆ. ೧೯೦೫ರಲ್ಲಿ ಬಂದ ಬೋಳಾರ ಬಾಬೂರಾಯರ "ವಾಗ್ದೇವಿ" ಅಂದಿನ ಸಮಾಜದ ವಾಸ್ತವಿಕ ಚಿತ್ರಣವನ್ನು ನೀಡುತ್ತದೆ. ೧೯೦೮ರಲ್ಲಿ ಬಂದ ಕೃತಿ ಕೆರೂರು ವಾಸುದೇವಾಚಾರ್ಯರ "ಇಂದಿರೆ" ಉತ್ತರ ಕನ್ನಡ ಬಾಷೆಯನ್ನು ಬಳಸಿಕೊಂಡಿರುವ ಮತ್ತೊಂದು ಸ್ವತಂತ್ರ ಸಾಮಾಜಿಕ ಕಾದಂಬರಿಯಾಗಿದೆ. ವಿಧವಾ ವಿವಾಹ, ಸ್ತ್ರೀಶಿಕ್ಷಣ ಮತ್ತು ಸ್ತ್ರೀ ಸ್ವಾತಂತ್ರ್ಯದಂತಹ ವಿಚಾರಗಳನ್ನು ಪ್ರಸ್ತಾಪಿಸಿರುವ ಗಮನಾರ್ಹ ಕೃತಿಗಳು ಇದಾಗಿದೆ.

ಗಳಗನಾಥರು ಪ್ರಮುಖ ಕಾದಂಬರಿಕಾರರ ಸಾಲಿಗೆ ಸೇರಿದವರು. ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾತ್ರವಲ್ಲದೆ , ಸ್ವತಂತ್ರ ಕೃತಿಗಳ ರಚನೆಯಲ್ಲೂ ತೊಡಗಿದರು. "ಕಮಲಕುಮಾರಿ" (ಅನುವಾದ), "ಮಾಧವ ಕರುಣಾ ವಿಲಾಸ", "ಕನ್ನಡಿಗರ ಕರ್ಮಕಥೆ", "ಈಶ್ವರೀ ಸೂತ್ರ", "ಧಾರ್ಮಿಕತೇಜ", "ಕ್ಷಾತ್ರತೇಜ" ಹೀಗೆ ೨೦ಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದರು. ಇದರಲ್ಲಿ ಹೆಚ್ಚು ಐತಿಹಾಸಿಕ ಕಾದಂಬರಿಗಳಾಗಿವೆ.

ಇದೇ ಕಾಲದಲ್ಲಿ ಪತ್ತೇದಾರಿ ಕಾದಂಬರಿಗಳೂ ಹುಟ್ಟಿಕೊಂಡವು. ಜೊತೆಗೆ ತಿರುಮಲಮ್ಮನವರ "ವಿದ್ಯುಲ್ಲತಾ ವಿರಾಗಿಣಿ, "ನಭ", "ಪೂರ್ಣಕಲಾ" ಮುಂತಾದ ಸ್ತ್ರೀಯರ ಸಾಮಾಜಿಕ ಸ್ಥಾನಮಾನದ ವಿಷಯಗಳ ಬಗ್ಗೆ ಕಾದಂಬರಿಗಳನ್ನು ರಚಿಸಿದರು.

ಎಂ. ಎಸ್. ಪುಟ್ಟಣ್ಣ ಕನ್ನಡ ಕಾದಂಬರಿಯ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದರಷ್ಟೇ ಅಲ್ಲದೆ, ಷೇಕ್ಸ್‌ಪಿಯರ್‌ನ ಎರಡೂ ನಾಟಕಗಳನ್ನು, ಮತ್ತಿತರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು. ಕಾದಂಬರಿಯ ಕ್ಷೇತ್ರದಲ್ಲಿ ಎಂ. ಎಸ್. ಪುಟ್ಟಣ್ಣನವರದ್ದು ಪ್ರಮುಖ ಪಾತ್ರ. ‘ಮಾಡಿದುಣ್ಣೋ ಮಹಾರಾಯ’, ‘ಮುಸುಕು ತೆಗೆಯೆ ಮಾಯಾಂಗನೆ’, ಕಾದಂಬರಿಗಳಲ್ಲಿನ ಕಥನ ಶೈಲಿ ಮತ್ತು ಭಾಷೆಯ ಬಳಕೆ, ಸನ್ನಿವೇಶ ಸೃಷ್ಟಿ ಗಮನಾರ್ಹವಾಗಿದೆ.

೧೯೩೦ರ ನಂತರದ ಕಾದಂಬರಿಗಳ ನಿರ್ಮಾಣದಲ್ಲಿ ಕಾದಂಬರಿಗಳ ರೂಪು ರೇಷೆಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ವಸ್ತು , ಶೈಲಿ, ತಂತ್ರ, ನಿರೂಪಣಾ ವಿಧಾನದಲ್ಲಿ ಆಧುನಿಕತೆಯ ಲಕ್ಷಣಗಳು ಮೂಡತೊಡಗಿದವು. ಈ ಕಾಲಕ್ಕೆ ನಿರ್ಮಾಣಶೀಲಯುಗ" ಎಂದು ಹೆಸರು ಬರಲು ಇದೇ ಕಾರಣ. ಕುವೆಂಪು, ಕಾರಂತರು, ಅ.ನ.ಕೃ, ಆನಂದಕಂದ, ರಂ.ಶ್ರೀ. ಮುಗಳಿ, ಶ್ರೀರಂಗರು, ಕಡಂಗೊಡ್ಲು ಶಂಕರಭಟ್ಟರು, ದೇವುಡು, ಮಿರ್ಜಿ ಅಣ್ಣಾರಾಯ ಮೊದಲಾದವರು ಈ ಕಾಲದ ಪ್ರಮುಖ ಕಾದಂಬರಿಕಾರರು.

ಕುವೆಂಪುರವರ "ಕಾನೂರು ಸುಬ್ಬಮ್ಮ ಹೆಗ್ಗಡತಿ","ಮಲೆಗಳಲ್ಲಿ ಮದುಮಗಳು",ಕನ್ನಡದ ಎರಡು ಬೃಹತ್ ಹಾಗೂ ಮಹಾನ್ ಕಾದಂಬರಿಗಳಾಗಿವೆ. ಭಾಷೆಯ ದೃಷ್ಟಿಯಿಂದ ಇವು ಕನ್ನಡ ಗದ್ಯ ಶೈಲಿಯ ಶ್ರೀಮಂತ ಪ್ರತಿನಿಧಿಗಳು ಎಂದು ಹೇಳಬಹುದು. ಈ ಕೃತಿಗಳು ಪ್ರಕಟವಾದ ಎರಡು ದಶಕಗಳ ಕಾಲ ಉತ್ಸಾಹದ ಪ್ರಶಂಸೆ ಪಡೆದು ಈಚೆಗೆ ತೀಕ್ಷ್ಣವಾದ ವಿಮರ್ಶೆಗೆ ಒಳಗಾದ ಕಾದಂಬರಿಗಳಾಗಿವೆ. ಕನ್ನಡದಲ್ಲಿ ಹೆಚ್ಚು ಸ್ವಾರಸ್ಯಕರವಾದ, ಗಣನೀಯವಾದ ಕೃತಿ ಎಂಬ ಮಾತೂ ಇದೆ.

ಹೆಗ್ಗಡತಿ ಕೃತಿ ಬಂದ ಸುಮಾರು ಇಪ್ಪತ್ತು ವರ್ಷಗಳ ನಂತರ ಬಂದ ಕೃತಿ ಮದುಮಗಳು. ಇಲ್ಲಿ ಯಾರೂ ಮುಖ್ಯರಲ್ಲ ,ಯಾರೂ ಅಮುಖ್ಯರಲ್ಲ, ಯಾರೂ ಯಃಕಶ್ಚಿತರಲ್ಲ ಎಂದಿದ್ದಾರೆ ಕುವೆಂಪು. ಮತ್ತೆ ಇಲ್ಲಿ ಮಲೆನಾಡು ಜೀವಂತವಾಗುತ್ತದೆ. ಹೆಗ್ಗಡತಿಯಲ್ಲಿ ಬರುವಂತೆ ಯಾವ ಪ್ರಧಾನ ಪಾತ್ರವಿಲ್ಲದಿರುವುದರಿಂದ ಸಮಸ್ತ ಜಗತ್ತಿನ ಅಂತರಂಗ ಬಹಿರಂಗಗಳೆಲ್ಲ ಅನಾವರಣವಾಗುತ್ತದೆ, ಒಂದು ವಿಶ್ವಶಕ್ತಿ ಈ ಜಗತ್ತಿನಲ್ಲಿ ವ್ಯಾಪಿಸಿರುವಂತೆ ಭಾಸವಾಗುತ್ತದೆ. ಜೊತೆಗೆ ಹೆಗ್ಗಡತಿಯಲ್ಲಿ ಸಂಕೇತಗಳನ್ನು ಬಳಸಿದರೆ ಮದುಮಗಳು ಕೃತಿಯಲ್ಲಿ ಒಂದು ವಿಶಿಷ್ಟ ಜಗತ್ತನ್ನೇ ಸೃಷ್ಟಿಸಿದ್ದಾರೆ.

ಶಿವರಾಮ ಕಾರಂತರು ಸುಮಾರು ೩೮ ಕಾದಂಬರಿಗಳನ್ನು ಬರೆದಿದ್ದಾರೆ.ಅಗಾಧವಾದ ಜೀವನ ಶ್ರದ್ಧೆ ಅವರದ್ದು. ಅತೀ ಭಾವುಕತೆಗೆ ಎಡೆಕೊಡದೆ ರಚನೆಯನ್ನು ಕೈಗೊಂಡವರು. ಇವರು ಎಂದೂ ತಂತ್ರದ ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಆದರೆ ಒಂದೊಂದು ಕಾದಂಬರಿಯಲ್ಲೂ ಒಂದೊಂದು ಹೊಸ ತಂತ್ರವನ್ನು ಬಳಸಿದ್ದಾರೆ. ಕಾರಂತರ ಪ್ರಭಾವ ಕನ್ನಡ ಕಾದಂಬರಿಯಲ್ಲಿ ಮಿತವಾದದ್ದು, ಇದಕ್ಕೆ ಕಾರಣ ಅವರ ಮಾರ್ಗ ಕಷ್ಟ ಎಂಬುದು. ಆದರೂ ಬಲ್ಲಾಳರು, ಅನಂತಮೂರ್ತಿ, ಬೈರಪ್ಪ ಇವರುಗಳು ಕಾರಂತರ ಹಾದಿಯಲ್ಲಿ ಹೆಜ್ಜೆಹಾಕಿದ್ದಾರೆ. ಶಿವರಾಮ ಕಾರಂತರ "ದೇವದೂತರು" (೧೯೨೮) ಇದು ಅವರ ಮೊದಲ ಮಹತ್ವದ ಕೃತಿಯಗಿದೆ. ಅವರ "ಚೋಮನದುಡಿ" ಸಾಮಾಜಿಕ ಕಾಳಜಿಯಿಂದ ಕೂಡಿದ ಶೋಷಣೆಗೆ ಒಳಗಾದ ದಲಿತನೊಬ್ಬನ ಜೀವನ ಚಿತ್ರಣವನ್ನು ನೀಡುತ್ತದೆ. "ಮರಳಿ ಮಣ್ಣಿಗೆ" ಕನ್ನಡದ ಮಹಾನ್ ಕಾದಂಬರಿಗಳಲ್ಲಿ ಒಂದು. "ಮೈಮನಗಳ ಸುಳಿಯಲ್ಲಿ", "ಮುಗಿಯದ ಯುದ್ಧ",ಕುಡಿಯರ ಕೂಸು", ಮೂಕಜ್ಜಿಯ ಕನಸುಗಳು ಹೊಸ ದೃಷ್ಟಿಕೋನವನ್ನು ಹೊಂದಿದ ಮಹತ್ವದ ಕೃತಿಗಳಾಗಿವೆ.

"ಸಂಧ್ಯಾರಾಗ" ಕಾದಂಬರಿಯಿಂದ ಪ್ರಸಿದ್ಧರಾದಂತಹ ಅ.ನ.ಕೃಷ್ಣರಾಯರು ಕನ್ನಡದಲ್ಲಿ ಅತೀ ಹೆಚ್ಚು ಕಾದಂಬರಿಗಳನ್ನು ರಚಿಸಿ " ಕಾದಂಬರಿ ಸಾರ್ವಭೌಮ" ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪ್ರಗತಿಶೀಲಯುಗ ಅನುಸರಿಸಿದವರಲ್ಲಿ ತ.ರಾ.ಸುಬ್ಬರಾಯರು, ಬಸವರಾಜ ಕಟ್ಟೀಮನಿ, ನಿರಂಜನ ಮತ್ತು ಚದುರಂಗರು ಪ್ರಮುಖರು. ಝೋಲಾ, ಗಾರ್ಕಿ,ಅವರನ್ನು ಮಾದರಿಯಾಗಿ ಹೊಂದಿದ ಇವರು ಭಿನ್ನವಾಗಿ ಬರೆಯ ತೊಡಗಿದರು. ಜೀವನದ ಸುಖ-ದು:ಖಗಳನ್ನು ರೊಚ್ಚುತುಂಬಿದ ಶೈಲಿಯಲ್ಲಿ ಚಿತ್ರಿಸಿದರು. ಪ್ರಜ್ಞಾಪ್ರವಾಹ ತಂತ್ರವನ್ನು ಮೊದಲ ಬಾರಿಗೆ ಕನ್ನಡದಲ್ಲಿ ತಂದವರು ತ.ರಾ.ಸುಬ್ಬರಾಯರು.

ಪ್ರಗತಿಶೀಲರು ಸಂಕೀರ್ಣವಾದ ಬದುಕನ್ನು ಒಟ್ಟಾರೆಯಾಗಿ ಗ್ರಹಿಸದೆ ಹೋದರು, ಬಿಳುಪನ್ನು ಬಿಳುಪಾಗಿಯೂ, ಕಪ್ಪನ್ನು ಕಪ್ಪಾಗಿಯೂ ಚಿತ್ರಿಸುತ್ತಾ ನಡೆದರು. ನಿರಂಜನರು ನಿರ್ದಿಷ್ಟ ಸಾಮಾಜಿಕ ಧೋರಣೆ, ವರ್ಗ ಸಂಘರ್ಷವನ್ನು ಸಾಹಿತ್ಯದ ಬೆನ್ನೆಲುಬಾಗಿಸಿಕೊಂಡು ಕೃತಿ ರಚನೆಯನ್ನು ಮಾಡಿದರು. ನಿರಂಜನರ "ಚಿರಸ್ಮರಣೆ" ಕನ್ನಡ ಕಾದಂಬರಿ ಚರಿತ್ರೆಯಲ್ಲಿ ಮುಖ್ಯ ಸ್ಥಾನವನ್ನು ಪಡೆಯುತ್ತದೆ.

ಮಾಸ್ತಿಯವರು ಎರಡು ವಿಶಿಷ್ಟವಾದ ಐತಿಹಾಸಿಕ ಕಾದಂಬರಿಗಳನ್ನು ನೀಡಿದ್ದಾರೆ. ಅವುಗಳೆಂದರೆ ಚಿಕವೀರರಾಜೇಂದ್ರ, ಚೆನ್ನಬಸವನಾಯಕ. ಇವು ಕೇವಲ ಐತಿಹಾಸಿಕ ಕಾದಂಬರಿಗಳಾಗಿರದೆ ಇತಿಹಾಸಕ್ಕೆ ಹತ್ತಿರವಾಗಿದ್ದೂ ಕೂಡ ಅಂದಿನ ಜನತೆಯ ಜೀವನ ಸಂಸ್ಕೃತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಚದುರಂಗರನ್ನು ಪ್ರಗತಿಶೀಲರೆಂದು ಗುರುತಿಸಲಾದರೂ ಮಾಸ್ತಿಯವರ ಪ್ರಭಾವ ಅವರ ಬರಹದಲ್ಲಿ ಕಾಣಬಹುದಾಗಿದೆ. ಕನ್ನಡ ಕಾದಂಬರಿಯ ಎಲ್ಲಾ ಮುಖ್ಯ ಪ್ರವಾಹದೊಂದಿಗೆ ಸಂಬಂಧ ಹೊಂದಿದ್ದಾರೆ. ಇವರು ಬರೆದ ಮೂರು ಕಾದಂಬರಿಗಳು ಅತ್ಯಂತ ಪ್ರಾತಿನಿಧಿಕ ಕಾದಂಬರಿಗಳೆನಿಸಿವೆ. ಅವುಗಳೆಂದರೆ "ಸರ್ವಮಂಗಳ", "ಉಯ್ಯಾಲೆ", ಮತ್ತು"ವೈಶಾಖ "ಗಳಾಗಿವೆ.

ಮೂವತ್ತರ ದಶಕದಲ್ಲಿ ಶ್ರೀರಂಗರು "ವಿಶ್ವಾಮಿತ್ರಸೃಷ್ಟಿ" ಮತ್ತು "ಪುರುಷಾರ್ಥ" ಎಂಬ ಎರಡು ಗಮನಾರ್ಹ ಕಾದಂಬರಿಗಳನ್ನು ನೀಡಿದರು. ಪ್ರಜ್ಞೆಯ ಕೇಂದ್ರದಲ್ಲಿ ಓದುಗರನ್ನು ತಂದು ನಿಲ್ಲಿಸಿದ ಕಾದಂಬರಿಗಳಿವು. ದೇವುಡುರವರ "ಅಂತರಂಗ" ಮಾನಸಿಕ ಹೊಯ್ದಾಟವನ್ನು ಚಿತ್ರಿಸುವ ಪ್ರಥಮ ಮನೋವಿಶ್ಲೇಷಣಾತ್ಮಕ ಕೃತಿಯಾಗಿದೆ. ಮಿರ್ಜಿ ಅಣ್ಣಾರಾಯರ "ನಿಸರ್ಗ" ಕೃತಿಯಲ್ಲಿ ಹೆಣ್ಣು-ಗಂಡುಗಳ ವಿಫಲ ಪ್ರಣಯದ ದುರಂತ, ಆಡುಮಾತಿನ ಶೈಲಿಯಲ್ಲಿ ಸುಂದರವಾಗಿ ಮೂಡಿದೆ.

ಸ್ವತಂತ್ರಾನಂತರದ ಅವಧಿಯಲ್ಲಿ ಕಾದಂಬರಿಗಳ ರಚನೆ ಗಣನೀಯವಾಗಿ ಬಂದವು. ಕಾದಂಬರಿಯ ಹರವೂ ಕೂಡ ಹೆಚ್ಚಾಯಿತು. ವಸ್ತು , ಶೈಲಿ, ತಂತ್ರ, ನಿರೂಪಣಾ ವಿಧಾನದಲ್ಲಿ ವೈವಿಧ್ಯತೆ ಉಂಟಾಯಿತು. ಕಾರಂತರ "ಔದಾರ್ಯದ ಉರುಳಲ್ಲಿ", ತ.ರಾ.ಸುರವರ "ರಕ್ತತರ್ಪಣ", ಕಟ್ಟೀಮನಿಯವರ "ಮಾಡಿಮಡಿದವರು", ನಿರಂಜನರ "ಚಿರಸ್ಮರಣೆ", ಇನಾಂದರರ "ಮೂರಾಬಟ್ಟೆ" ಸ್ವಾತಂತ್ರ್ಯ ಚಳುವಳಿಯ ಚಿತ್ರಣವನ್ನು ನೀಡುತ್ತವೆ.

ಪೌರಾಣಿಕ ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟವರಲ್ಲಿ ದೇವುಡು ಅಗ್ರಗಣ್ಯರು. ಇವರ "ಮಹಾಬ್ರಾಹ್ಮಣ" "ಮಹಾಕ್ಷತ್ರಿಯ", ಮತ್ತು "ಮಹಾದರ್ಶನ" ಉತ್ತಮ ಕಾದಂಬರಿಗಳೆನಿಸಿವೆ.

ಗ್ರಾಮೀಣ ಬದುಕಿನ ಚಿತ್ರಣವನ್ನು ನೀಡುವಂತಹ ಕೆಲವು ಪ್ರಮುಖ ಕೃತಿಗಳೆಂದರೆ ಬಸವರಾಜ ಕಟ್ಟೀಮನಿಯವರ "ಮಣ್ಣು ಮತ್ತು ಹೆಣ್ಣು", ಚದುರಂಗರ "ಸರ್ವಮಂಗಳ", ತ.ರಾ.ಸು ರವರ "ಚಂದವಳ್ಳಿಯ ತೋಟ", ರಾವ್ ಬಹದ್ದೂರರ "ಗ್ರಾಮಾಯಣ" ವಿಶಿಷ್ಟ ಹಾಗೂ ಉತ್ಕೃಷ್ಟ ಕೃತಿಗಳಾಗಿವೆ.

ಸ್ವಾತಂತ್ರೋತ್ತರ ಕಾಲದಲ್ಲಿ ಕಾದಂಬರಿಯ ರಚನೆ ಮಾಡಿದ ಪ್ರಮುಖ ರಚನಕಾರ್ತಿಯರೆಂದರೆ ತ್ರಿವೇಣಿ, ಎಂ.ಕೆ. ಇಂದಿರಾ, ವಾಣಿ, ಅನುಪಮಾ ನಿರಂಜನ, ಆರ್ಯಾಂಬ ಪಟ್ಟಾಭಿ, ಗೀತಾ ಕುಲಕರ್ಣಿ, ಎ.ಪಿ.ಮಾಲತಿ, ವೀಣಾಶಾಂತೇಶ್ವರ್ ಪ್ರಮುಖರು.

ಸ್ತ್ರೀಯರು ಹೆಚ್ಚಾಗಿ ಬರೆಯದೇ ಇದ್ದ ಕಾಲದಲ್ಲಿ ಬರೆಯಲು ಪ್ರಾರಂಭಿಸಿದ ತ್ರಿವೇಣಿಯವರು ಕೆಲವೇ ವರ್ಷಗಳಲ್ಲಿ ಅಸಾಧಾರಣ ಜನಪ್ರಿಯತೆಯನ್ನು ಪಡೆದವರು. ಬಹು ಚಿಕ್ಕವಯಸ್ಸಿನಲ್ಲೇ ತೀರಿಕೊಂಡ ಇವರು ೨೦ ಕಾದಂಬರಿಗಳನ್ನು ರಚಿಸಿದ್ದಾರೆ. ಇವರು ಕಾದಂಬರಿಯ ಸೃಷ್ಟಿಯಲ್ಲಿ ಮನಶ್ಶಾಸ್ತ್ರದ ತಿಳುವಳಿಕೆಯನ್ನು ಉದ್ದೇಶ ಪೂರ್ವಕವಾಗಿ ಬಳಸಿಕೊಂಡಿದ್ದಾರೆ. 'ಬೆಕ್ಕಿನಕಣ್ಣು', 'ಶರಪಂಜರ', 'ಹಣ್ಣೆಲೆ ಚಿಗುರಿದಾಗ' ಪ್ರಮುಖ ಕಾದಂಬರಿಗಳಾಗಿವೆ. ಇವರ ಕಾದಂಬರಿಯ ವಸ್ತು ಗಂಡು ಹೆಣ್ಣಿನ ಸಹಜ ಜೀವನವಾಗಿದೆ. ಇವರು ಹೊಸ ಹಾದಿಯನ್ನು ಹಿಡಿದಿದ್ದಾರೆ. ಇವರ ನಂತರ ಕನ್ನಡದಲ್ಲಿ ಬಂದ ಪ್ರಮುಖ ಕಾದಂಬರಿಕಾರ್ತಿ ಎಂದರೆ ಎಂ.ಕೆ ಇಂದಿರಾರವರು. 'ತುಂಗಭದ್ರ' , 'ಗೆಜ್ಜೆಪೂಜೆ' ಮೊದಲಾದ ಕಾದಂಬರಿಗಳನ್ನು ರಚಿಸಿದರು. ಕಥೆಯನ್ನು ಹೇಳುವುದರೊಂದಿಗೆ ಬಾಳ ಅನುಭವಗಳನ್ನು ತೆರೆದಿಟ್ಟರು. ನಿರಾಡಂಬರವಾಗಿ ಆ ಅನುಭವ, ನೋವಿನಲ್ಲಿರುವವರ ವಿಷಯದಲ್ಲಿ ನೈಜತೆಯನ್ನು ಅನುಕಂಪದೊಡನೆ ಪ್ರಕಟಿಸುತ್ತದೆ.

೧೯೫೦ರ ದಶಕದಲ್ಲಿ ನವ್ಯ ಚಳುವಳಿ ಆರಂಭವಾಯಿತು. ನವೋದಯ ಯುಗದ ಆಶಯ ಪೂರಿತ ಧೋರಣೆಗಳು, ಪ್ರಗತಿಶೀಲಯುಗದ ಕೆಚ್ಚೆದೆಯ ಉತ್ಸಾಹ ಅರ್ಥಹೀನವೆನಿಸತೊಡಗಿದವು. ಅಂತಹ ಸಂದರ್ಭದಲ್ಲಿ ಅಡಿಗರು ನವ್ಯ ಚಳುವಳಿಯನ್ನು ಪ್ರಾರಂಭಿಸಿದರು. ಈ ದಿಕ್ಕಿನಲ್ಲಿ ಪ್ರಕಟವಾದ ಮೊದಲ ಕೃತಿ ಶಾಂತಿನಾಥ ದೇಸಾಯಿಯವರ "ಮುಕ್ತಿ" ನವ್ಯ ಮನೋಧರ್ಮವು ಪ್ರತಿಮೆ ಮತ್ತು ಸಂಕೇತಗಳಿಗೆ ಹೆಚ್ಚಿನ ಮಹತ್ವ ನೀಡಿತು. "ಐರನಿ"ಯನ್ನು ಸಮರ್ಥವಾಗಿ ಬಳಸಿಕೊಂಡರು. ಅನುಭವದ ಆಧಾರದ ಮೇಲೆ ಹೊಸ ಮೌಲ್ಯಗಳನ್ನು ಅನ್ವೇಷಣೆ ಮಾಡುವುದು ನವ್ಯ ಕಾದಂಬರಿಯ ಮುಖ್ಯ ಕಾಳಜಿಯಾಯಿತು.

ಪರಕೀಯ ಪ್ರಜ್ಞೆ, ಏಕಾಂಗಿತನ, ರಾಜಕೀಯ ಶಕ್ತಿಗಳಿಂದ ಬಂಡವಾಳಶಾಯಿ ವ್ಯವಸ್ಥೆಯಲ್ಲಿ ಬದುಕುತ್ತಿರುವ ವ್ಯಕ್ತಿಗೆ ಉಂಟಾಗುವ ಅಸ್ವಸ್ಥತೆ ಮತ್ತು ತುಮುಲಗಳ ಅನುಭವ ಚಿತ್ರಣ ನವ್ಯರಲ್ಲಿ ಮತ್ತೆ ಮತ್ತೆ ಕಾಣುತ್ತದೆ. ಲಂಕೇಶರ "ಬಿರುಕು", ತೇಜಸ್ವಿಯವರ 'ಸ್ವರೂಪ' ಮುಂತಾದವು ಇಂತಹ ಚಿತ್ರಣವನ್ನು ನೀಡುತ್ತದೆ.

ನವ್ಯ ಕಾದಂಬರಿಗಳು ವಾಸ್ತವವಾದಿ ಮಾರ್ಗದ ಕಾದಂಬರಿಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಸಂಸ್ಕೃತಿಜನ್ಯ ಮೌಲ್ಯಗಳನ್ನು ಪ್ರಶ್ನೆಗೆ ಗುರಿಪಡಿಸುತ್ತಲೇ, ಹೊಸ ಮೌಲ್ಯಗಳನ್ನು ಸ್ವೀಕರಿಸುವ ನವ್ಯರು ಸಂಸ್ಕೃತಿಯ ಸ್ವರೂಪವನ್ನೇ ಬದಲಾಯಿಸುವ ಯತ್ನ ನಡೆಸಿದರು. ಯು.ಆರ್.ಅನಂತಮೂರ್ತಿಯವರ"ಸಂಸ್ಕಾರ",ಭಾರತೀಪುರ, ಗಿರಿಯವರ "ಗತಿಸ್ಥಿತಿ" ಇತ್ಯಾದಿ ಕಾದಂಬರಿಗಳು ಕಲೆಯ ದೃಷ್ಟಿಯಿಂದ ಇವನ್ನು ಮೀರಿಸುವಂತಹ ಕಾದಂಬರಿಗಳು ಕನ್ನಡದಲ್ಲಿ ಇಲ್ಲ ಎನಿಸುತ್ತದೆ. ತೀರ ಸಮಕಾಲೀನವಾದ ಸಮಸ್ಯೆಗಳನ್ನು ತಮ್ಮ ಕಥೆಯ ವಸ್ತುವಾಗಿ ಬಳಸಿದ್ದಾರೆ. ಇಲ್ಲಿಯ ವರ್ಣನೆ ಹಾಗು ನಿರೂಪಣೆಯಲ್ಲಿ ಪ್ರತಿಸೃಷ್ಟಿಯನ್ನೇ ಸಾಧಿಸಿದಂತಿದೆ.

ನವ್ಯ ಪಂಥದೊಡನೆ, ಕನ್ನಡ ಸಾಹಿತ್ಯದ ಮೊದಲ ಪೀಳಿಗೆಯ ಬರಹಗಾರರು ಉತ್ತಮ ಕಾದಂಬರಿಗಳನ್ನು ಸೃಷ್ಟಿಸಿದರು. ತ.ರಾ.ಸುರವರು, ಕಟ್ಟೀಮನಿ, ಇನಾಂದರರು, ತ್ರಿವೇಣಿ ಮುಂತಾದವರು ಕೃತಿರಚನೆಯಲ್ಲಿ ಮುಂದಾದರು.

ಯಶವಂತ ಚಿತ್ತಾಲರ "ಮೂರುದಾರಿಗಳು", ಕುಸುಮಾಕರರ "ನಾಲ್ಕನೆಯ ಆಯಾಮ", ಎ.ಕೆ.ರಾಮಾನುಜಂರವರ "ಹಳದಿಮೀನು" ನವ್ಯ ಕತೆಗಳ ಸಾಲಿಗೆ ಸೇರುವಂತಹ ಕೃತಿಗಳಾಗಿವೆ.

ನವ್ಯ ಮಾರ್ಗದ ಹೊರಗೇ ಉಳಿದ ಜನಪ್ರಿಯ ಕಾದಂಬರಿಕಾರರು ಎಸ್. ಎಲ್. ಬೈರಪ್ಪನವರು. ಅಸಾಧಾರಣವಾದ ಜನಪ್ರಿಯತೆಗೆ ಪಾತ್ರರಾದ ಇವರು ವಿಶಿಷ್ಟವಾದ ಕಲಾವಂತಿಕೆ , ತಂತ್ರಗಾರಿಕೆ ಇಲ್ಲದಿದ್ದರೂ ಓದುಗರನ್ನು ಮೆಚ್ಚಿಸಿದ್ದು ಬಾಳಿನಲ್ಲಿನ ಆಳವಾದ ಶ್ರದ್ಧೆಗಾಗಿ ಮತ್ತು ಅನುಭವದ ಗಟ್ಟಿತನಕ್ಕಾಗಿ. ಇದರಿಂದ ಅಲ್ಲಲ್ಲಿ ಕಾರಂತರ ನೆನಪನ್ನು ತರುತ್ತಾರೆ. ಇವರು "ವಂಶವೃಕ್ಷ", "ಜಲಪಾತ", "ನಾಯಿನೆರಳು", "ಗೃಹಭಂಗ", "ದಾಟು", "ಪರ್ವ", "ಸಾಕ್ಷಿ", ಮುಂತಾದ ಕಾದಂಬರಿಗಳನ್ನು ರಚಿಸಿದರು. ಇವರ ಕೃತಿಗಳಲ್ಲಿ ಎದ್ದು ಕಾಣುವ ಅಂಶ ವೈಚಾರಿಕತೆ.

ನವ್ಯ ಸಾಹಿತ್ಯಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಹುಟ್ಟಿಕೊಂಡ ಬಂಡಾಯ ,ದಲಿತ ಸಾಹಿತ್ಯ, ಸಾಮಾಜಿಕ ಕ್ರಾಂತಿಯ ಉದ್ದೇಶವನ್ನು ಘೋಷಿಸಿಕೊಂಡೇ ಅಡಿಯಿಟ್ಟಿತು. ಮಾರ್ಕ್ಸವಾದಿ ತತ್ವಗಳ ಅರಿವಿನ ಹಿನ್ನೆಲೆಯಿದ್ದ ಬರಹಗಾರರು ಸಾಹಿತ್ಯಕ್ಕೊಂದು ನೆಲೆಗಟ್ಟನ್ನು ನೀಡಿದರು. ಬಂಡಾಯ, ದಲಿತ ಬರಹಗಾರರು ಕಾಂದಬರಿಯನ್ನು ಸಾಮಾಜಿಕ ಕ್ರಾಂತಿಯ ಸಾಧನವಾಗಿ ಅಭಿವ್ಯಕ್ತಿಸುವ ಬಳಸಿದರು. ಕುಂ. ವೀರಭದ್ರಪ್ಪನವರ "ಕಪ್ಪು", ಬರಗೂರರ "ಸೂತ್ರ", ಕಾ.ತ.ಚಿಕ್ಕಣ್ಣ ಅವರ "ಮುಂಜಾವು" ಮುಂತಾದವು ಉಲ್ಲೇಖಾರ್ಹ ಕಾದಂಬರಿಗಳಾಗಿವೆ.

ದಲಿತ ಸಾಹಿತ್ಯಕ್ಕೆ ರೋಷ ಮತ್ತು ಭೀತಿಯ ನೆಲೆ ಒಂದಾದರೆ, ಹಕ್ಕುಗಳಿಗಾಗಿ ಹೊಡೆದಾಡುವ ಸಾಮರ್ಥ್ಯ ಮತ್ತು ಅರಿವು ಮತ್ತೊಂದು ನೆಲೆಯನ್ನು ಒದಗಿಸಿ ಕೊಡುತ್ತದೆ. ಕನ್ನಡ ಕಾದಂಬರಿಗಳ ಇತಿಹಾಸದಲ್ಲಿ ದೇವನೂರು ಮಹಾದೇವರ ಕೃತಿಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಇವರದು ಅಪೂರ್ವವದ ಪ್ರತಿಭೆ. ದಲಿತವರ್ಗದ ಭಾಷೆಯಲ್ಲಿ ಛಟ್ಟಿ ಇಳಿಸಿದ ಕಥೆಗಳಾಗಿವೆ. ಶತಮಾನಗಳಿಂದ ಶೋಷಣೆಗೆ ಒಳಗಾದರನ್ನು ಕುರಿತು ಇವರು ಬರೆಯುತ್ತಾರೆ.

ದಲಿತ ಲೋಕದ ನರಕ ಚಿತ್ರವನ್ನು ಮೊಟ್ಟ ಮೊದಲ ಬಾರಿಗೆ ತೋರಿದ ಕಾರಣ ಕನ್ನಡ ಸಾಹಿತ್ಯ ಲೋಕದಲ್ಲಿ ವಚನಕಾರರ ಯುಗವನ್ನು ನೆನಪಿಗೆ ತರುತ್ತದೆ. ಇವರ ರಚನೆ ಕೇವಲ ದಲಿತ ಬದುಕಿನ ದಾಖಲೆಗಳಾಗದೆ , ಮಾನವ ಜೀವನದ ದಾಖಲೆಗಳಾಗಬಲ್ಲಂಥ ಕಾದಂಬರಿಯನ್ನು ನೀಡಿದರು. 'ಒಡಲಾಳ', 'ಕುಸುಮಬಾಲೆ' ಇವರ ಅತ್ಯುತ್ತಮ ಕೃತಿಗಳಾಗಿವೆ.

ಸ್ತ್ರೀವಾದವನ್ನು ಹೆಣ್ಣಿನ ಸಮಸ್ಯೆಯನ್ನು ತಮ್ಮ ಕೃತಿಗಳಲ್ಲಿ ತಂದವರು ವೀಣಾಶಾಂತೇಶ್ವರ್‌ರವರು."ಗಂಡಸರು", "ಶೋಷಣೆ", "ಅದೃಷ್ಟ" ಮುಂತಾದವು ಪ್ರಮುಖ ಕಾದಂಬರಿಗಳು. ಹೊಸ ಅನುಭವ ಲೋಕವನ್ನು ತೆರೆದಿಟ್ಟ ಮತ್ತೊಬ್ಬ ಬರಹಗಾರ್ತಿ ಸಾರಾ ಅಬೂಬಕರ್."ಚಂದ್ರಗಿರಿಯ ತೀರದಲ್ಲಿ","ತಳ ಒಡೆದ ದೋಣಿಯಲ್ಲಿ","ಕದನ ವಿರಾಮ" ಅತ್ಯುತ್ತಮ ಕೃತಿಗಳಾಗಿವೆ.

ಇಂದು ಆಧುನಿಕ ಜನಜೀವನದ ಸಮಸ್ಯೆಗಳನ್ನು, ಸ್ತ್ರೀಪರ ಕಾಳಜಿಯನ್ನು, ಅಥವಾ ತಾವು ಕಂಡುಂಡ ಅನುಭವಗಳನ್ನು ತಮ್ಮದೇ ಆದ ವಸ್ತು ವೈವಿಧ್ಯತೆಯೊಂದಿಗೆ ಓದುಗರಿಗೆ ರಸದೌತಣವನ್ನು ನೀಡುತ್ತಿರುವ ಉದಯೋನ್ಮುಖ ಬರಹಗಾರರು ಹುಟ್ಟಿಕೊಳ್ಳುತ್ತಿದ್ದಾರೆ . ಅವರುಗಳಲ್ಲಿ ಕೆಲವರೆಂದರೆ ಗೀತಾ. ಬಿ.ಯು, ವಿ.ಆರ್. ಕಾರ್ಪೆಂಟರ್, ವಸುಧೇಂದ್ರ, ಸುನಂದಾ ಪ್ರಕಾಶ ಕಡಮೆ, ಕೆ. ಸತ್ಯನಾರಾಯಣ, ಜ.ನಾ. ತೇಜಶ್ರೀ, ಗುರುಪ್ರಸಾದ್, ವಿ. ಎಂ. ಮಂಜುನಾಥ್, ಮಿತ್ರಾ ವೆಂಕಟ್ರಾಜ ಹೀಗೆ ಇನ್ನೂ ಹಲವು ನವ ಪ್ರತಿಭೆಗಳು ಕನ್ನಡ ಕಾದಂಬರಿ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಹೆಜ್ಜೆಗಳನ್ನು ಮೂಡಿಸುತ್ತಿದ್ದಾರೆ.

ಆಧುನಿಕ ಕಾದಂಬರಿ ಸಾಹಿತ್ಯ ಒಂದು ಜೀವನವನ್ನು ಅದರ ಮೂರ್ತ ಹಾಗೂ ಅಮೂರ್ತ ವಿವರಗಳಲ್ಲಿ ಅತ್ಯಂತ ತೀವ್ರವಾಗಿ ಒಳಗೊಳ್ಳುತ್ತಿದೆ. ಕಾವ್ಯ ಮತ್ತು ನಾಟಕಕ್ಕಿಂತ ಹೆಚ್ಚಿನ ಚಿಂತನಶೀಲತೆಯನ್ನು ಪಡೆಯುತ್ತಿದೆ. ತನ್ನದೇ ಆದ ವಿಕಸನಶೀಲತೆಯನ್ನು ಇದು ಪಡೆಯುತ್ತಿದೆ. ಕೃತಿ ರಚನೆಯಲ್ಲಿ ಅನಾವರಣಗೊಳ್ಳುವ ಹೊಸ ಸಾಧ್ಯತೆಗಳ ಮೂಲಕ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಿದೆ.ಈ ಹಿನ್ನೆಲೆಯಲ್ಲಿ ಹಿಂದಿನಿಂದ ಇಂದಿನ ವರೆಗೆ ಈ ಪ್ರಕಾರ ಹೇಗೆ ಬೆಳೆದು ಬಂದಿದೆ ಎಂಬುದರ ಬಗ್ಗೆ ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ ೩.

ಕೃತಿಕಾರರ ಕಿರು ಪರಿಚಯ

ಅಧ್ಯಾಯ ೩.

ಕೃತಿಕಾರರ ಕಿರು ಪರಿಚಯ

"ಪ್ರತಿಯೊಬ್ಬರ ಜೀವನವೂ ಒಂದು ಕಾದಂಬರಿ" ಎಂಬ ಆಂಗ್ಲ ಗಾದೆಯೊಂದಿದೆ. ತಮ್ಮ ಹೆಜ್ಜೆಯ ಗುರುತುಗಳನ್ನು ಕಾಲದ ಮರಳಿನ ಮೇಲೆ ಬಿಟ್ಟು ಹೋಗುವ ಮಾನವನ ಜೀವನ ನಿಜವಾಗಿಯೂ ಒಂದು ಕಾದಂಬರಿ ಎಂದೇ ಹೇಳ ಬಹುದು.

ತಮ್ಮ ಜೀವನದ ಬಹುಭಾಗವನ್ನು ಸಾಹಿತ್ಯಕ್ಕೆಂದೇ ಮುಡಿಪಾಗಿ ಇಟ್ಟವರು ವಿ.ಎಂ. ಇನಾಂದಾರರು. ಕಾದಂಬರಿ, ನಾಟಕ, ವಿಮರ್ಶೆ, ಪಾಶ್ಚಾತ್ಯ ಸಾಹಿತ್ಯ ಕುರಿತು ಮಹತ್ವದ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಬದುಕು:

ವಿ.ಎಂ. ಇನಾಂದಾರರ ಪೂರ್ಣ ಹೆಸರು – ವೆಂಕಟ ಮಧ್ವರಾವ್ ಇನಾಂದಾರರು ಎಂದು. ಇವರು ಕರ್ನಾಟಕದ ಬೆಳಗಾವಿ ತಾಲ್ಲೂಕಿನ ಹುದಲಿ ಗ್ರಾಮದಲ್ಲಿ ೧೯೧೨ ಅಕ್ಟೋಬರ್ ಒಂದರಂದು ಜನಿಸಿದರು. ಮಧ್ವರಾವ್ ಇನಾಂದಾರ್ ಮತ್ತು ಕಮಲಾಬಾಯಿ ಇವರ ಇಬ್ಬರು ಗಂಡು ಹಾಗು ಹೆಣ್ಣು ಮಕ್ಕಳಲ್ಲಿ ಇವರೇ ಹಿರಿಯರು. ೧೯೧೮ರಲ್ಲಿ ವಿದ್ಯಾಭ್ಯಾಸ ಆರಂಭಿಸಿ ಬೆಳಗಾವಿ, ಅಥಣಿ ಮತ್ತು ವಿಜಾಪುರಗಳಲ್ಲಿ ಹೈಸ್ಕೂಲ್ ಶಿಕ್ಷಣ ಕೈಗೊಂಡು ೧೯೩೦ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಮೆಟ್ರಿಕ್ಯುಲೇಶನಿನಲ್ಲಿ ರ್‍ಯಾಂಕನ್ನು ಪಡೆದರು.

ಶಾಲಾದಿನಗಳಿಂದಲೂ ಇನಾಂದಾರರು ಮೌನವಾಗಿಯೇ ಇರುತ್ತಿದ್ದರು. ಇವರಿಗೆ ಪುಸ್ತಕಗಳೆಂದರೆ ಪ್ರಾಣ. "ಮಾತು ಕಡಿಮೆ ಯಾವಾಗಲೂ ಕೆಲಸದಲ್ಲಿಯೇ ಇರುತ್ತಿದ್ದ, ಕೆಲಸವಿಲ್ಲದೆ ಆತನನ್ನು ಕಾಣುವುದು ತೀರ ಅಪರೂಪ. ತೋಟ ಮಾಡುವುದರಿಂದ ಹಿಡಿದು 'ಗಮ್' ತಯಾರಿಸುವವರೆಗೆ ಆತನಿಗೆ ನೂರೆಂಟು ಹವ್ಯಾಸ. ಮನೆಯಲ್ಲಿಯೇ ಒಂದು ಪುಟ್ಟ ಮ್ಯೂಸಿಯಂ ಮಾಡಿಕೊಂಡಿದ್ದ. ಇನ್ನು ಪುಸ್ತಕಗಳ ವಿಷಯ ಹೇಳಬೇಕೇ? ಅವೇ ಆತನ ಆತ್ಮ , ಪ್ರಾಣ. ಪ್ರತಿಯೊಂದು ವಸ್ತುವಿಗೂ ಪ್ರಾಧಾನ್ಯತೆ ನೀಡುತ್ತಿದ್ದ. ಸುಖ-ದು:ಖ ಯಾವುದೇ ಬರಲಿ ಸಮಚಿತ್ತತೆ ಹೊಂದಿರುತ್ತಿದ್ದ, ಅಪೂರ್ವವಾದಂತಹ ವ್ಯಕ್ತಿತ್ವ ಆತನದ್ದು",* ಎನ್ನುತ್ತಾರೆ ಸುಶೀಲಾ ಕೊಪ್ಪರ ಅವರು.

೧೯೩೦ರಲ್ಲಿ ಕಾಲೇಜು ಶಿಕ್ಷಣವನ್ನು ಪ್ರಾರಂಭಿಸಿ ೧೯೩೪ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ ಆನರ್ಸ್ (ಇಂಗ್ಲೀಷ್ ಸಾಹಿತ್ಯ) ಪದವಿ ಸ್ವರ್ಣ ಪದಕ ಪಡೆದರು. ೧೯೪೧ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಆಂಗ್ಲ ಸಾಹಿತ್ಯದಲ್ಲಿ ಎಂ.ಎ ಪದವಿ ಪಡೆದರು.

ಮುಂದೆ ನಿರ್ಮಲ ಅವರನ್ನು ಕೈಹಿಡಿದರು . ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ. (ಪ್ರಿಯಂವದಾ, ಶ್ರೀಕಾಂತ್, ಹಾಗೂ ಮೀನಾ) ಶ್ರೀಮತಿ ನಿರ್ಮಲ ಇನಾಂದಾರರು ಯಾವಾಗಲೂ ಇನಾಂದಾರರ ಎಲ್ಲ ಕೆಲಸಗಳಲ್ಲಿ ಪಾಲುದಾರರಾಗಿ ಅವರು ಸಲ್ಲಿಸುವಂಥಹ ಸಾಹಿತ್ಯ ಸೇವೆಗೆ ಸಹಾಯ , ಸಹಕಾರ ನೀಡುತ್ತಿದ್ದರಂತೆ.

ಕಾಲೇಜಿನಲ್ಲಿ ಸಾಹಿತ್ಯ ಅಭ್ಯಾಸ ನಡೆಸಿ ಮುಂದೆಯೂ ಸಾಹಿತ್ಯ ಕ್ಷೇತ್ರದಲ್ಲಿ ದುಡಿಯಬೇಕೆಂಬ ಆಕಾಂಕ್ಷೆ ಇವರದಾಗಿತ್ತು. ಆದರೆ ಕೋರ್ಟಿನಲ್ಲಿ ನ್ಯಾಯಾಧೀಶರಿಗೆ ಸಾಕ್ಷಿಗಳ ಮಾತನ್ನು ಇಂಗ್ಲಿಷಿಗೆ ಪರಿವರ್ತಿಸಿ ಹೇಳುವ ಕೆಲಸ ದೊರೆಯಿತು. ಪಿ. ಇ. ಎನ್ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡುವ ·ಅವಕಾಶ ದೊರೆಯಿತು. ೧೯೪೩ರಲ್ಲಿ ಸಿಡೇನ್‌ಹ್ಯಾಂ ಕಾಲೇಜಿನಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿ ನೇಮಕಗೊಂಡರು. ೧೯೪೬ರಲ್ಲಿ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿ ಸೇರಿದರು. ೧೯೫೦ರಲ್ಲಿ ಅಹಮದಾಬಾದ್ ಗುಜರಾಥ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಎರಡು ವರ್ಷ ದುಡಿದು ಧಾರವಾಡಕ್ಕೆ ಮರಳಿದರು. ಮುಂದೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಸಹ ಪ್ರಾಂಶುಪಾಲರಾಗಿ ೧೯೬೦ರಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಮೊದಲ ಪ್ರಾಂಶುಪಾಲರಾಗಿ ಆಯ್ಕೆಯಾದರು. ೧೯೬೮ರಲ್ಲಿ ಶಿವಮೊಗ್ಗ ಸಹ್ಯಾದ್ರಿ ಕಾಲೇಜಿಗೆ ತೆರಳಿ ಅಲ್ಲೇ ನಿವೃತ್ತಿ ಹೊಂದಿದರು.

---

*ನನ್ನ ಮೆಚ್ಚಿನ ಅಣ್ಣ - ವೆಂಕಣ್ಣ -ಸುಶೀಲ ಕೊಪ್ಪರ (ಇನಾಂದಾರರ ವ್ಯಕ್ತಿ-ಕೃತಿ)

೧೯೭೦ರಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕಾ ಪ್ರವಾಸ ಕೈಗೊಂಡು ತಮ್ಮ ವಿಶ್ರಾಂತಿ ಜೀವನವನ್ನು ಮೈಸೂರಿನಲ್ಲಿ ಕಳೆದರು. ತಮ್ಮ ಆಯುಷ್ಯದ ಕೊನೆಯವರೆಗೂ ಸಾಹಿತ್ಯ ಚಟುವಟಿಕೆಯಲ್ಲೇ ಕಳೆದು ೧೯೮೬ರಲ್ಲಿ ಜನವರಿ ೨೬ರಂದು ನಿಧನ ಹೊಂದಿದರು.

ಬರಹಗಳು:

ಇನಾಂದಾರರ ಮಾತೃಭಾಷೆ ಕನ್ನಡ, ಅವರು ಅಧ್ಯಯನ ನಡೆಸಿದ ಭಾಷೆ ಇಂಗ್ಲಿಷ್, ಪ್ರೀತಿಯಿಂದ ಕಲಿತದ್ದು ಸಂಸ್ಕೃತ. ಜೊತೆಗೆ ಹಿಂದಿ, ಮರಾಠಿ ಭಾಷೆಗಳನ್ನು ಸಹ ಚೆನ್ನಾಗಿ ಬಲ್ಲವರಾಗಿದ್ದರು. ಕಾಲೇಜು ದಿನಗಳಲ್ಲಿ ಇಂಗ್ಲಿಷ್ ಕತೆಗಳನ್ನು ಬರೆದು ಪ್ರಕಟಣೆಗಾಗಿ ಕೊಟ್ಟರು, ಆದರೆ ಅವು ಪ್ರಕಟವಾಗಲಿಲ್ಲ ನಂತರ ಅವರಿಗೆ ಪ್ರಕಟವಾದದ್ದರ ಕಾರಣ ತಿಳಿಯಿತು. ಯಾರಿಗೇ ಆದರೂ ತಮ್ಮ ಮಾತೃಭಾಷೆಯಲ್ಲಿ ಬರೆಯುವಂತೆ, ಅಭಿವ್ಯಕ್ತಿಸುವಂತೆ ಬೇರೆ ಭಾಷೆಯಲ್ಲಿ ಬರೆಯುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿತರು.* ಮುಂದೆ ಶ್ರೀರಂಗರು, ಮಾಸ್ತಿ, ವೀ.ಸಿಯವರಂತ ಸ್ನೇಹ ದೊರೆತು ಸಾಹಿತ್ಯ ಸೃಷ್ಟಿಗೆ ಪ್ರಚೋದನೆ ದೊರೆಯಿತು.

ಇವರು ಬರೆದ ಒಟ್ಟು ಕಾದಂಬರಿಗಳ ಸಂಖ್ಯೆ ಹದಿನೆಂಟು. ಹದಿನಾರು ಸ್ವತಂತ್ರ ರಚನೆಯಾದರೆ ಉಳಿದ ಎರಡು ಕಾದಂಬರಿ ಅನುವಾದವಾಗಿದೆ. ಅವರು ಬರೆದ ಕಾದಂಬರಿಗಳ ವಿವರ ಇಲ್ಲಿದೆ: "ಕನಸಿನ ಮನೆ" ಮುಂದುವರಿದ ನಾಲ್ಕುಭಾಗಗಳಲ್ಲಿ ಬಂದವು (೧೯೪೨) , "ವಿಜಯಯಾತ್ರೆ" (೧೯೪೮), "ಶಾಪ" (೧೯೪೯), "ಸ್ವರ್ಗದ ಬಾಗಿಲು" (೧೯೫೧), "ಮುಗಿದಕತೆ" (೧೯೫೩), "ಈ ಪರಿಯಸೊಬಗು" (೧೯೫೩), "ಕಟ್ಟಿದ ಮನೆ" (೧೯೫೩), "ಚಿತ್ರಲೇಖಾ" (೧೯೬೧), "ಮಂಜುಮುಸುಕಿದ ದಾರಿ" (೧೯೬೨), "ಊರ್ವಶಿ" (೧೯೬೮), "ನವಿಲುನೌಕೆ" (೧೯೭೧), "ಬಾಡದ ಹೂ" (೧೯೭೨), "ಕತ್ತಲೆಯ ಕಡಲು" (೧೯೭೨), "ಯಾತ್ರಿಕರು" (೧೯೭೭), "ಯಯಾತಿ" (ಅನುವಾದ) (೧೯೭೭), "ತ್ರಿಶಂಕು" (೧೯೮೦), ಹೀಗೆ ಕಾದಂಬರಿಗಳು ನಿರರ್ಗಳವಾಗಿ ಸಾಗಿತು.

---

*ನವನೀತ ಪುಟ(೨೩)

ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಆಳ, ಅಗಲಗಳನ್ನು ಕುರಿತು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಇಡೀ ಸಾಹಿತ್ಯ ಲೋಕಕ್ಕೇ ಪರಿಚಯಿಸಿದರು. ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ (೧೯೭೩), ಪಾಶ್ಚಾತ್ಯ ವಿಮರ್ಶೆಯ ಮಧ್ಯಯುಗ (೧೯೭೬), ಪಾಶ್ಚಾತ್ಯ ವಿಮರ್ಶೆಯ ಸಂಪ್ರದಾಯಯುಗ (೧೯೭೮), ಪಾಶ್ಚಾತ್ಯ ವಿಮರ್ಶೆಯ ರೊಮ್ಯಾಂಟಿಕ್ ಯುಗ (೧೯೮೨), ಪಾಶ್ಚಾತ್ಯ ವಿಮರ್ಶೆಯ ಆಧುನಿಕಯುಗ , ಪಾಶ್ಚಾತ್ಯ ಕಾವ್ಯ ಮೀಮಾಂಸೆ (೧೯೮೨), ಎಂಬ ಕೃತಿಗಳನ್ನು ಬರೆದರಲ್ಲದೆ, ಮಂಗಲ್ಯಾಂಡಿನಲ್ಲಿ ಮೂರುವಾರ (೧೯೭೨) ಎಂಬ ವಿಡಂಬನ ಕೃತಿ ರಚಿಸಿದರು.

ಇದಲ್ಲದೆ ಡಾ||ಅಂಬೇಡ್ಕರ್ (ವ್ಯಕ್ತಿ ಮತ್ತು ವಿಚಾರ ೧೯೮೧), ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ(೧೯೮೦), ಕುವೆಂಪು ಕಾದಂಬರಿಗಳು (೧೯೭೮), ಬಿಡುಗಡೆ (ನಾಟಕ ೧೯೫೫), ಗೋವಿಂದ ಪೈಗಳ ಕಾವ್ಯ (೧೯೬೫), ಬಿ.ಎಂ. ಶ್ರೀ ಬದುಕು – ಬರಹ (೧೯೮೩), ಎಂಬ ಕೃತಿಗಳು ಅಷ್ಟೇ ಅಲ್ಲದೆ ಶಿವರಾಮ ಕಾರಂತ (೧೯೭೩), ಗೋವಿಂದ ಪೈಗಳ (೧೯೮೩), ಕೃತಿಗಳನ್ನು ಇಂಗ್ಲಿಷಿನಲ್ಲಿ ಪರಿಚಯಿಸಿದರು.

"Each one can light up his own small sq. Inch of experience" - ರಾಬರ್ಟ್ ಲಿಂಡ್ ಎಂಬ ಆಂಗ್ಲ ಪ್ರಬಂಧಕಾರನ ಮಾತನ್ನು ಹೇಳುತ್ತಾ ಹೀಗೆ ವ್ಯಾಸಂಗದ ಪರಿಣಾಮವಾಗಿ, ಸ್ವಭಾವದ ಪರಿಣಾಮವಾಗಿ, ಮನಸ್ಸು ಬೆಳೆದ ರೀತಿಯ ಪರಿಣಾಮವಾಗಿ, ನನ್ನ ಕೃತಿ ರಚನೆ ಒಂದು ರೀತಿಯಲ್ಲಿ ವಿಮರ್ಶೆಯ ಧೋರಣೆ, ಇನ್ನೊಂದು ರೀತಿಯಲ್ಲಿ ನನ್ನ ಬರವಣಿಗೆಯ ವಿಚಾರದಲ್ಲಿ ಪ್ರತಿಕ್ರಿಯೆ ರೂಪಿತವಾಗಿರುವುದರಿಂದ ನನ್ನ ಮಟ್ಟಿಗೆ ನಾನು ಒಂದು ಕೆಲಸವನ್ನು ಮಾಡುತ್ತಿದ್ದೇನೆ ಎಂದು ಅವರ ಬರವಣಿಗೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ.

ಪ್ರೊಫೆಸರ್ ಇನಾಂದಾರರು ಒಳ್ಳೆ ಕಾದಂಬರಿಕಾರರು, ನುರಿತ ಪ್ರಾಧ್ಯಾಪಕರು, ಪರಿಣಿತ ವಿಮರ್ಶಕರು, ಸುಲಲಿತ ವಾಗ್ಮಿ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಪಡೆದವರು. ಕನ್ನಡ ನೀರು ಕುಡಿದಂತೆ, ಮರಾಠಿ ಊಟ ಮಾಡಿದಂತೆ, ಹಿಂದಿ ಹಾಲು ಕುಡಿದಂತೆ ಹೀಗೆ ಹಲವು ಹೆಗ್ಗಳಿಕೆಗೆ ಪಾತ್ರರಾಗಿದ್ದವರು.

ವ್ಯಕ್ತಿತ್ವ

ಇನಾಂದಾರರರು ಮಿತಭಾಷಿ , ಮಾತಿಗಿಂತ ಹೆಚ್ಚು ಮೌನಪ್ರಿಯರಾಗಿದ್ದರಂತೆ. ಹಿತಮಿತ ಮೃದುವಚನ ಎಂಬ ವಿಶೇಷಣ ಅವರಿಗೆ ಸೂಕ್ತವಾಗಿ ಒಪ್ಪುತ್ತಿತ್ತೆಂದು ಎಂ.ವಿ. ವೆಂಕಟೇಶಮೂರ್ತಿ ಹೇಳುತ್ತಾರೆ.* ಮನಸ್ಸಿದ್ದಾಗ ಮಾತ್ರ ಮನಸ್ಸು ತೆರೆದು ಮಾತನಾಡುತ್ತಿದ್ದರಂತೆ , ಆದರೆ ಅದೂ ತೀರ ಕಡಿಮೆ ಸಂದರ್ಭಗಳಲ್ಲಿ ಮಾತ್ರ. ಆದರೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಉತ್ತಮ ವಾಗ್ಮಿಯೆಂದು ಹೆಸರಾಗಿದ್ದರೆಂದು ಹೇಳುತ್ತಾರೆ.

ಹಣದ ವಿಚಾರ ಬಂದಾಗ ಎಂದಿಗೂ ದುಂದು ವೆಚ್ಚ ಮಾಡಲು ಬಯಸದವರು. ಆಡಂಬರವನ್ನು ಒಪ್ಪುತ್ತಿರಲಿಲ್ಲ. ಬಡತನದ ಬವಣೆಯನ್ನು ಕಂಡುಂಡ ಅವರು ಬದುಕಿನಲ್ಲಿ ಒಂದೊಂದೇ ಮೆಟ್ಟಿಲನ್ನು ಏರಿ ,ಕೊನೆ ಕೊನೆಗೆ ಒಂದು ನೆಮ್ಮದಿಯ ನೆಲೆಯನ್ನು ಮುಟ್ಟಿದ್ದರು. ಹಣಕ್ಕೆ ಎಷ್ಟು ಬೆಲೆ ಇದೆ ಎಂದು ತಿಳಿದಿದ್ದ ಅವರು ದೇಹಿ ಎಂದು ಇನ್ನೊಬ್ಬರನ್ನು ಕೈ ಒಡ್ಡಿ ಅನಗತ್ಯ ಧಾರಾಳ ಕಾಣಿಸುವಿಕೆ, ಉಬ್ಬಿ ಮೆರೆಯುವುದನ್ನು ಒಪ್ಪುತ್ತಿರಲಿಲ್ಲ.

ಇನಾಂದಾರರ ಬರವಣಿಗೆಯ ವಿಚಾರಕ್ಕೆ ಬಂದರೆ ಕನ್ನಡ ಅಥವ ಇಂಗ್ಲಿಷ್ ಯಾವುದೇ ಭಾಷೆಯಾದರೂ ಸ್ಫುಟವಾದ , ಮುದ್ದಾದ ಕೈಬರಹ . ಬರೆಯುವಾಗ ಒಂದು ಚಿತ್ತೂ ಇರದಂತೆ ಬರೆಯುತ್ತಿದ್ದರಂತೆ. ಖಚಿತವಾದ, ನಿರ್ದಿಷ್ಟವಾದ , ಪೂರ್ವನಿರ್ಧಾರಿತವಾದ ಆಲೋಚನೆ ಬರವಣಿಗೆಯಲ್ಲಿ ಏಕಾಗ್ರಚಿತ್ತದಿಂದ ಮೂಡುತ್ತಿದ್ದವಂತೆ. ಇದು ಅವರು ಬರೆಯುವ ಪತ್ರಗಳಲ್ಲೂ ಕಾಣುತ್ತಿದ್ದವಂತೆ. ಎಲ್ಲದರಲ್ಲೂ ತಾವಾಗಿ ಹಾಕಿಕೊಂಡ ಒಂದು ಕ್ರಮಬದ್ಧತೆ, ಶಿಸ್ತುಎದ್ದು ಕಾಣುತ್ತಿತ್ತೆಂದು ಅವರ ಸ್ನೇಹಿತರ ಅಭಿಪ್ರಾಯ.

ಸ್ವಂತ ಸಂಪಾದನೆಯ ಹಣದಿಂದ ಪುಸ್ತಕಗಳನ್ನು ಖರೀದಿಸಿ ಶೇಖರಿಸಿ ಇಡುತ್ತಿದ್ದರಂತೆ. ಖರೀದಿಸಿ ತಂದ ಪುಸ್ತಕಗಳಿಗೆ ರೊಟ್ಟುಹಾಕಿ, ಅಚ್ಚುಕಟ್ಟಾಗಿ ಬೇಕೆಂದಾಗ ಕೈಗೆ ಸಿಗುವಂತೆ ಜೋಡಿಸಿ ಇಟ್ಟುಕೊಳ್ಳುತ್ತಿದ್ದರು. ಅಸ್ತವ್ಯಸ್ತತೆ ಧೂಳು, ಗೆದ್ದಲಿಗೆ ಅವಕಾಶವಿಲ್ಲ. ಹಾಗೆ ಯಾರೆಂದರೆ ಅವರಿಗೆ ಪುಸ್ತಕಗಳನ್ನು ಕೊಡುತ್ತಿರಲಿಲ್ಲ, ಯಾರು ಪುಸ್ತಕಗಳನ್ನು ಕೊಟ್ಟಸ್ಥಿತಿಯಲ್ಲೇ ಹಿಂದಿರುಗಿಸುತ್ತಾರೆ ಅಂಥವರಿಗೆ ಮಾತ್ರ ಪುಸ್ತಕಗಳನ್ನು ನೀಡುತ್ತಿದ್ದರು. ಇದು ಅವರ ಪುಸ್ತಕ ಪ್ರೀತಿ ಎಂಥಹದ್ದು ಎಂಬುದನ್ನು ತಿಳಿಸುತ್ತದೆ.

---

*ಕಾದಂಬರಿ ಲೋಕ- ಎಂ.ವಿ. ವೆಂಕಟೇಶ ಮೂರ್ತಿ

ಯಾವುದಾದರೂ ವಸ್ತು ಕಳೆದು ಹೋದರೆ ಚಿಂತಿಸಿ ಫಲವಿಲ್ಲ ಎಂದು ಅದರ ಬಗ್ಗೆ ಕೂಡ ಒಂದು ಮಾತನ್ನೂ ಆಡುತ್ತಿರಲಿಲ್ಲವಂತೆ ವೆಂಕಣ್ಣನವರು. ಮನೆಯಲ್ಲಿ ಯಾವುದಾದರು ವಸ್ತು ಕಳೆದು ಹೋದರೆ ಮನೆಯವರೆಲ್ಲಾ ಆ ವಸ್ತುವಿಗಾಗಿ ಹುಡುಕಾಟ ನಡೆಸಿದರೆ–ಹೋದದ್ದು ಹೋಯಿತು! ಮತ್ತೊಮ್ಮೆ ಆ ವಿಷಯವನ್ನೂ ಎತ್ತುತ್ತಿರಲಿಲ್ಲವಂತೆ. ತಾಯಿ ತಮ್ಮ ತಂಗಿಗೆ ಒಮ್ಮೆ ಬಂಗಾರದ ಸರವನ್ನು ಹಾಕಿದ್ದರಂತೆ ಆಡಲು ಹೋಗಿ ಆ ಸರ ಕಳೆದುಹೋದಾಗ ಮನೆಯವರೆಲ್ಲ ಮರುಗಿದರೂ "ಯಾರಿಗೋ ಸಿಕ್ಕಬೇಕಾಗಿತ್ತು ಕಳೆದು ಹೋಯಿತು " ಎಂದು ಮತ್ತೆ ಆ ವಿಷಯದ ಬಗ್ಗೆ ಒಂದು ಮಾತನ್ನು ಆಡಲಿಲ್ಲವಂತೆ.

ಮತ್ತೊಮ್ಮೆ ರೈಲಿನಲ್ಲಿ ಪ್ರಯಾಣಿಸುವಾಗ ಒಂದು ಕಾದಂಬರಿಯ ಕರಡು, ಕ್ಯಾಮರಾ, ಹಣ ಏನೇನೋ ಕಳೆದರೂ ವಿಚಲಿತರಾಗಿ ಕುಳಿತು ,ಆ ಕುರಿತು ಚಿಂತಿಸಲಿಲ್ಲವಂತೆ ಅಂತಹ ಸ್ವಭಾವ ಅವರದಾಗಿತ್ತು. ತುಂಬ ಸ್ಥಿಮಿತವಾದ ಮನಸ್ಸು, ಒಂದು ರೀತಿಯ ಯೋಗಿಯಂತೆ ಇರುತ್ತಿದ್ದರಂತೆ. ಕಷ್ಟಗಳ ಸರಮಾಲೆಯಲ್ಲೇ ಜೀವನ ಸಾಗಿದರೂ ಅವರು ಎಂದಿಗೂ ಕುಗ್ಗಲಿಲ್ಲ, ಅದರಂತೆ ಸುಖ ಸಂಪತ್ತು– ಮಾನ ಸಮ್ಮಾನಗಳು ಸಿಕ್ಕಾಗ ಹಿಗ್ಗಲಿಲ್ಲ. ಎಲ್ಲವನ್ನೂ ಸಮನಾಗಿ ನೋಡುತ್ತಿದ್ದ ಅಪರೂಪದ ವ್ಯಕ್ತಿತ್ವ ಇವರದಾಗಿತ್ತಂತೆ.

ಒಬ್ಬ ತಂದೆಯಾಗಿ ಶಿಸ್ತಿನ ಪಾಠವನ್ನು ಮಕ್ಕಳಿಗೆ ಬಾಲ್ಯದಿಂದಲೇ ಕಲಿಸಿದ್ದರಂತೆ. ಊಟದ ಸಮಯದಲ್ಲಿ ಕೂಡ ಶಿಸ್ತು . ಎಲ್ಲರೂ ಒಟ್ಟಿಗೆ ಕುಳಿತು ಊಟಮಾಡಬೇಕು, ಒಮ್ಮೆ ಬಡಿಸಿದ ಊಟ ಸೇರಲಿ ಬಿಡಲಿ ತಟ್ಟೆಯಲ್ಲಿ ಬಿಡುವಂತಿಲ್ಲ ಇಂತಹ ನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುತ್ತಿದ್ದರಂತೆ. ಹಾಗೆಯೇ ಸರಳ ಜೀವನದ ಮಹತ್ವವನ್ನೂ ತಮ್ಮ ಮಕ್ಕಳ ಮನಸ್ಸಿನಲ್ಲಿ ಬಿಂಬಿಸಿದ್ದರಂತೆ. ಬಟ್ಟೆ ಬರೆಯ ವಿಷಯದಲ್ಲಿ ಷೇಕ್ಸಪಿಯರನ **"rich but not gaudy"** ಎಂಬ ತತ್ವ ಅವರಿಗೆ ಪ್ರಿಯವಾದ್ದು. ಯಾವುದೇ ಆಕರ್ಷಣೆಗೆ ಒಳಗಾಗದೆ ಓದವುದರಲ್ಲಿ ನಿರತರಾರುವುದು ವಿದ್ಯಾರ್ಥಿಗಳ ಕರ್ತವ್ಯ ಎಂದು ಅವರು ಕಟ್ಟುನಿಟ್ಟಾಗಿ ಹೇಳುತ್ತಿದ್ದರಂತೆ.ಎಷ್ಟು ಗಂಭೀರದ ಸ್ವಭಾವವೋ ಹಾಗೆಯೇ ಹಾಸ್ಯಪ್ರಿಯರಾಗಿದ್ದರಂತೆ. ಉತ್ತಮ ವಿಮರ್ಶಕರಾದ ಇವರು ಹಾಸ್ಯವಿಡಂಬನ ಮಾಡುವಾಗ ತುಂಬಾ ಮೊನಚನ್ನು ಪಡೆಯುತ್ತಿತ್ತಂತೆ. ಅವರವರ ಕೆಲಸಗಳನ್ನು ಅವರವರೇ ಮಾಡಿಕೊಳ್ಳಬೇಕು. ಹಾಗೆ ಸ್ವಾವಲಂಬನೆ ಹೆಚ್ಚು ಒತ್ತು ಕೊಡುತ್ತಿದ್ದರಂತೆ.

ಅತ್ಯಂತ ಸ್ವಾಭಿಮಾನಿಯಾದ ಇವರು ತಮ್ಮ ಸ್ಥಾನಮಾನವನ್ನು ಸ್ವಾರ್ಥಕ್ಕಾಗಿ ಎಂದು ಬಳಸಿಕೊಳ್ಳಲು ಇಷ್ಟಪಡುತ್ತಿರಲಿಲ್ಲವಂತೆ. ಅವರ ಮಗಳ ಮೀನಾ ವಾಂಗೀಕರ ಈ ವಿಷಯವಾಗಿ ಒಂದು ಅನುಭವವನ್ನು ಹೀಗೆ ಹಂಚಿಕೊಳ್ಳುತ್ತಾರೆ.

ಅವರ ತಂದೆಗೆ ವರ್ಗವಾದ್ದರಿಂದ ಅವರು ಬಿ.ಎ ಮೊದಲ ವರ್ಷವನ್ನು ಮತ್ತೊಮ್ಮೆ ಓದಬೇಕಾದಾಗ ತಮ್ಮ ಕಡೆಯಿಂದ ಕೆಲಸ ಆಗುತ್ತಿದ್ದರೂ ಅದನ್ನು ಬಳಸದೇ ಮತ್ತೊಮ್ಮೆ ಓದಲು ಹೇಳಿದರಂತೆ. ಅಂಥಹ ವ್ಯಕ್ತಿ ನಮ್ಮ ತಂದೆ ಎಂದು ಮೀನಾ ಸ್ವಾಭಿಮಾನಿ ಮಾವಯ್ಯ ಎಂಬ ಲೇಖನದಲ್ಲಿ ಹೇಳಿಕೊಳ್ಳುತ್ತಾರೆ.*

ಆದಹಾಗೆ ಆಯಿತು, ಹೋದರೆ ಹೋಯಿತು, ಹೇಗಾದರೂ ಆದೀತು ಎಂಬ ಪ್ರವೃತ್ತಿಯನ್ನು ಇವರು ತೀವ್ರವಾಗಿ ಖಂಡಿಸುತ್ತಿದ್ದರಂತೆ. **Do your duty , leave unto the lord the rest** ಎಂಬುದು ಅವರ ಶ್ರದ್ಧೆ.

ಪ್ರಶಸ್ತಿ ಮತ್ತು ಪುರಸ್ಕಾರಗಳು:

- ಕನ್ನಡ ಸಾಹಿತ್ಯ ಪರಿಷತ್ತು ಹಾಗು ಕರ್ನಾಟಕದ ಸಾಹಿತ್ಯ ಅಕಾಡಮಿ ಗೌರವ, – "ಉತ್ತಮ ಕಾದಂಬರಿಕಾರ" (೧೯೭೦)
- ಯಯಾತಿ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ,– ("ಉತ್ತಮ ಅನುವಾದಕ" ೧೯೭೭)
- ಮುಂಬಯಿ ವಿಶ್ವವಿದ್ಯಾಲಯದ ಮಾಂಡಲಿಕ ಸುವರ್ಣ ಪದಕ – ಸಂಸ್ಕೃತ ನಾಟಕಗಳಲ್ಲಿ ನಾಯಿಕೆಯರು ಎಂಬ ಪ್ರಬಂಧಕ್ಕೆ (೧೯೪೫)
- ಡಾ॥ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ ಕೃತಿಗೆ – ಕರ್ನಾಟಕ ರಾಜ್ಯ ಅಕಾಡಮಿ ಪ್ರಶಸ್ತಿ (೧೯೮೩)
- ಭಾರತೀಯ ವಿದ್ಯಾಭವನದ ಸುವರ್ಣ ಪದಕ – ಸಂಸ್ಕೃತ ನಾಟಕಗಳಲ್ಲಿ ವಿದೂಷಕ ಎಂಬ ಪ್ರಬಂಧಕ್ಕೆ(೧೯೪೫) ಪ್ರಶಸ್ತಿ ಲಭಿಸಿದೆ.

ಅಧ್ಯಾಯ : ೪

ಮೋಹಿನಿ ಕಾದಂಬರಿಯ ಕಥಾನಕ ಬೆಳವಣಿಗೆ

ಅಧ್ಯಾಯ : ೪

ಮೋಹಿನಿ ಕಾದಂಬರಿಯ ಕಥಾನಕ ಬೆಳವಣಿಗೆ

“A House is built by hands

But a home is built by hearts”

ಈ ಹೇಳಿಕೆ ಇರುವ ಫಲಕ ಇನಾಂದಾರರ ಕೋಣೆಯಲ್ಲಿ ಹಾಕಿಕೊಂಡಿದ್ದರಂತೆ. ಮೋಹಿನಿ ಕಾದಂಬರಿಯೂ ಕೂಡ ಇದೇ ಸಂದೇಶವನ್ನು ಹೇಳುವುದನ್ನು ಕಾಣಬಹುದು. ಕೇವಲ ಮನೆ ನಾಲ್ಕುಗೋಡೆಯಿಂದ ಮಾಡಿದ ಮನೆಯಾಗಿದ್ದರೆ ಅಲ್ಲಿ ಬದುಕಲು ಸಾಧ್ಯವಿಲ್ಲ. ಅದು ಕೈಯಿಂದ ಕಟ್ಟಿರಬಹುದು. ಆದರೆ ಅಲ್ಲಿ ಒಟ್ಟಿಗೆ ಬಾಳುವಂತಹ ಮನಸ್ಸು ಇದ್ದಾಗ ಮಾತ್ರ ಅದು ನೆಮ್ಮದಿ ಸುಖವನ್ನು ನೀಡುವ ಆಶ್ರಯತಾಣವಾಗುತ್ತದೆ (ಕೇವಲ ಇಟ್ಟಿಗೆ ಸಿಮೆಂಟುಗಳಿಂದ ಮಾಡಿದ ಸೂರಾಗಬಾರದು)

ಈಗಾಗಲೇ ತಿಳಿಸಿದಂತೆ ಮೋಹಿನಿ ಕಾದಂಬರಿಯ ನಾಲ್ಕು ಭಾಗದಲ್ಲಿ ಬೆಳೆದು ಬಂದಿದೆ. ೧೯೪೨ ರಲ್ಲಿ ಕನಸಿನ ಮನೆ (ಮೋಹಿನಿ ಭಾಗ-೧) ಕಾದಂಬರಿಯನ್ನು ಬರೆದರು. ೧೯೫೩ರಲ್ಲಿ ಕಟ್ಟಿದ ಮನೆ (ಮೋಹಿನಿ ಭಾಗ೨) ನಂತರ ೧೯೬೧ರಲ್ಲಿ (ಮೋ.ಭಾಗ ೩) ಬಾಡಿದ ಹೂ ಹಾಗೂ ೧೯೪೩ ರಲ್ಲಿ ಕತ್ತಲೆಯ ಕಡಲು ಕಾದಂಬರಿಯನ್ನು ರಚಿಸಿದ್ದಾರೆ. (ಮೋ.ಭಾಗ೪)

ಮುಂದೆ ಈ ನಾಲ್ಕು ಕಾದಂಬರಿ ಒಂದೇ ಪಾತ್ರವಾದ ಮೋಹಿನಿಯ ಬಾಳಿನ ಕತೆಯಾದ್ದರಿಂದ ಮೋಹಿನಿ ಎಂಬ ಹೆಸರಿನಲ್ಲಿ ನಾಲ್ಕು ಕಾದಂಬರಿಯನ್ನು ಒಟ್ಟಿಗೆ ಪ್ರಕಟಿಸಲಾಯಿತು. ಮೋಹಿನಿ ಪಾತ್ರವೇ ಕಾದಂಬರಿಯ ಕೇಂದ್ರವಾಗಿದೆ. ಆಕೆಯ ಬಾಳಿನ ಕತೆಯನ್ನು ಸ್ವಾರಸ್ಯವಾಗಿ ಕಾದಂಬರಿಕಾರರು ಚಿತ್ರಿಸುತ್ತಾ ಹೋಗುತ್ತಾರೆ.

ಕಥಾ ಸಾರಾಂಶ:

☼ ಕನಸಿನ ಮನೆ ☼

ಅತ್ಯಂತ ಸೌಂದರ್ಯವತಿ ಹಾಗೂ ಸುಶಿಕ್ಷಿತೆಯಾದಂತಹ ಮೋಹಿನಿಯು ಆನಂದನನ್ನು ಮದುವೆಯಾಗಿ ಮುಂಬಯಿ ನಗರಕ್ಕೆ ಬರುತ್ತಾಳೆ. ಮೋಹಿನಿ ಮದುವೆಯಾದ ನಂತರವೂ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾಳೆ. ಇವರು ಆನಂದನ ಅಕ್ಕನ ಮನೆಯಲ್ಲಿಯೇ ಇರುತ್ತಾಳೆ. ಆನಂದನ ಅಕ್ಕ ಮೋಹಿನಿ ಕಾಲೇಜಿಗೆ ಹೋಗಿ ಬರುತ್ತಿದ್ದುದರಿಂದ ಅಸಮಾಧಾನ ಇರುವುದರಿಂದ ಆನಂದನಲ್ಲಿ ಸಂಶಯದ ಬೀಜವನ್ನು ಬಿತ್ತುತ್ತಾಳೆ. ಈ ಕಾರಣದಿಂದಲೇ ಮೋಹಿನಿ ಮತ್ತು ಆನಂದರ ನಡುವೆ ಆಗಾಗ್ಗೆ ಜಗಳ, ವೈಮನಸ್ಸು ಉಂಟಾಗುತ್ತಿರುತ್ತದೆ. ಆನಂದನ ಅಣ್ಣ ಭಾಸ್ಕರ ಮೋಹಿನಿಯ ಸೌಂದರ್ಯ, ಚೆಲುವನ್ನು ಸವಿಯಲೆಂದು ಯಾವಾಗಲೂ ಹೊಂಚು ಹಾಕುತ್ತಿರುತ್ತಾನೆ. ಆಗಾಗ್ಗೆ ಮೋಹಿನಿಯನ್ನು ಹಿಂಬಾಲಿಸಿ ಅವಳ ಮೇಲೆ ಕಣ್ಣಿಟ್ಟಿರುತ್ತಾನೆ. ಅವಳ ಸ್ನೇಹ, ಒಡನಾಟ ಸರಿಯಿಲ್ಲ ಚಾರಿತ್ರ್ಯ ಸರಿಯಿಲ್ಲ ಎಂದೆಲ್ಲ ಇಲ್ಲ ಸಲ್ಲದ ಆರೋಪಗಳನ್ನು ಅವಳ ಬಗ್ಗೆ ಆನಂದನಿಗೆ ಹೇಳಿ ಅವನ ಮನಸ್ಸನ್ನೂ ಕೆಡಿಸುತ್ತಾನೆ. ಮೋಹಿನಿ ಭಾಸ್ಕರ ಹಾಗೂ ಆನಂದನ ಅಕ್ಕನ ಕಾಟದಿಂದ ಬೇಸತ್ತು ಆನಂದನಿಗೆ ಹಲವು ಬಾರಿ ಬೇರೆ ಮನೆ ಮಾಡಿ ತನ್ನನ್ನು ಕರೆದುಕೊಂಡು ಹೋಗುವಂತೆ ಕೇಳಿಕೊಳ್ಳುತ್ತಾಳೆ.

ಆನಂದ ಮತ್ತು ಮೋಹಿನಿಯರ ಸಂಬಂಧವೂ ಅಷ್ಟೇನು ಉತ್ತಮವಾಗಿರುವುದಿಲ್ಲ. ಬೇಕೆಂದಾಗಲೆಲ್ಲ ಮೋಹಿನಿಯನ್ನು ಬಲಾತ್ಕಾರದಿಂದ ಆನಂದ ಪಡೆಯುತ್ತಿರುತ್ತಾನೆ. ಅವಳು ಬೇರೆ ಮನೆ ಮಾಡುವ ವಿಚಾರ ಎತ್ತಿದಾಗೆಲ್ಲ ಏನಾದರೊಂದು ನೆವ ಹೇಳಿ ಮುಂದೂಡುತ್ತಿರುತ್ತಾನೆ.

ಇದೇ ಸಮಯದಲ್ಲಿ ಆನಂದನ ಸ್ನೇಹಿತ ವಸಂತನೊಂದಿಗೆ ಮೋಹಿನಿಯ ಸ್ನೇಹ ಬೆಳೆಯುತ್ತದೆ. ಆಕೆ ಆತನಲ್ಲಿ ತನ್ನ ಕಷ್ಟವನ್ನೆಲ್ಲಾ ಹೇಳಿಕೊಳ್ಳುತ್ತಾಳೆ. ಭಾಸ್ಕರನಿಗೆ ಇವರಿಬ್ಬರು ಒಟ್ಟಿಗೆ ಓಡಾಡುವ ವಿಚಾರ ತಿಳಿದು ಸಂಶಯದ ಬೀಜವನ್ನು ಆನಂದನಲ್ಲಿ ಬಿತ್ತುತ್ತಾನೆ. ವಸಂತ ಮೋಹಿನಿಯರ ನಡುವೆ ಪ್ರೇಮ ಮೂಡುತ್ತಿರುವಾಗ ವಸಂತ ಎಚ್ಚೆತ್ತುಕೊಳ್ಳುತ್ತಾನೆ.

ಆನಂದ ಮತ್ತು ಮೋಹಿನಿಯರ ಸಂಬಂಧ ಹಳಸುತ್ತದೆ. ಒಂದು ದಿನ ಇದೇ ವಿಚಾರವಾಗಿ ಇವರುಗಳ ನಡುವೆ ಜಗಳ ಪ್ರಾರಂಭವಾಗಿ ಮಂಗಳಸೂತ್ರವನ್ನು ಕಿತ್ತು ಆನಂದನ ಮೇಲೆ ಬಿಸಾಡಿ ಮನೆ ಬಿಟ್ಟು ಕೊನೆಗೆ ತಾಯಿಯ ಮನೆಯನ್ನು ಸೇರುತ್ತಾರೆ. ಅಲ್ಲಿಗೆ ಅವಳ ಕನಸಿನ ಮನೆಯು ಮುರಿದು ಹೋಗುತ್ತದೆ.

☼ ಕಟ್ಟಿದ ಮನೆ ☼

ತಾಯಿಯ ಮನೆಯನ್ನು ಸೇರಿದ ಮೋಹಿನಿ ಕೆಲಸದ ಹುಡುಕಾಟದಲ್ಲಿ ತೊಡಗುತ್ತಾಳೆ. ಮೋಹಿನಿಯ ತಾಯಿ ಹಾಗೂ ಅವರ ತಾತ ಮೋಹಿನಿ ಮತ್ತು ಆನಂದರಾಯರನ್ನು ಒಂದು ಮಾಡಬೇಕೆಂಬ ಪ್ರಯತ್ನ ವಿಫಲಗೊಳ್ಳುತ್ತದೆ.

ಮೋಹಿನಿ ದಾದರಿನ ಶಾಲೆಯಲ್ಲಿ ಶಿಕ್ಷಕಿಯ ಕೆಲಸ ಪಡೆದು ತನ್ನ ಸ್ನೇಹಿತೆಯಾದ ಅನುರಾಧೆಯ ಮನೆಯಲ್ಲಿ ಆಶ್ರಯ ಪಡೆಯುತ್ತಾಳೆ. ಈ ನಡುವೆ ಮೋಹಿನಿಯ ತಾಯಿ ಆನಂದನಿಗೆ ಪತ್ರ ಬರೆದು ಒಟ್ಟಾಗಿ ಬಾಳುವಂತೆ ಕೇಳಿಕೊಳ್ಳುತ್ತಾರೆ. ಆನಂದ ಬಂದು ಮೋಹಿನಿಯನ್ನು ಹೊಸ ಬಾಳನ್ನು ಪ್ರಾರಂಭಿಸೋಣ ಬಾ ಎಂದು ಕೇಳಿಕೊಳ್ಳುತ್ತಾನೆ. ಆದರೆ ಮೋಹಿನಿ ನಿರಾಕರಿಸುತ್ತಾಳೆ.

ಅನುರಾಧ ಮತ್ತು ಆಪಟೆಯರಿಂದ ಮೋಹಿನಿಗೆ ರಂಗನಾಥನ ಪರಿಚಯವಾಗುತ್ತದೆ. ರಂಗನಾಥನೂ ಅವಳ ರೂಪಕ್ಕೆ ಮಾರು ಹೋಗುತ್ತಾನೆ. ಮೋಹಿನಿ ಮುಂದೆ ಶಾಲಾ ಕೆಲಸ ಕಳೆದು ಕೊಂಡಾಗ ರಂಗನಾಥನ ಆಪ್ತ ಕಾರ್ಯದರ್ಶಿ ಕೆಲಸಕ್ಕೆ ಸೇರುತ್ತಾಳೆ. ತನಗೆ ಆಸರೆ ನೀಡಬಹುದೆಂದು ತಿಳಿದಿದ್ದ ವಸಂತ ಶಕುಂತಲೆಯನ್ನು ವಿವಾಹವಾಗುವ ವಿಚಾರ ತಿಳಿದಾಗ ಅವಳ ಹೃದಯ ಬಿರಿಯುತ್ತದೆ.

ಮೋಹಿನಿಯಲ್ಲಿ ಸುಪ್ತವಾಗಿ ಅಡಗಿದ್ದ ಅಭಿನಯ ಕಲೆಯನ್ನು ರಂಗನಾಥ ಹೊರತರುವ ಪ್ರಯತ್ನ ಮಾಡುತ್ತಾನೆ. ಇವರಿಬ್ಬರ ನಡುವೆ ಸ್ನೇಹ ಸಲಿಗೆ ಬೆಳೆಯುತ್ತದೆ. ಇವಳು ನಟಿಸಿದ ಚಿತ್ರಗಳು ಯಶಸ್ವಿಯಾಗಿ ಪ್ರಸಿದ್ಧವಾದ ನಟಿ ಎನಿಸಿಕೊಳ್ಳುತ್ತಾಳೆ. ರಂಗನಾಥ ಮೋಹಿನಿಗೆ ಬೇಕಾದ ಎಲ್ಲಾ ಸೌಲಭ್ಯ ಸವಲತ್ತು ಒದಗಿಸುತ್ತಾನೆ. ಮೋಹಿನಿ ತನ್ನ ಸರ್ವಸ್ವವನ್ನೂ ಅವನಿಗೆ ಒಪ್ಪಿಸಿಕೊಳ್ಳುತ್ತಾಳೆ. ಮೋಹಿನಿಯು "ಕಟ್ಟಿದ ಮನೆ"ಯಲ್ಲಿ ಸುಖವಾಗಿ ಜೀವಿಸುತ್ತೇನೆನ್ನುತ್ತಿರುವಾಗಲೇ ಆನಂದನು ವಿವಾಹ ವಿಚ್ಛೇದನಕ್ಕಾಗಿ ಕೇಸನ್ನು ಹಾಕುತ್ತಾನೆ ಮೋಹಿನಿಗೆ ಮತ್ತೊಂದು ತಲೆನೋವು ಬಂದೊದಗುತ್ತದೆ.

ಬಾಡಿದ ಹೂ

ಆನಂದ ಮೋಹಿನಿಯಿಂದ ವಿವಾಗ ವಿಚ್ಛೇದನಕ್ಕಾಗಿ ಹಾಕಿದ ಕೇಸಿನಿಂದ ರಂಗನಾಥ ದೂರ ಉಳಿಯಲು ಪ್ರಯಿತ್ನಿಸುತ್ತಾನೆ. ಹಲವು ದಿನಗಳು ಈ ಕೋರ್ಟ್ ಕೆಲಸದಲ್ಲಿ ಓಡಾಡಿದರೂ ಆನಂದ ಮತ್ತು ಮೋಹಿನಿಯರಿಗೆ ವಿಚ್ಛೇದನ ದೊರೆಯುವುದಿಲ್ಲ. ರಂಗನಾಥನ ಬಣ್ಣವೂ ಮೋಹಿನಿಗೆ ತಿಳಿಯುತ್ತದೆ. ಇದರಿಂದ ಇವರಿಬ್ಬರಲ್ಲಿ ತಿರಸ್ಕಾರದ ಭಾವವೂ ಉಂಟಾಗುತ್ತದೆ. ಚೆಟ್ಟಿಯಾರರ ನೆರವಿಂದ ರಂಗನಾಥ ಮದ್ರಾಸಿಗೆ ತೆರಳಿ ಅಲ್ಲಿ ಚಿತ್ರ ನಿರ್ಮಾಣ ಹಂಚಿಕೆಯ ಕೆಲಸದಲ್ಲಿ ತೊಡಗಿಕೊಳ್ಳಲು ಯೋಚಿಸುತ್ತಾನೆ. ಅದಕ್ಕೆ ಬೇಕಾದ ಸಿದ್ಧತೆಯಲ್ಲಿ ತೊಡಗುತ್ತಾನೆ.

ಮೋಹಿನಿಯನ್ನು ಜೊತೆಗೆ ಕರೆದುಕೊಂಡು ಹೋಗಬೇಕೆಂದು ಅವಳಲ್ಲಿ ಈ ವಿಚಾರ ತಿಳಿಸಿದಾಗ ಮೊದಲಿಗೆ ಅವಳು ಒಪ್ಪುವುದಿಲ್ಲ ಅನಂತರ ವಸಂತನಿಗೆ ತನ್ನ ಮನೆಯನ್ನು ಬಾಡಿಗೆಗೆ ಕೊಟ್ಟು ರಂಗನಾಥನೊಂದಿಗೆ ಮದ್ರಾಸಿಗೆ ಹೊರಡುತ್ತಾಳೆ. ಆಕೆ ನಟಿಸಿದ ಚಿತ್ರಗಳೆಲ್ಲ ಯಶಸ್ಸು ಕಂಡು ಅಪಾರ ಕೀರ್ತಿ, ಹಣ ಸಂಪಾದಿಸುತ್ತಾಳೆ.

ಮೋಹಿನಿ ಬಯಸಿದ್ದೆಲ್ಲ ದೊರೆತರೂ ಮನಸ್ಸಿನ ಆಳದಲ್ಲಿ ಯಾವುದೇ ಒಂದು ರೀತಿಯ ಅಸಮಾಧಾನ ಇದ್ದೇ ಇರುತ್ತದೆ. ಪುಣೆಯಲ್ಲಿ ಇದ್ದ ಆಕೆಯ ಅಜ್ಜ ತೀರಿಕೊಂಡ ಸುದ್ದಿ ಆಘಾತವನ್ನು ಉಂಟುಮಾಡುತ್ತದೆ. ಆಕೆಯು ಬಾಡಿದ ಹೂವಾಗುತ್ತಾಳೆ ತಾಯಿ ಒಂಟಿಯಾದಳು ಅವಳನ್ನು ತನ್ನ ಜೊತೆಗೆ ಇಟ್ಟುಕೊಳ್ಳಬೇಕೆಂದು ನಿರ್ಧರಿಸುತ್ತಾಳೆ. ವಸಂತನ ಸಹಾಯವನ್ನು ಪಡೆದುಕೊಂಡು ಮುಂಬಯಿಯಲ್ಲಿ ಮನೆ ಖರೀದಿಸುವ ಪ್ರಯತ್ನದಲ್ಲಿ ತೊಡಗುತ್ತಾಳೆ.

ಕತ್ತಲೆಯ ಕಡಲು

ರಂಗನಾಥನು ಸೌಂದರ್ಯವಲ್ಲಿಯೊಂದಿಗೆ ಅನುರಕ್ತನಾಗಿರುವ ವಿಚಾರ ಮೋಹಿನಿಗೆ ತಿಳಿಯುತ್ತದೆ. ಮದ್ರಾಸಿಗೆ ಹೊರಡುವ ತೀರ್ಮಾನ ಮಾಡಿ ರಂಗನಾಥನಿಗೂ ತಿಳಿಸುತ್ತಾಳೆ. ಅವನಿಗೆ ಇಷ್ಟವಿಲ್ಲದಿದ್ದರೂ ಹೊರಡುವ ವಿಚಾರ ತಿಳಿಸಿ ಸಣ್ಣದಾಗಿ ಔತಣ ಕೂಟ ಏರ್ಪಡಿಸುತ್ತಾಳೆ. ಒಳ್ಳೆಯ ಸಮಯಕ್ಕಾಗಿ ಕಾದಿದ್ದ ಆರ್ಮುಗಂ ಮತ್ತು ಬರುವಂತೆ ಮಾಡಿ ಮೋಹಿನಿಯ ಮೇಲೆ ಬಲಾತ್ಕಾರ ಎಸಗುತ್ತಾನೆ. ಇದರಿಂದಾಗಿ ಮೋಹಿನಿಯ ಮನಸ್ಸು ಆಘಾತಗೊಳ್ಳುತ್ತದೆ. ಮದ್ರಾಸಿಗೆ ಬಂದು ವಸಂತನ ನೆರವಿನಿಂದ ಮನೆ ಖರೀದಿಸಿ ತನ್ನ ತಾಯಿಯನ್ನು ಕರೆತರಲೆಂದು ಹೋದಾಗ ಒಪ್ಪಿಗೆ ಇಲ್ಲದ ತಾಯಿ ಜಾರಿ ಬಿದ್ದು ಸಾವನಪ್ಪುತ್ತಾಳೆ. ಈ ಎಲ್ಲಾ ವಿಚಾರದಿಂದ ಮಾನಸಿಕ ಅಶಾಂತಿ ಉಂಟಾಗುತ್ತದೆ. ತನ್ನ ಬಳಿ ಇದ್ದ ಎಲ್ಲಾ ಆಸ್ತಿಯನ್ನು ವಸಂತ ಮತ್ತು ಆನಂದನಿಗೆ ಬರೆಯುತ್ತಾಳೆ. ಅವಳ ಸ್ನೇಹಿತೆ ಅನುರಾಧೆ ಮತ್ತು ಆಪಟೆ ಅವಳನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಹೀಗೆ ಮೋಹಿನಿಯ ಬದುಕು "ಕತ್ತಲೆಯ ಕಡಲಿನಲ್ಲಿ" ಮುಳುಗಿ ಹೋಗುತ್ತದೆ.

ಆಸ್ಪತ್ರೆಯಲ್ಲಿ ವಿಚಿತ್ರವಾದ ಮಾನಸಿಕ ಯಾತನೆಯಲ್ಲಿ ತನ್ನ ಕೊನೆಯ ದಿನಗಳನ್ನು ಕಳೆಯುತ್ತಾಳೆ. ಹೀಗೆ ಮೋಹಿನಿಯ ಜೀವನದ ಕತೆಯು ನಾಲ್ಕು ಭಾಗಗಳಲ್ಲಿ ಮುಂದುವರಿದು ಮುಕ್ತಾಯ ಹೊಂದುತ್ತದೆ.

ಇನಾಂದಾರರು ಕನಸಿನ ಮನೆಯ ಅರಿಕೆಯಲ್ಲಿ ಈ ರೀತಿ ಹೇಳಿದ್ದಾರೆ. ಇದುವರೆಗೆ ಸ್ವತಂತ್ರವಾಗಿ ನಿಂತಿದ್ದ ಕಾದಂಬರಿ ಮೋಹಿನಿ ಕಥೆಯ ಒಂದು ಭಾಗವಾಗಿ ಇಡೀ ಕಥೆಯ ನಾಲ್ಕರಲ್ಲೊಂದನೆಯ ಅಂಶವಾಗಿ ಪ್ರಕಟವಾಗುತ್ತಿದೆ. ಅರ್ಧಕ್ಕೆ ನಿಂತ ಕತೆ ಪೂರ್ತಿಯಾಗಿ ಒಟ್ಟು ಪರಿಣಾಮದ ಸಮಗ್ರತೆಯನ್ನು ಏಕಮುಖತೆ ಗುರುತಿಸುವುದಕ್ಕೆ ಅವಕಾಶ ಉಂಟಾಗಿದೆ ಎನ್ನುವುದು ಇನ್ನೊಂದು ವಿಶೇಷ ಎಂದು ಹೇಳುತ್ತಾರೆ.

ಆಯಾ ಭಾಗದ ಕಥೆಯ ತಿರುಳನ್ನು ಸಂಕ್ಷಿಪ್ತವಾಗಿ, ಅರ್ಥಪೂರ್ಣವಾಗಿ ಪದಗಳಲ್ಲಿ ಅಡಕಗೊಳಿಸುವುದೂ ಒಂದು ಕಲೆಯೇ ಸರಿ. ಶಿರೋನಾಮೆಯ ಅಡಿಯಲ್ಲಿ ಮೋಹಿನಿಯ ಕಥಾ ಭಾಗ ಹಂತ ಹಂತವಾಗಿ ಬೆಳೆಸಿಕೊಂಡು ಹೋಗಿರುವುದು ಕೂಡ ವಿಶಿಷ್ಟವೇ ಎಂದು ಹೇಳಬಹುದು.

ಶಿರೋನಾಮೆಗಳು ಆ ಭಾಗದಲ್ಲಿ ಬರುವ ವಿಚಾರವನ್ನು ನೀಡುತ್ತದೆ. ಮೋಹಿನಿಯ ಮನೋವೃತ್ತಿ ಹಾಗೂ ಅವಳು ಎದುರಿಸುವಂತಹ ಸಮಸ್ಯೆಗಳನ್ನು ಚಿತ್ರಿಸುತ್ತಾ ಹೋಗುತ್ತಾರೆ.

ಯಾವುದೋ ಒಂದು ಎಳೆಯನ್ನು ಹಿಡಿದು ಕಥೆಯನ್ನು ಕಟ್ಟುತ್ತಾ ಹೊರಟ ಇನಾಂದಾರರು ಒಂದು ಅದ್ಭುತವಾದ ಕಲಾಕೃತಿಯನ್ನು ನೀಡಿದ್ದಾರೆ. ಕನಸಿನ ಮನೆಯನ್ನು ಕಟ್ಟುವಲ್ಲಿ ಪ್ರಾರಂಭವಾಗುವ ಮೋಹಿನಿಯ ಬಾಳಿನ ಕತೆಯು ಕತ್ತಲೆಯ ಕಡಲಿನಲ್ಲಿ ಮುಳುಗಿ ಹೋಗುವಲ್ಲಿ ಮುಕ್ತಾಯವನ್ನು ಕಾಣುತ್ತದೆ. ಈ ಮೋಹಿನಿಯ ಕಥೆಯನ್ನು ಬರೆದು ಮುಗಿಸಲು ಲೇಖಕರು ೨೭ ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಕಾದಂಬರಿಯ ಪ್ರಧಾನ ಪಾತ್ರ (ಮೋಹಿನಿ) ಅವರ ಮನಸ್ಸಿನಲ್ಲಿ ಯಾವ ರೀತಿ ಕಾಡಿರಬೇಕು ಎಂಬ ಪ್ರಶ್ನೆ ಏಳುತ್ತದೆ. ಒಂದು ಅದ್ಭುತ ಶಿಲ್ಪವಾಗಿ ಹೊರಮೂಡುವುದಕ್ಕಾಗಿಯೇ ಇಷ್ಟು ಸಮಯ ಹಿಡಿದಿರಬೇಕೆನಿಸುತ್ತದೆ.

ವಾಸ್ತವವಾದದ ಹಿನ್ನೆಲೆಯಲ್ಲಿ ಮೋಹಿನಿ ಕಾದಂಬರಿಯು ಕನ್ನಡ ಕಾದಂಬರಿ ಲೋಕದ ಮಹತ್ವದ ಕೃತಿ. ಸ್ತ್ರೀವಾದದ ಹಿನ್ನೆಲೆಯಲ್ಲಿ ಚರ್ಚೆಗೆ ಒಳಗಾಗುವ ಕಾದಂಬರಿ ಮೋಹಿನಿ ಪಾತ್ರದ ಪ್ರಜ್ಞೆಯನ್ನು ಕನಸುಗಳ ಮುಖಾಂತರ ಚಿತ್ರಿಸಲಾಗಿದೆ. ಇಲ್ಲಿ ಬರುವ ವಾಸ್ತವತೆ ಒಂದು ರೂಪದಲ್ಲಿ **Dream Reality** ಸ್ವಪ್ನವಾಸ್ತವತೆ. ಕನಸು ಪ್ರಜ್ಞಾಪ್ರವಾಹ ವಿಧಾನದಲ್ಲಿ ಕಾದಂಬರಿಯ ಮೂಲವಸ್ತುವಾಗಿದೆ. ವಿಚಾರವಾದಿಯಾಗಿ ಕಾಣುವ ಪ್ರಗತಿಪರ ಆಲೋಚನೆ ನಾಯಕಿ ಪಾತ್ರದಲ್ಲಿ ತರಲು ಪ್ರಯತ್ನಿಸಿ ಪುರುಷ ಸಾಮಾಜಿಕತೆ, ಪುರುಷದಾಹ, ಪುರುಷಪ್ರಧಾನಕ್ಕೆ ಹೆಣ್ಣನ್ನು ನಲುಗಿಸಿರುವ ರೀತಿ ನೋಡಿದಾಗ ಕಾದಂಬರಿಯುದ್ದಕ್ಕೂ ನಾಯಕಿ ಶೋಷಿತಳಾಗುತ್ತಲೇ ಬರುತ್ತಾ ಹೆಣ್ಣಿನ ಮೇಲಿನ ದೌರ್ಜನ್ಯವನ್ನೇ ಕಾದಂಬರಿ ಎತ್ತಿ ಹೇಳುತ್ತಾಸಾಗಿ, ಒಂದೆಡೆ ಅವಳ ಕನಸಿನ ಮೇಲ್ನಡಿಗೆ ತುಳಿಯುವ ಆಲೋಚನೆಯೇ ಬಲಿತವಾಗಿದೆ.

ತಾನು ಪ್ರೀತಿಸಲು ಹೊರಟ ವಸಂತನಿಂದಲೂ ವಂಚಿತಳಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ಆನಂದನ ದೌರ್ಜನ್ಯದಿಂದ ಮುಕ್ತಳಾಗಿ ಕೊನೆಗೆ ರಂಗನಾಥನ ಹಿಂದೆ ಬೀಳಬೇಕಾದ ಪರಿಸ್ಥಿತಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವ ದುರಂತಪಾತ್ರವಾಗಿದೆ. ಇಷ್ಟೆಲ್ಲಾ ಆದರೂ ಕೂಡ ಆತ್ಮಹತ್ಯೆಗೆ ಪ್ರಯತ್ನಿಸದ ದಿಟ್ಟತನ ಆಕೆಯದು. ಇಷ್ಟೆಲ್ಲಾ ದುರಂತದ ನಡುವೆ ತಾನು ಏತಕ್ಕಾಗಿ ಬದುಕುತ್ತಿದ್ದೇನೆ? ಎತ್ತರದ ಕನಸು ತನ್ನ ಶೀಲವನ್ನು ಝುಂಕಿಸಿಕೊಂಡು ಈ ರೀತಿ ಪಾತ್ರ ಗೋಜಲುಗೊಳ್ಳುವ ಅಗತ್ಯ ಇತ್ತೇ? ಸಾಧಿಸಿದ್ದಾದರೂ ಏನು? ಗೆಲ್ಲುವೆ ಎಂಬ ಹಠವೇ ಕಾರಣ ಇರಬಹುದು. ತನ್ನವರನ್ನು ಕಳೆದುಕೊಂಡು ಬೇರೆಯವರನ್ನು ಹುಡುಕಿಕೊಂಡು ಹೋಗುವ ಎಲ್ಲಾ ಕಳೆದುಕೊಂಡು ಹಿಂತಿರುಗುವ ಮೋಹಿನಿಗೆ ಮಾರಕವಾದದ್ದು ಅವಳ ಮೋಹಕ ರೂಪವೇ ಎಂದು ಕಾದಂಬರಿ ಉದ್ದಕ್ಕೂ ಹೇಳಿದಂತಿದೆ.

ತನ್ನ ಮನಸ್ಸಿನಂತೆ ಬದುಕಲು ಹೆಣ್ಣನ್ನು ಎಂದು ಪುರುಷವರ್ಗ ಬಿಡುವುದಿಲ್ಲ. ಅಸಹಾಯಕತೆ, ಶಿಕ್ಷಣ, ದುಡ್ಡು ಇದ್ದು ಮೋಹಿನಿಗೆ ಬದುಕಿನುದ್ದಕ್ಕೂ ಕಾಡಿದೆ.

ಮಾನವೀಯ ಆಸಕ್ತಿಗಿಂತ ಅವಳಿಗೆ ಕನಸಿನ ಶಿಖರವೇ ಮುಖ್ಯವಾಗಿತ್ತೇ? ಸಮಾಜ ಸಂಸ್ಕೃತಿ, ಸಂವಿಧಾನ ಹೆಣ್ಣಿನ ಆಲೋಚನೆಗೆ ಸ್ವಾತಂತ್ರಕ್ಕೆ ಖಂಡಿತ ನೆರವಾಗಲಾರದು.

ಮೋಹಿನಿಯ ಶಿಕ್ಷಣ ಅವಳ ಸ್ವತಂತ್ರ ಆಲೋಚನೆಗೆ ದಾರಿ ಮಾಡಿದೆ. ಈ ಶಿಕ್ಷಣ, ಈ ಹೊಸ ಸ್ವತಂತ್ರ ಆಲೋಚನೆ ನಾಗರೀಕತೆ ಮತ್ತು ಸಮಾಜದ ರೂಢಿಗತ ವ್ಯವಸ್ಥೆಯ ಸಂಘರ್ಷಕ್ಕೆ ಮೋಹಿನಿ ಸಿಲುಕುತ್ತಾಳೆ. ಹೆಣ್ಣಿನ ಸಮರ್ಪಣಾಭಾವ ಸಮರಸತೆ ಬಯಸುವ ಗೋಕಾಕರ "ಸಮರಸವೇ ಜೀವನ" ಈ ಕಾದಂಬರಿಗಿಂತ ವಿರೋಧದ ನೆಲೆಯಲ್ಲಿ ಹರಿದಿದೆ. ಕಾಲ ಪ್ರವಾಹದಲ್ಲಿ ಮನುಷ್ಯ ಸಂಬಂಧ ಹಳಸಿ ಗ್ರಾಹಕ ಧೋರಣೆಗೆ ಬಲಿಯಾದ ಪಾತ್ರವಾಗುವ ಮೋಹಿನಿ ಕಾದಂಬರಿಯ ಕೊನೆಗೆ ತನ್ನ ನಿರಂತರ ಪ್ರಚೋದಕ ಶಕ್ತಿಗೆ ಪರದೆ ಎಳೆದು ನಿರ್ಲಿಪ್ತವಾಗುವ ರೀತಿಯನ್ನು ಬಹಳ ಶೋಚನೀಯವಾಗಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ವಾಸ್ತವವಾದಿ ಆಶಯಕ್ಕಿಂತ ಕಾದಂಬರಿ ಸುಧಾರಣಾ ಮನೋಭಾವದಿಂದ ಬೆಳೆಸಿರುವ ಸಂದರ್ಭದಲ್ಲಿ ಯಾವ ಕಾಲಘಟ್ಟಕ್ಕೂ ನಿಲುಕದ ಕೃತಿಯಾಗಿದೆ. ಇದೊಂದು ಬೃಹತ್ ಕಾದಂಬರಿ "ಎಪಿಕ್" ತರಹ ಬೆಳೆಸಿದ್ದಾರೆ. ಕೃತಿಕಾರರ ಆಯುಷ್ಯದ ಅರ್ಧ ಅವಧಿ ಒಂದು ಕೃತಿಗಾಗಿಯೇ ಮೀಸಲಿಟ್ಟಿದ್ದಾರೆ ಎಂದರೆ ಆ ಪಾತ್ರ ಜೊತೆಗೆ ಅವರು ಬೆಳೆಸಿಕೊಂಡಿದ್ದ ಅವಿನಾಭಾವ ಸಂಬಂಧ ನೆನಪಾಗಿ ಈ ಪಾತ್ರವನ್ನು ತಮ್ಮ ಬದುಕಿನಲ್ಲಿ ಕಂಡು ಪಾತ್ರ ಬೆಳಯುತ್ತಾ ಹೋದಾಗ ಆ ಜೀವನವನ್ನೇ ಚಿತ್ರಿಸಿದ್ದಾರೋ ಎಂಬ ಅನುಮಾನ ಕೂಡ ಕಾಡುವುದು.

ಅಧ್ಯಾಯ – ೫

ಕಾದಂಬರಿಯಲ್ಲಿನ ಪಾತ್ರಗಳ ಮನೋವಿಶ್ಲೇಷಣೆ

ಅಧ್ಯಾಯ – ೫

ಕಾದಂಬರಿಯಲ್ಲಿನ ಪಾತ್ರಗಳ ಮನೋವಿಶ್ಲೇಷಣೆ

ಪಾತ್ರ ಎಂದರೆ:

ವಿಶಿಷ್ಟ ಸ್ವಭಾವದ ವ್ಯಕ್ತಿಯೊಬ್ಬನನ್ನು ಕುರಿತು, ಸಂಕ್ಷಿಪ್ತವಾದ, ಜಾಣತನದ, ಗದ್ಯದಲ್ಲಿ ರಚಿತವಾದ ಚಿತ್ರ, ಸಾಹಿತ್ಯ ಮತ್ತು ವಿಮರ್ಶೆಯಲ್ಲಿ ಪಾತ್ರ ಎಂಬುದು ಯಾವುದೇ ಕೃತಿಯ ಸಂದರ್ಭದಲ್ಲಿ ಭಾಷೆಯ ಮೂಲಕ ಚಿತ್ರಿತವಾದ ನಿಜ ಜೀವನ, ವ್ಯಕ್ತಿಗಳ ಗುಣ, ಸ್ವಭಾವಗಳನ್ನು ಆಧರಿಸಿದ, ಅವುಗಳಿಂದ ಪ್ರೇರಣೆ ಪಡೆದ, ಕಾಲ್ಪನಿಕ ಪ್ರತಿರೂಪ.

ಪಾತ್ರ ಚಿತ್ರಣಕ್ಕೂ ಕಥಾ ಸಂವಿಧಾನಕ್ಕೂ ನಿಕಟ ಸಂಬಂಧವಿದೆ. ಪಾತ್ರಗಳು ಮತ್ತು ಕಥಾ ಸಂವಿಧಾನಗಳು ಕೃತಿಯ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನುವಹಿಸುತ್ತದೆ. ಎಲ್ಲಾ ಲೇಖಕರು ಪಾತ್ರ ಚಿತ್ರಣದಲ್ಲಿ ಕೆಲವು ಮೂಲಭೂತ ಅಂಶಗಳು ಗಮನಿಸುತ್ತಾರೆ.

೧.ಪಾತ್ರದ ಕ್ರಿಯೆ, ೨. ಪಾತ್ರದ ಮಾತು ಮತ್ತು ಭಾಷೆ, ೩ .ಪಾತ್ರದ ಮನಸ್ಸಿನ ಆಲೋಚನೆ, ನಂಬಿಕೆ ,೪. ಪಾತ್ರಗಳ ದೈಹಿಕ ರೂಪ, ೫.ಒಂದು ಪಾತ್ರದ ಬಗ್ಗೆ ಇತರ ಪಾತ್ರಗಳು ಏನು ಹೇಳುತ್ತವೆ ಮತ್ತು ಆಲೋಚಿಸುತ್ತವೆ ಎಂಬುದು.

ಪಾತ್ರದ ಮನೋಭಾವ ಮತ್ತು ನೈತಿಕ ಸ್ವಭಾವ ಅದರ ಕ್ರಿಯೆ ಮತ್ತು ಮಾತುಗಳನ್ನು ನಿಯಂತ್ರಿಸುತ್ತವೆ. ಒಂದು ಪಾತ್ರ ಕೃತಿಯ ಆರಂಭದಿಂದ ಅಂತ್ಯದವರೆಗೆ ಬದಲಾಗದೆ ಸ್ಥಿರವಾಗಿ ಉಳಿಯಬಹುದು. ಈ ಸ್ಥಿರತೆಯಲ್ಲಿ ಪಾತ್ರದ ಮನೋಭಾವ ದೃಷ್ಟಿಕೋನ, ಸ್ವಭಾವದಲ್ಲಿ ಗುರುತಿಸಬಹುದು.

ಪಾತ್ರಗಳಲ್ಲಿ ಅಪಾರ ವೈವಿಧ್ಯವನ್ನು ಗುರುತಿಸಬಹುದು. ಕೆಲವು ಕೃತಿಯ ಕೇಂದ್ರವಾಗಿರುತ್ತವೆ. ಇತರ ಕೆಲವು ಅಮುಖ್ಯವಾಗಿದ್ದು ಕಥೆಗೆ ಸಹಾಯಕವಾಗಿರುತ್ತವೆ.

ಇನಾಂದಾರರು ಪಾತ್ರಗಳನ್ನು ಚಿತ್ರಿಸುವ ರೀತಿ ವಿಶಿಷ್ಟ ಬಗೆಯದು. ಪಾತ್ರಗಳ ಅಂಗಾಂಗ, ವೇಷ-ಭೂಷಣಗಳ ಬಗ್ಗೆ ಎಲ್ಲಿಯೂ ಅವರು ವಿವರಣೆಯಾಗಲಿ ಚಿತ್ರಣವನ್ನಾಗಲಿ ನೀಡುವುದಿಲ್ಲ ಬದಲಾಗಿ ಪಾತ್ರಗಳ ಸ್ವಭಾವದಿಂದ ಸ್ಪಷ್ಟವಾಗಿ ಕಲ್ಪನೆಯನ್ನು ಒದಗಿಸುತ್ತಾರೆ ಹಾಗೂ ಓದುಗರಿಗೆ ಚಿರಪರಿಚಿತವಾಗುವಂತಹ ಪಾತ್ರಗಳಾಗಿಸುತ್ತಾರೆ.

ಪ್ರಸ್ತುತ ಕಾದಂಬರಿಯ ಕಥಾನಾಯಕಿಯೇ ಇಲ್ಲಿಯ ಪ್ರಧಾನ ಪಾತ್ರ (ಮೋಹಿನಿ) ಇವಳ ಸುತ್ತ ಸುತ್ತುವಂತಹ ಕೆಲವು ಪಾತ್ರಗಳನ್ನು ನಾವು ಕಾಣಬಹುದಾಗಿದೆ.

ಇನಾಂದಾರರು ತಮ್ಮ ಕಾದಂಬರಿಯಲ್ಲಿ ಹೆಚ್ಚಾಗಿ ವಿದ್ಯಾವಂತ ಮಹಿಳೆಯರನ್ನೇ ಜೀವನದ ಸ್ಥಿತ್ಯಂತರಗಳಿಗೆ ಸಿಲುಕಿಸಿ ಅವರನ್ನು ಒರೆಗೆ ಹೆಚ್ಚುತ್ತಾರೆ. ಆದ್ದರಿಂದಲೇ ಸ್ತ್ರೀ ಪಾತ್ರಗಳು ಹೆಚ್ಚು ಕ್ರಿಯೋನ್ಮುಖವಾಗಿವೆ ಎನಿಸುತ್ತದೆ. ಈ ಪತ್ರಗಳು ಸಮಾಜ ಒಪ್ಪಿದ ಮೌಲ್ಯ ವ್ಯವಸ್ಥೆ ಮತ್ತು ನೀತಿ ಸಂಹಿತೆಯ ಪರಿಸ್ಥಿಯಲ್ಲಿಯೇ ಚಿತ್ರಿತವಾಗಿ ಹಳೆಯದನ್ನು ಪ್ರತಿಭಟಿಸಿ ಹೊಸ ಆವಿಷ್ಕಾರಕ್ಕೆ ಒಡಮೂಡುವುದು ಅವರಿಗೆ ಹೆಚ್ಚು ಒಲವಿರಲಿಲ್ಲವೇನೋ ಎನಿಸಿ ಅಂತ ಪಾತ್ರಗಳು ಸೃಷ್ಟಿಯಾದಾಗ ದುರಂತ ಅಂತ್ಯ ಕಾಣುವಂತೆ ಅನಿಸುತ್ತದೆ.

ಈ ಕಾದಂಬರಿಯಲ್ಲಿ ಕಥಾನಾಯಕಿಯಾದ ಮೋಹಿನಿಯದ್ದು ಪ್ರಧಾನ ಪಾತ್ರವಾಗಿದೆ. ಇವಳ ಸುತ್ತ ಬರುವಂತಹ ಅತ್ಯಂತ ಜಿಪುಣನಾದ ಆಕೆಯ ತಾತ, ಗಂಡನನ್ನು ಕಳೆದುಕೊಂಡು ಮೋಹಿನಿಗಾಗಿ ಬದುಕುತ್ತಿದ್ದ ಆಕೆಯ ತಾಯಿ, ಅವಳ ದೇಹದಿಂದ ಆಕರ್ಷಿತನಾಗಿ ಉಳಿದೆಲ್ಲ ವಿಷಯದಿಂದ ಕುರುಡನಾದ ಗಂಡ, ಸಮಯ ಸಾಧಕನಾದ ರಂಗನಾಥ, ಅಸಹಾಯಕ ಪರಿಸ್ಥಿತಿಯಲ್ಲಿ ಸಹಾನುಭೂತಿ ತೋರಿ ಪ್ರೀತಿ ಮೂಡುತ್ತಿದ್ದಂತೆ ಅವಳಿಂದ ಓಡಿಹೋದಂತಹ ವಸಂತ, ಸ್ನೇಹಿತೆಯಾದ ಅನುರಾಧೆ ಆಕೆಯ ಗಂಡ ಆಪಟೆ ಇವರೇ ಈ ಕಥಾನಾಯಕಿಯ ಆಪ್ತವಾಗಿ ಸುತ್ತುವರಿದ ಪಾತ್ರಗಳಾಗಿವೆ. ೩೧

ಮೋಹಿನಿ

ಕಾದಂಬರಿಯ ಪ್ರಧಾನ ಪಾತ್ರ ಕಥಾನಾಯಕಿಯಾದ ಮೋಹಿನಿಯದ್ದು. ಸೌಂದರ್ಯವತಿ, ಸುಶಿಕ್ಷಿತೆಯಾದ ಇವಳು ಸಂಕೀರ್ಣವಾದಂತ ಭಾವನೆಗಳಿಂದ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಪತಿಯೇ ಪರದೈವನೆಂದು ಸಂಪ್ರದಾಯವನ್ನು ಒಪ್ಪಿಕೊಂಡು ಬಂದಂತ ಮೋಹಿನಿಗೆ ಸಂಪ್ರದಾಯದಕ್ಕೆ ವಿರುದ್ಧವಾಗಿ ಹೋಗಬೇಕಾದಂತಹ ಪರಿಸ್ಥಿತಿ ಒದಗಿ ಬರುತ್ತದೆ. ದೈವ ಎಂದು ಒಬ್ಬ ಹೆಣ್ಣು ಮಗಳು ತನ್ನವರನ್ನು ತೊರೆದು ಬಂದಾಗ ದೈವದಂತೆ ವರ್ತಿಸುವ ಯೋಗ್ಯತೆ ಇರಬೇಕಲ್ಲವೆ? ಗಂಡನು ಹೆಂಡತಿಯಲ್ಲಿ ಅಪೇಕ್ಷಿಸುವ ಹೃದಯ ಮಾರ್ದವತೆ, ಸಹನೆ, ಅತನಲ್ಲೂ ಸತಿಯಾದವಳು ಅಪೇಕ್ಷಿಸುವುದರಲ್ಲಿ ತಪ್ಪೇನು ಇಲ್ಲ ಎನಿಸುತ್ತದೆ. ಏಕೆಂದರೆ ಮೋಹಿನಿ ಬಯಸಿದ್ದು ಅದನ್ನೇ ಇದಕ್ಕಾಗಿ ವ್ಯಕ್ತಿತ್ವವನ್ನೇ ಬಲಿಕೊಡ ಬೇಕೆಂಬುದರಲ್ಲಿ ಯಾವ ನ್ಯಾಯವೂ ಇಲ್ಲ ಎನಿಸುತ್ತದೆ. ಗಂಡನ ಮನದಂತೆ ಅವನ ಸೌಜನ್ಯವನ್ನು ಸಹಿಸಿಕೊಂಡು ಅವನ ಬಂಧುಗಳ ದಾಸಿಯಾಗಿ ಸ್ವಲ್ಪವೂ ಸ್ವಾತಂತ್ರವಿಲ್ಲದೆ ಬದುಕುವುದರಲ್ಲಿ ಯಾವ ಅರ್ಥವೂ ಇಲ್ಲ ಎನಿಸುತ್ತದೆ. ವಿದ್ಯಾವಂತೆ, ಸುಲಕ್ಷಣೆಯಾದ ಮೋಹಿನಿ ಗಂಡನೊಂದಿಗೆ ಸುಖವಾದ ದಾಂಪತ್ಯ ಜೀವನ ನಡೆಸಬೇಕೆಂದು ಬಂದಾಗ ದೊರೆತದ್ದು ಒಂದೆಡೆ ಭಾಸ್ಕರನ ಕಾಮುಕ ಕಣ್ಣು, ಬಂಧುಗಳ ಕಿರುಕುಳ, ಗಂಡನ ದಬ್ಬಾಳಿಕೆ ಹಾಗೂ ಕ್ರೌರ್ಯ, ಈ ಎಲ್ಲ ಮೃಗೀಯ ವರ್ತನೆಯನ್ನು ಸಹಿಸಲಾರದ ಆಕೆ ವಸಂತನ ಸಹಾನುಭೂತಿ, ಆಶ್ರಯ ಪಡೆಯಬಹುದೆಂಬ ಆಸೆಯಿಂದ ಆ ಮನೆಯಿಂದ ಬಿಡುಗಡೆಯನ್ನು ಬಯಸುತ್ತಾಳೆ.

ಆನಂದನಲ್ಲಿ ದೊರೆಯದಿದ್ದ ಪ್ರೀತಿ, ಸುಖವನ್ನು ವಸಂತನಲ್ಲಿ ಅರಸುತ್ತಾಳೆ. ವಸಂತನನ್ನು ತನ್ನ ಭಾವಜೀವನದ ಕೇಂದ್ರವೆಂದೇ ನೆನೆಯುತ್ತಾಳೆ. ವಸಂತನ ಸಹಾನುಭೂತಿ ಆನಂದನ ಕುರಿತ ತಿರಸ್ಕಾರಕ್ಕೆ ಇನ್ನಷ್ಟು ಪ್ರೇರಣೆ ನೀಡುತ್ತದೆ.

ವಸಂತ ಶಕುಂತಲೆಯನ್ನು ಮದುವೆ ಮಾಡಿಕೊಳ್ಳುತ್ತಾನೆ ಎಂದು ತಿಳಿದಾಗ ಒಂದೆಡೆ ಅವನು ದೂರವಾದನೆಂಬ ಕಳವಳ ಉಂಟಾದರೆ ಮತ್ತೊಮ್ಮೆ ಅತ ದೂರವಾದರೆ ತನಗೇನೆಂಬ ಅಭಿಮಾನ, ಆತ್ಮವಿಶ್ವಾಸದಿಂದ ಜೀವನ ಎದುರಿಸಲು ಮುಂದಾಗುತ್ತಾಳೆ. ಅವಳು ಬಯಸಿದ್ದು ಫಲಿಸದಾಗುತ್ತದೆ. "ಒಂದು ನಿಲುಕದ ಹೂವಾದರೆ ಇನ್ನೊಂದು ಅಸಾಧ್ಯವಾಗುತ್ತದೆ."

ಜೀವನದ ನಿರಾಶೆ, ಹತಾಷೆಗಳೇ ಅವಳ ಹುಚ್ಚು, ಹಠಕ್ಕೆ ಮುನ್ನಡೆ ನೀಡಿತು ಎನಿಸುತ್ತದೆ. ಒಂದು ಮಟ್ಟದಲ್ಲಿ ಲೋಕದ ಚಿಂತೆಗಿಂತ ತನ್ನ ಆತ್ಮವಿಶ್ವಾಸ ಮುಖ್ಯ ಎಂದು ತಿಳಿದಂತೆ ಕಂಡು ಬರುತ್ತದೆ. ಆ ನಂಬಿಕೆ ಹಾಗೂ ವಿಶ್ವಾಸ ಮುಂದೆ ಆನಂದ ಬಂದು ಕರೆದಾಗ ಒಪ್ಪದಂತೆ ಮಾಡಲು ಕಾರಣವಿರಬಹುದೇನೋ ಎನಿಸುತ್ತದೆ.

ಅವಳು ಕಟ್ಟಬೇಕೆಂದಿದ್ದ ಕನಸಿನ ಮನೆ ನಿರಾಶೆಯ ಕೂಪಕ್ಕೆ ಇಳಿದಾಗ ಆ ನಿರಾಸೆ ಛಲವಾಗಿ ಬೆಳೆದು ಅದು ಅಪಾಯ ಸೂಚಿ ಎಂಬ ತಿಳುವಳಿಕೆ ಇಲ್ಲದಾಗುತ್ತದೆ. ಅವಳಲ್ಲಿ ಇದ್ದ ಬಂಡವಾಳವೆಂದರೆ ಆತ್ಮಸ್ಥೈರ್ಯ ಹಾಗೂ ಸೌಂದರ್ಯ. ಇದು ಇಲ್ಲದಿದ್ದರೆ ವಸಂತನ ಪ್ರೀತಿಯಾಗಲಿ, ರಂಗನಾಥನ ಆಶ್ರಯವಾಗಲಿ ಅವಳಿಗೆ ದೊರೆಯುತ್ತಿರಲಿಲ್ಲವೇನೋ. ಬಯಸ್ಸಿದ್ದೆಲ್ಲಾ ಪಡೆಯಬೇಕೆಂಬ ಚಪಲ. ಹಠದಿಂದ ರಂಗನಾಥನ ಹಣಕ್ಕಾಗಿ ದೇಹವನ್ನೇ ಅರ್ಪಿಸಿಕೊಳ್ಳುತ್ತಾಳೆ. ರಂಗನಾಥನಲ್ಲೂ ವಸಂತನನ್ನು ಕಾಣುತ್ತಾಳೆ. ಒಂದು ರೀತಿ ವಸಂತ ಅವಳ ಭಾವಜೀವನದ ಕೇಂದ್ರ ವ್ಯಕ್ತಿಯಾಗಿ ಕಾಣುತ್ತಾನೆನಿಸುತ್ತದೆ.

ರಂಗನಾಥನ ಸ್ನೇಹದಿಂದ ಯಶಸ್ಸು, ಹಣದೊಂದಿಗೆ ಅವನಿಗೂ ತನಗೂ ದೊರೆತ ಅವಕಾಶ ಅವಳ ಮನೋವೈಶಾಲ್ಯವನ್ನು ತೋರಿಸುತ್ತದೆ. ಈ ಕಾರಣದಿಂದ ದೊರೆತ ತಾತ್ಕಾಲಿಕ ಸಂತೃಪ್ತಿಯಲ್ಲೇ ತೃಪ್ತಳಾಗುತ್ತಾಳೆ.

"ಹೆಂಡತಿಯಾಗಿ ಪರಿಮಿತ ಸ್ವಾತಂತ್ರ್ಯವನ್ನು ಒಂದು ಕಾಲಕ್ಕೆ ಒಪ್ಪಬಹುದಾಗಿದ್ದ ಈಕೆಗೆ ವಿಶಾಲ ಪ್ರಪಂಚವೇ ತನ್ನ ಬಾಗಿಲನ್ನು ತೆರೆದು ಕರೆದಾಗ ಸಂಪೂರ್ಣ ಸ್ವಾತಂತ್ರ್ಯವೇ ಕರಗತವಾಗತ್ತೆ."*

ನನಗೆ ನಾನೇ ನಾನಾಗಿ ಯಾರ ಹಂಗೂ ಇಲ್ಲದೆ, ಹೆದರಿಕೆ ಇಲ್ಲದೆ ಇರಬೇಕಾಗಿದೆ. ನನ್ನ ಬದುಕು ನನ್ನದು ಅದನ್ನು ನನಗೆ ತಿಳಿದ ಹಾಗೆ ನಡೆಯಿಸಿಕೊಂಡು ಹೋಗುವ ಅಧಿಕಾರ ನನಗಿರಬೇಕು. ಅದಿಲ್ಲದೆ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ ಎಂದುಕೊಂಡೇ ಮುಂದುವರೆಯುತ್ತಾಳೆ.

ಕಾದಂಬರಿಯಲ್ಲಿ ಬರುವ ನಂದಿನಿ, ಶಕುಂತಲೆಯರದ್ದು ಆದರ್ಶ ಗೃಹಿಣಿಯರ ಪಾತ್ರವಾಗಿದೆ. ಈ ಪಾತ್ರಗಳೊಂದಿಗೆ ಸಂಭಾಷಿಸುವಾಗ ತಾನೂ ಇವರಂತೆ ಗೃಹಿಣಿಯಾಗಿ ಸಂತೃಪ್ತ ಜೀವನ ನಡೆಸಬೇಕೆನಿಸುತ್ತದಾದರೂ ಅವರ ಕೌಟುಂಬಿಕ ಜೀವನವನ್ನು ನೋಡೇ ತೃಪ್ತಳಾಗುತ್ತಾಳೆ. ಸಾಮಾಜಿಕ ಮೌಲ್ಯದ ಪರಿಮಿತಿಯಲ್ಲಿ ಬಾಳುವ ಶಕುಂತಲೆ, ನಂದಿನಿಯರ ವಿರುದ್ಧವಾಗಿ ಸಾಗುವ ಪಾತ್ರವಾಗುತ್ತಾಳೆ ಮೋಹಿನಿ.

ಮುರಾಬಟ್ಟೆ, ನವಿಲುನೌಕೆ, ಮೋಹಿನಿ ಈ ಕಾದಂಬರಿಗಳಲ್ಲಿ ಯಾವುದರಲ್ಲೂ ಪ್ರೇಮ ಸಾಫಲ್ಯತೆಯನ್ನು ಪಡೆದಿಲ್ಲ. ಆದರೆ ವಸಂತ ಮನಸ್ಸು ಮಾಡಿದ್ದರೆ ಮೋಹಿನಿಯ ಬದುಕೂ ಬದಲಾಗಬಹುದಿತ್ತು ಎನಿಸುತ್ತದೆ.

ಮೋಹಿನಿಯ ಸ್ವಾತಂತ್ರ್ಯದ ಮಿತಿಗಳನ್ನು ತಿಳಿಯುವಷ್ಟರಲ್ಲಿ ತುಂಬಾ ದೂರ ಸಾಗಿರುತ್ತಾಳೆ. ಈ ಸ್ವತಂತ್ರ ಪ್ರವೃತ್ತಿ ಆದರ್ಶ ಎಂದು ಹೇಳುವುದು ಸಾಧ್ಯವಿಲ್ಲ. ಆದರೆ ಆಕೆಯಲ್ಲಿದ್ದ ಆತ್ಮಸ್ಥೈರ್ಯ, ಆಕೆಯ ಸಾಧನೆ ಮೆಚ್ಚುವಂತದ್ದು. ಸಾಧನೆಯ ಮಾರ್ಗ ಅನೈತಿಕ ಎನಿಸಿದರೂ ಅವಳು ಸಾಧಿಸ ಬೇಕಾದ್ದನ್ನು ಸಾಧಿಸಿ ತೋರಿಸುತ್ತಾಳೆ. ಕೊನೆಗೆ ಅವಳ ತಪ್ಪುಗಳು ಅರಿವಾಗುವಷ್ಟರಲ್ಲಿ ಏಕಾಂಗಿಯಾಗಿರುತ್ತಾಳೆ.

"ಅರಳಿದ ಅವಳ ಬದುಕು ಏಕಾಂಗಿ ತನದಲ್ಲಿ ಬಾಡಿಹೋಗುತ್ತದೆ."

---

* ಕಟ್ಟದ ಮನೆ –ಅರಿಕೆ ಪುಟ ೫

ಇಷ್ಟೆಲ್ಲಾ ಅನುಭವಿಸಿದರೂ ತಾನುಗಳಿಸಿದ ಸಂಪತ್ತನ್ನು ಗಂಡ ,ವಸಂತ, ಹಾಗೂ ಸ್ನೇಹಿತೆಗೆ ಹಂಚಿ ಏಕಾಂಗಿಯಾಗಿ ಆಸ್ಪತ್ರೆಯಲ್ಲಿ ಕಾಲ ಕಳೆಯಬೇಕಾದ ಮೋಹಿನಿ ದುರಂತ ನಾಯಕಿಯಾದರೂ ಒಂದು ಮಗ್ಗುಲಿನಿಂದ ನೋಡಿದರೆ ತನ್ನ ಸಮತೋಲನವನ್ನು ಕಾಯ್ದುಕೊಂಡು, ಎಲ್ಲರ ವಿಷಯದಲ್ಲೂ ಕರುಣೆ, ಅನುಕಂಪದಿಂದ ನಡೆದ ಮೋಹಿನಿ ಒಬ್ಬ ಆದರ್ಶ ವ್ಯಕ್ತಿಯೇ ಸರಿ ಎಂದು ಹೇಳಬಹುದಾಗಿದೆ.

ಮೋಹನಿಯ ತಾಯಿ

ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಮಗಳಿಗಾಗಿ ಜೀವನ ನಡೆಸುತ್ತಿದ್ದಳು. ಮಗಳನ್ನು ಮದುವೆ ಮಾಡಿಕೊಟ್ಟ ಮೇಲೆ ತನ್ನ ಜವಾಬ್ದಾರಿ ಎಲ್ಲ ತೀರಿತು ಎಂದು ಕೊಳ್ಳುತ್ತಾಳೆ. ಆನಂದ ಮೋಹಿನಿಯನ್ನು ಕೈಹಿಡಿದು ಅವನ ಮನೆಗೆ ಕರೆದುಕೊಂಡು ಹೋದಮೇಲೆ ತಾಯಿ ಮಗಳ ಸಂಪರ್ಕವನ್ನೆ ಕಡಿದು ಹಾಕುತ್ತಾನೆ. ಮೋಹಿನಿ ತನ್ನ ತಾಯಿ ಮನೆಗೆ ಹೋಗುವುದಿರಲಿ ಪತ್ರ ಕೂಡ ಬರೆಯಬಾರದೆಂಬ ನಿರ್ಭಂದ ವಿದಿಸಿದಾಗ ಮೋಹಿನಿಯ ತಾಯಿಗೆ ತುಂಬಾ ನೋವಾಗುತ್ತದೆ. ಮುಂದೆ ಹಲವು ದಿನಗಳ ಮೇಲೆ ತವರಿಗೆ ಬಂದ ಮೋಹಿನಿ ನೋಡಿದಾಗ ಒಂದೆಡೆ ಸಂತಸ ಇನ್ನೊಂದೆಡೆ ಅವಳ ದಾಂಪತ್ಯ ಜೀವನ ಸುಖಕರವಾಗಿಲ್ಲ ಎಂದು ತಿಳಿದಾಗ ಜೀವ ನಲುಗುತ್ತದೆ. ಮೋಹಿನಿಗೆ ಬುದ್ಧಿವಾದದ ಮಾತುಗಳನ್ನು ಹೇಳಿ ಅತ್ಯಂತ ಪ್ರೀತಿ ವಾತ್ಸಲ್ಯದಿಂದ ಆರೈಕೆ ಮಾಡಿ ಕಳುಹಿಸುತ್ತಾಳೆ. ಮೋಹಿನಿ ಮನೆ ಬಿಟ್ಟು ಬಂದಾಗ ಕಂಗಾಲಾಗುತ್ತಾಳೆ. ಈಕೆ ಹೇಗಾದರೂ ಮಾಡಿ ಒಂದುಗೂಡಿಸಬೇಕೆಂದು ಆನಂದನಿಗೆ ಪತ್ರ ಬರೆದು ಕೇಳಿಕೊಳ್ಳುತ್ತಾಳೆ. ಮೋಹಿನಿಯ ತಾಯಿ ಅತ್ಯಂತ ಸಾಂಪ್ರದಾಯಕ ಹಾಗೂ ಮಡಿವಂತಳಾದ್ದರಿಂದ ಮುಂದೆ ಮೋಹಿನಿ ಹಿಡಿದ ದಾರಿಯನ್ನು ಒಪ್ಪುವುದಿಲ್ಲ. ಒಂದೆಡೆ ತಾಯಿಯ ಮನಸ್ಸು ಅವಳ ಯಶಸ್ಸು ಕಂಡು ಈ ರೀತಿಯಾದರೂ ಚೆನ್ನಾಗಿರಲೆಂದು ಹರಸಿದರೂ ಪರೋಕ್ಷವಾಗಿ ವಿರೋಧಿಸುತ್ತದೆ.

ಅವಳು ಕಳುಹಿಸುತ್ತಿದ್ದ ಹಣ ಅನೈತಿಕ ಎಂದು ಒಂದು ಕಾಸನ್ನೂ ಬಳಸದೆ ಮೋಹಿನಿ ಮದ್ರಾಸಿನಿಂದ ಬಂದಾಗ ಹಿಂತಿರುಗಿಸುತ್ತಾಳೆ. ಮಗಳೊಂದಿಗೆ ಹೋಗಿ ಬಾಳುವೆ ನಡೆಸಲು ಇಷ್ಟವಿಲ್ಲದ ಮನಸ್ಸಿನಿಂದ ಒಪ್ಪಿದರೂ ಹೋಗುವ ಮೊದಲೇ ಕಾಲು ಜಾರಿಬಿದ್ದು ಸಾವನಪ್ಪುತ್ತಾಳೆ. ಇಲ್ಲಿ ಅವಳ ತಾಯಿ ಮಾನ ಮರ್ಯಾದೆ, ಸ್ವಾಭಿಮಾನ, ಮನೆತನಕ್ಕೆ ಅಂಜಿ ನಡೆದಂತ ಪಾತ್ರವಾಗಿ ಚಿತ್ರಿತಳಾಗಿದ್ದಾಳೆ.

ರಂಗನಾಥ

ಹೂವಿಂದ ಹೂವಿಗೆ ಹಾರುವ ದುಂಬಿಯಂತಹ ಪಾತ್ರ ರಂಗನಾಥನದ್ದು. ಸಮಯ ಸಾಧಕ, ನಯವಂಚಕನಂತೆ ಕೆಲವು ಬಾರಿ ಕಾಣುತ್ತಾನೆ. ಯಶಸ್ಸು ಹಾಗೂ ಹಣ ಸಂಪಾದನೆ ಈತನ ಜೀವನದ ಮುಖ್ಯ ಗುರಿಯಾದಂತೆ ಕಂಡು ಬರುತ್ತದೆ.

ಶಿಕ್ಷಕಿಯ ಕೆಲಸ ಕಳೆದುಕೊಂಡ ಮೋಹಿನಿಗೆ ಆಪಟೆ ಮತ್ತು ಅನುರಾಧೆಯಿಂದ ರಂಗನಾಥನ ಪರಿಚಯವಾಗುತ್ತದೆ. ಆಕೆಯ ರೂಪ ಲಾವಣ್ಯಕ್ಕೆ ಮನಸೋತ ರಂಗನಾಥ ಮೋಹಿನಿಯನ್ನು ಆಪ್ತ ಕಾರ್ಯದರ್ಶಿಯಾಗಿ ನೇಮಿಸಿಕೊಳ್ಳುತ್ತಾನೆ. ನಿಧಾನವಾಗಿ ಅವಳ ಸ್ನೇಹ ಪಡೆದು ಚಿತ್ರರಂಗಕ್ಕೆ ಪರಿಚಯಿಸುತ್ತಾನೆ. ಇದರಿಂದಾಗಿ ಹಣದ ಹೊಳೆಯೇ ಹರಿದು ಬರುತ್ತದೆ.

ಮೋಹಿನಿಗೆ ಮನೆ ಇಲ್ಲದಿದ್ದಾಗ ತನ್ನ ಮನೆಯಲ್ಲಿಯೇ ಆಶ್ರಯ ನೀಡುತ್ತಾನೆ. ಬೇಕಾದಂತೆಲ್ಲಾ ಅವಳನ್ನು ಬಳಸಿಕೊಳ್ಳುತ್ತಾನೆ. ಒಟ್ಟಿಗೆ ಜೀವನ ನಡೆಸಿದರೂ ಅದಕ್ಕೊಂದು ಹೆಸರು ಕೊಡಲು ಆಗುವುದಿಲ್ಲ.

ರಂಗನಾಥನ ನಿಜವಾದ ಬಣ್ಣ ಬಯಲಾಗುವುದು ಆನಂದರಾಯ ಮೋಹಿನಿಯಿಂದ ಬಿಡುಗಡೆಯಾಗಲು ಬಯಸಿ ಕೇಸನ್ನು ಹಾಕಿದಾಗ ರಂಗನಾಥ ದೂರ ಉಳಿಯಲು ಪ್ರಯತ್ನಿಸುತ್ತಾನೆ. ಕೊನೆಗೆ ಸೌಂದರ್ಯವಲ್ಲಿಯ ಪರಿಚಯವಾದಂತೆ ಮೋಹಿನಿಯನ್ನು ಬಿಡಲು ಇಷ್ಟವಿಲ್ಲ ದಿದ್ದರೂ ಕೂಡ ಅವಳಿಂದ ದೂರಾಗುತ್ತಾನೆ.

ಮೋಹಿನಿ ಅವಳ ಮನಸ್ಸಿನಲ್ಲಿ ಇರುವುದನ್ನು ತಿಳಿದು ಅವನಿಂದ ದೂರಾಗಲು ನಿರ್ಧರಿಸುತ್ತಾಳೆ. ಇದರಿಂದ ಈತನ ವ್ಯಕ್ತಿತ್ವ ಎಂತಹದ್ದು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ವಸಂತ

ಕಾದಂಬರಿಯಲ್ಲಿ ವಸಂತನ ಪಾತ್ರ ಎಲ್ಲಿಯೂ ತನ್ನ ಆದರ್ಶವನ್ನು ಬಿಟ್ಟುಕೊಡುವುದಿಲ್ಲ. ಈತನ ಪಾತ್ರ ಚಿತ್ರಣದಲ್ಲಿ ಲೇಖಕರು ಲೇಖನಿಯನ್ನು ಬಿಗಿಹಿಡಿದಂತೆ ಕಂಡು ಬರುತ್ತದೆ. ಕಾದಂಬರಿಯ ಪ್ರಾರಂಭದಲ್ಲಿ ಇದ್ದ ಮನೋವೃತ್ತಿ ನಂತರದಲ್ಲಿ ಕಾಣುವುದಿಲ್ಲ. ಮೋಹಿನಿ ತನ್ನ ತೊಂದರೆಗಳನ್ನು ವಸಂತನೊಂದಿಗೆ ಹಂಚಿಕೊಳ್ಳವಾಗ ಅವರಿಬ್ಬರು ಸಲುಗೆಯಿಂದ ನಡೆದು ಕೊಂಡಿದ್ದರೂ ಬೇಗ ತಾನು ಮಾಡುತ್ತಿರುವ ತಪ್ಪಿನ ಅರಿವು ಆತನಿಗೆ ಆಗುತ್ತದೆ. ಮೋಹಿನಿ ತನ್ನ ಸ್ನೇಹಿತನ ಹೆಂಡತಿ ಎಂದು ಮನಸ್ಸು ಎಚ್ಚರಿಸುತ್ತದೆ. ಮೋಹಿನಿಯ ರೂಪ, ಲಾವಣ್ಯಕ್ಕೆ ಸೋತಿದ್ದ ಮನಸ್ಸು ತಪ್ಪುದಾರಿ ಎಂದು ಎಚ್ಚರಿಸಿ ಒಳ್ಳೆಯ ದಾರಿಯಲ್ಲಿ ನಡೆಸುತ್ತದೆ. ಆರಂಭದಿಂದಲೇ ಮೋಹಿನಿ-ಆನಂದರನ್ನು ಒಂದುಗೂಡಿಸುವ ಕೆಲಸದಲ್ಲಿ ತೊಡಗುತ್ತಾನೆ. ಮೋಹಿನಿ ಮನೆ ಬಿಟ್ಟು ಹೋದಾಗ ಆನಂದ ಮತ್ತು ಭಾಸ್ಕರರು ಮನೆಯ ಬಳಿ ಬಂದು ಗದುರಿಸಿದಾಗ ಧೈರ್ಯ ಕಳೆದುಕೊಳ್ಳದೆ ವರ್ತಿಸುವ ರೀತಿ ಮೆಚ್ಚುವಂತದ್ದು.

ಅಕ್ಕ ನೋಡಿದ ಹುಡುಗಿ ಶಕುಂತಲೆ, ಅವಳೊಂದಿಗೆ ಮದುವೆಯಾಗಿ ಅಚ್ಚುಕಟ್ಟಾದ ಸಂಸಾರ ನಡೆಸುತ್ತಾನೆ. ಮೋಹಿನಿಯ ರೂಪ, ಲಾವಣ್ಯವನ್ನು ಶಕುಂತಲೆಯಲ್ಲೇ ಕಂಡು ತೃಪ್ತಿಪಡುತ್ತಾನೆ. ಕಾದಂಬರಿಯಲ್ಲಿ ಆದರ್ಶ ಸತಿ ಪತಿಯರಾಗಿ ಜೀವನ ನಡೆಸಿದ ವ್ಯಕ್ತಿಯಾಗಿ ನಿಲ್ಲುತ್ತಾನೆ.

ಒಬ್ಬ ಒಳ್ಳೆಯ ಸ್ನೇಹಿತನಾಗಿ ಮೋಹಿನಿಗೆ ಬೇಕಾದಂತಹ ಎಲ್ಲಾ ನೆರವನ್ನು ನೀಡುತ್ತಾನೆ. ಮುಂದೆ ಆಕೆ ತನ್ನ ಸಂಪತ್ತು, ಚೆಲುವುಗಳಿಂದ ಮನ ಒಲಿಸಿಕೊಳ್ಳಲು ನೋಡಿದಾಗ ವಸಂತನ ದೃಢನಿಶ್ಚಯ ಎಂದಿಗೂ ಬದಲಾಗದಿರುವಂತದ್ದು ಮೆಚ್ಚಬೇಕಾದ್ದು. ಶಕುಂತಲೆಗೆ ಆತ ತೋರಿದ ಪ್ರೀತಿ, ಜೀವನದ ಅಚ್ಚುಕಟ್ಟು, ಜೀವನ ಶ್ರದ್ಧೆ ಎಲ್ಲರೂ ಮೆಚ್ಚುವಂತದ್ದು, ಇವೆಲ್ಲ ಅವನ ವಿವೇಚನೆಯ ಫಲ ಎಂದೇ ಹೇಳಬಹುದು.

ಇದೇ ರೀತಿಯ ಪ್ರವೃತ್ತಿಯನ್ನು ನಂದಿನಿಯ ಪಾತ್ರದಲ್ಲೂ ಕಾಣಬಹುದಾಗಿದೆ. ಒಂದು ಕಾಲಕ್ಕೆ ಪ್ರಸಿದ್ಧ ತಾರೆಯಾಗಿದ್ದ ಆಕೆ ತನ್ನಷ್ಟಕ್ಕೆ ಒಂದು ಮನೆ ಕಟ್ಟಿಕೊಂಡು ಪತಿಯೊಂದಿಗೆ, ಮುದ್ದು ಮಕ್ಕಳೊಂದಿಗೆ ಆಕೆ ಸುಖವಾಗಿ ಬಾಳ್ವೆಯನ್ನು ನಡೆಸುತ್ತಿರುತ್ತಾಳೆ. ಮೋಹಿನಿ ಒಮ್ಮೆ ಇವಳನ್ನು ಭೇಟಿ ಮಾಡಿದಾಗ ಈ ರೀತಿ ಹೇಳುತ್ತಾಳೆ. " ಏನನ್ನು ಕೊಟ್ಟು ಏನನ್ನು ಪಡೆಯುತ್ತಿದ್ದೇವೆ?" ಎಂಬ ಎಚ್ಚರ ನಮ್ಮಲ್ಲಿರಬೇಕು ಎಂದು ಮೋಹಿನಿಗೆ ತಿಳಿಮಾತನ್ನು ಹೇಳುತ್ತಾಳೆ. "ಸ್ವಾತಂತ್ರ್ಯವಾದರೂ ನಮಗೆ ಏಕೆ ಬೇಕು?" ಎಂಬ ವಿವೇಕದ ನುಡಿಗಳು ಮೋಹಿನಿಗೆ ತಿಳಿಸಿಕೊಡುತ್ತಾಳೆ. ಈ ಪಾತ್ರಕೂಡ ವಸಂತನಂತೆ ಆದರ್ಶನ ಚೌಕಟ್ಟಿನಲ್ಲಿ ಬಂದಂತಹ ಪಾತ್ರವಾಗಿದೆ.

ಆನಂದ

ಮೋಹಿನಿಯ ಗಂಡ ಆನಂದ. ಮೋಹಿನಿಯ ಮದುವೆಗೆ ಮೊದಲೇ ನಡೆದ ಒಂದು ದುರ್ಘಟನೆಯ ವಿಚಾರ ತಿಳಿದೂ ಆಕೆಯನ್ನು ಕೈಹಿಡಿದಾಗ ಅವನನ್ನು ಮೆಚ್ಚಬೇಕಾದ್ದೆ ಆದರೆ ಸಂಸಾರದಲ್ಲಿ ಅರಿತು ಹೆಂಡತಿಯೊಂದಿಗೆ ಕೂಡಿ ಒಲವಿನಿಂದ ಬಾಳು ನಡೆಸುವಲ್ಲಿ ವಿಫಲನಾದವನು. ಅಕ್ಕನ ಮನೆಯಲ್ಲಿ ಅಕ್ಕನ ತಮ್ಮನಾಗಿ ಬಾಳಿದ ಆದರೆ ಒಳ್ಳೆಯ ಪತಿಯಾಗಲಿಲ್ಲ ಎನಿಸುತ್ತದೆ. ಹೆಂಡತಿ ಎಂದರೆ ಗಂಡನ ಇಚ್ಛೆಯನ್ನರಿತು ನಡೆಯಬೇಕಾದ ಒಂದು ವಸ್ತುವಂತೆ ಕಾಣುತ್ತಾನೆ. ಪ್ರೀತಿ, ಸಾಮರಸ್ಯ ಯಾವುದೂ ಈತನಲ್ಲಿ ಇದ್ದಂತೆ ತೋರುವುದಿಲ್ಲ. ಕೇವಲ ಮೋಹಿನಿ ಒಂದು ಭೋಗದ ವಸ್ತುವೆಂದು ತಿಳಿದು ಬೇಕೆಂದಾಗಲೆಲ್ಲ ಬಲವಂತವಾಗಿ ಬಲಾತ್ಕರಿಸಿ ಭೋಗಿಸುವ ಪಾಶವೀ ಕೃತ್ಯಗಳನ್ನು ಈತ ನಡೆಸುತ್ತಾನೆ.

ಅಕ್ಕ ಮತ್ತು ಅಣ್ಣ ಭಾಸ್ಕರನ ಚಾಡಿಯ ನುಡಿಗಳನ್ನು ನಂಬಿ ಹೆಂಡತಿಯನ್ನೇ ಸಂಶಯದಿಂದ ಕಾಣುತ್ತಾನೆ. ಅಂತಃಕರಣವೇ ಇಲ್ಲದ ಶೂನ್ಯ ಹೃದಯಿ ಎಂದು ಹೇಳ ಬಹುದು.

ಅಕ್ಕ – ಭಾವನ ಉಪಕಾರ ಸ್ಮರಿಸುವುದು ಸರಿ ಮೋಹಿನಿ ಬೇರೆ ಮನೆ ಮಾಡುವಂತೆ ಕೇಳಿದಾಗ ಮಾಡದೇ ಇದ್ದದ್ದು ಈತನ ಮೊದಲ ತಪ್ಪು. ಮೋಹಿನಿಯನ್ನು ಸಂಶಯದಿಂದ ನೋಡುವುದು ಎರಡನೆಯ ತಪ್ಪು. ಜೊತೆಗೆ ಸಿಟ್ಟಿನಿಂದ ಆಕೆಗೆ ಹೊಡೆದು ಮೃಗದಂತೆ ವರ್ತಿಸುತ್ತಿದ್ದನು. ಈತ ಮಾಡಿದ ಅಪರಾಧ ಎಂದು ಹೇಳಬಹುದು.

ಮುಖ್ಯವಾಗಿ ಆನಂದನಲ್ಲಿ ಚಿತ್ತಸ್ಥೈರ್ಯವಿರಲಿಲ್ಲ ಎಂಬಂತೆ ಕಂಡು ಬರುತ್ತದೆ. ಮೋಹಿನಿಯೊಂದಿಗೆ ಅಮಾನವೀಯವಾಗಿ ನಡೆದುಕೊಳ್ಳುವುದಲ್ಲದೆ 'ಮನೆ ಬಿಟ್ಟು ಹೋಗು' ಎಂದು ಹೇಳುತ್ತಾನೆ.

ಒಮ್ಮೆ ಆನಂದನ ಸ್ವಭಾವದ ಬಗ್ಗೆ ಮೋಹಿನಿ ಆಡುವ ಮಾತುಗಳಿವು. "ಸುಖವಾಗಿರ ಬೇಕೆಂಬ ಬಯಕೆ ಅವನಲ್ಲಿತ್ತು. ಆದರೆ ಅದನ್ನು ಸಾಧಿಸಬೇಕೆಂಬ ಹಠ ಅವನಿಗೆ ಬೇಡವೇ?'' ಆ ಹಠವನ್ನು ಆನಂದ ಎಂದಿಗೂ ತೊಡುವುದಿಲ್ಲ.

ಮೋಹಿನಿಯ ತಾಯಿ ಹಾಗೂ ವಸಂತನ ಪ್ರಯತ್ನದಿಂದ ಆನಂದ ಮೋಹಿನಿಯ ಬಳಿಗೆ ಹೋಗಿ ಕರೆಯುವ ಪ್ರಯತ್ನ ಮಾಡುತ್ತಾನೆ. ಆದರೆ ಮೋಹಿನಿ ದೃಢ ನಿರ್ಧಾರ ಅದಕ್ಕೆ ಅವಕಾಶ ಕೊಡುವುದಿಲ್ಲ.

ಮೋಹಿನಿ ಬದುಕಿನಲ್ಲಿ ಜಾರುವುದಕ್ಕೆ ಈತನ ದೌರ್ಬಲ್ಯವೇ ಕಾರಣ ಎಂದು ಹೇಳಬಹುದು. ಇದರಿಂದ ಅವನ ಮನೆಯು ಭಗ್ನವಾಯಿತು.

ಮೋಹಿನಿಯು ಅಪಾರವಾದ ಕೀರ್ತಿ, ಯಶಸ್ಸು ಗಳಿಸುತ್ತಿದ್ದಾಗ ಆಕೆಯಿಂದ ಬಿಡುಗಡೆ ಪಡೆಯಲು ನ್ಯಾಯಾಲಯದ ಮೊರೆ ಹೊಕ್ಕ ನ್ಯಾಯಾಲಯದ ತೀರ್ಮಾನದ ಬಳಿಕ ಈತ ಹತಾಶನಾಗುತ್ತಾನೆ. ಸಂಪೂರ್ಣವಾಗಿ ಸೋತುಹೋಗುತ್ತಾನೆ.

ಅಧ್ಯಾಯ : ೬

ಕಾದಂಬರಿಯಲ್ಲಿ ಬರುವ ನೈತಿಕತೆ ಹಾಗೂ ಸಾಮಾಜಿಕತೆ

ಅಧ್ಯಾಯ : ೬

ಕಾದಂಬರಿಯಲ್ಲಿ ಬರುವ ನೈತಿಕತೆ ಹಾಗೂ ಸಾಮಾಜಿಕತೆ

ಅ. ಗಂಡು – ಹೆಣ್ಣಿನ ಸಂಬಂಧ:

ಮಾನವ ಪ್ರಾಣಿಗಳಿಗಿಂತ ಭಿನ್ನ, ಮಾನವ ಸಂಘ ಜೀವಿ. ಈತ ಸಮಾಜರಚನೆಯನ್ನು ಮಾಡಿಕೊಂಡ. ಸುರಕ್ಷತೆ, ಆಸ್ತಿ–ಪಾಸ್ತಿ, ಆರೋಗ್ಯ ಇದರಂತೆಯೇ ಸಮಾಜದಲ್ಲಿ ನೆಮ್ಮದಿಯಿಂದ ಬಾಳಬೇಕಾದರೆ ಕೆಲವು ನೀತಿ – ನಿಯಮ ಕಟ್ಟುಪಾಡುಗಳನ್ನು ಮಾಡಿಕೊಂಡಿದ್ದಾನೆ.

ಇಂದು ನಾವು ಎಲ್ಲಿಗೆ ಬಂದು ನಿಂತಿದ್ದೇವೆ ಎಂದರೆ ಪಾಶ್ಚಾತ್ಯ ದೇಶಗಳ ಪ್ರಭಾವ ಅದರೊಂದಿಗೆ ಶಿಕ್ಷಣ, ಹೊಸ ಆಲೋಚನೆಯಿಂದ **Living together** ಎಂಬ ಹೊಸ ವಿಚಾರ ನಮ್ಮ ಸಂಸ್ಕೃತಿಯಲ್ಲಿ ಇಲ್ಲದಿದ್ದರೂ ಬೇರೆ ದೇಶಗಳಿಂದ ನಮ್ಮಲ್ಲೂ ಈ ಒಂದು ಪದ್ಧತಿ ಕಾಣಿಸಿಕೊಳ್ಳುತ್ತಿದೆ. ಅದು ಒಳಿತೋ ಕೆಡುಕೋ ಎಂದು ಚರ್ಚಿಸುವುದಕ್ಕಿಂತ ಪ್ರಸ್ತುತ ಕಾದಂಬರಿಯಲ್ಲಿ ಬರುವ ಗಂಡು – ಹೆಣ್ಣಿನ ಸಂಬಂಧಗಳ ಬಗ್ಗೆ ಚರ್ಚಿಸುತ್ತೇನೆ.

ಮದುವೆ ಎಂಬುದು ಗಂಡು – ಹೆಣ್ಣಿನ ಕೂಡಿಕೆಗೆ ಸಮಾಜ ಒಪ್ಪಿದ ಒಂದು ವ್ಯವಸ್ಥೆಯಾದರೆ ಇದರಿಂದ ಹೊರಗೆ ನಡೆಯುವುದೆಲ್ಲ ಅನೈತಿಕ ಎನಿಸಿಕೊಳ್ಳುತ್ತದೆ. ಗಂಡು – ಹೆಣ್ಣಿನ ಸಂಬಂಧದಲ್ಲಿ ಶೀಲ – ಅಶ್ಲೀಲ ಎಂದು ವಿಶ್ಲೇಷಿಸುವುದು ಕೆಲವು ಸಾರಿ ಸುಲಭವಾದರೆ ಕೆಲವು ಸಾರಿ ಅದು ತುಂಬಾ ಕಠಿಣ ಎನಿಸುತ್ತದೆ. ಭಾಸ್ಕರ ಮೋಹಿನಿಯ ಬೆನ್ನು ಹತ್ತಿ ಪುಣೆವರೆಗೆ ಹೋದದ್ದು ಆಕೆಯನ್ನು ಅನೇಕ ಬಾರಿ ಪೀಡಿಸಿ ಕಾಡಿಸಿದ್ದು ನಮಗೆ ಸುಲಭವಾಗಿ ಅಶ್ಲೀಲತೆಯಂತೆ ಕಾಣುತ್ತದೆ.

ಆದರೆ ಮೋಹಿನಿ ವಸಂತರೊಡನೆ ನಡೆಯುವಂತಹ ಸ್ನೇಹ ಪ್ರೇಮ ಎಂತಹದ್ದು ಎಂಬ ಪ್ರಶ್ನೆ ಏಳುತ್ತದೆ. ವಸಂತ ಎಡವುದಕ್ಕೆ ಮೊದಲು ಎಚ್ಚೆತ್ತುಕೊಂಡು ಬಿಡುತ್ತಾನೆ. ಶಕುಂತಲೆಯನ್ನು ವಿವಾಹವಾಗಿ ಸುಖವಾದ ಸಮಾಜ ಒಪ್ಪುವಂತಹ ಜೀವನ ನಡೆಸಿ ಆದರ್ಶ ವ್ಯಕ್ತಿಯಾಗಿ ನಿಲ್ಲುತ್ತಾನೆ.

ನೈತಿಕ ಮೌಲ್ಯಗಳೆಲ್ಲಾ ಕಲ್ಪನಾತೀತ ಹಾಗೂ ಆದರ್ಶ ಕಲ್ಪಿತಗಳು ಆದರೆ ನಾವಿರುವುದು ವಾಸ್ತವದಲ್ಲಿ ಎಂಬ ಅರಿವಿದ್ದರೂ ಕೂಡ ಆನಂದ ಸನಾತನ ಪರಂಪರೆ, ಸಮಾಜ ನಿಯಮಗಳಿಗೆ ಬದ್ಧನಾಗಿ ನಿಲ್ಲುತ್ತಾನೆ.

ಒಬ್ಬ ಗಂಡು ಹೆಣ್ಣು ಒಟ್ಟಿಗೆ ಓಡಾಡಿದರೆ ಸಾಕು ಅದಕ್ಕೆ ರೆಕ್ಕೆ ಪುಕ್ಕ ಕಟ್ಟಿ ಇಲ್ಲದನ್ನು ಕಲ್ಪಿಸುವಂತಹ ಸಮಾಜನಮ್ಮದು. ಅಂತಹದ್ದರಲ್ಲಿ ರಂಗನಾಥ ಮತ್ತು ಮೋಹಿನಿಯರ ನಡುವೆ ಇದ್ದದ್ದು ಏನು ಎಂಬ ಪ್ರಶ್ನೆ ಬಂದಾಗ ಶಕುಂತಲೆ ಮತ್ತು ವಸಂತನ ನಡುವೆ ನಡೆಯುವ ಸಂಭಾಷಣೆ ಗಮನಿಸಬಹುದು.

ರಂಗನಾಥ ಮತ್ತು ಮೋಹಿನಿ ರೈಲಿನ ಒಂದೇ ಕಂಪಾರ್ಟ್‌ಮೆಂಟ್‌ನಲ್ಲಿ ಪ್ರಯಾಣ ನಡೆಸುತ್ತಾರೆ. ಅವರನ್ನು ಬೀಳ್ಕೊಡಲು ಹೋದ ವಸಂತ ಶಕುಂತಲೆ ರೈಲು ಮದ್ರಾಸಿಗೆ ಹೊರಡುತ್ತದೆ. ಅವರು ಹಿಂತಿರುಗುವಾಗ ಶಕುಂತಲೆ ವಸಂತನನ್ನು ಪ್ರಶ್ನಿಸುತ್ತಾಳೆ.

"ಎಲ್ಲವೂ ಸರಿಯೆ ಆದರೆ ಒಂದು ಮಾತ್ರ ನನಗೆ ಎಷ್ಟು ಒಪ್ಪಿಗೆಯಾಗಲಿಲ್ಲ, ಆಕೆ ಹಾಗೆ ಆ ರೀತಿ ಕಂಪಾರ್ಟುಮೆಂಟನಲ್ಲಿ ಅವರ ಜೊತೆಯಲ್ಲಿ ಪ್ರವಾಸ ಮಾಡುವುದು, ಗಂಡ-ಹೆಂಡತಿಯ ಹಾಗೆ", ಗುಣ, ಶೀಲ ಎನ್ನುವುದಕ್ಕೆ ಯಾವ ಮಹತ್ವವೂ ಇಲ್ಲವೆ"?*

ಶಕುಂತಲೆಯ ಪಾತ್ರದ ಮುಖಾಂತರ ಅಂದರೆ ಇವರೊಡನೆ ಇದ್ದ ಸಂಬಂಧವು ಅನೈತಿಕವಾದದ್ದು ಸಮಾಜ ಒಪ್ಪುವಂತಹದ್ದಲ್ಲ ಎಂಬ ಅಭಿಪ್ರಾಯವನ್ನು ನಾವು ಕಾಣುತ್ತೇವೆ.

---

* ಬಾಡಿದ ಹೂ ಮೋಹಿನಿ – ೩

ಕೇವಲ ದಂಪತಿಗಳಾದರೆ ಸಾಲದು ಅವರಲ್ಲಿ ಪರಸ್ಪರ ಪ್ರೀತಿ, ಸೌಹಾರ್ದ, ವಿಶ್ವಾಸ, ನಂಬಿಕೆಗಳು ಇದ್ದಾಗ ಮಾತ್ರ ಬಾಳೆಂಬ ಬಂಡಿಯು ಸುಗಮವಾಗಿ ಸಾಗುತ್ತದೆ. ಇದಾವ ಅಂಶಗಳೂ ಇಲ್ಲದಿದ್ದಾಗ ವಿರಸ, ಕಲಹಗಳೆದ್ದು ಸಂಸಾರದಲ್ಲಿ ಬಿರುಕು ಖಂಡಿತ. ಗಂಡ ಒಂದು ಕಡೆ ಹೆಂಡತಿ ಒಂದು ಕಡೆ ಮುಖ ಮಾಡಿದರೆ ಸಂಸಾರ ಅಧಃಪತನವನ್ನು ಕಾಣುತ್ತದೆ. ಎರಡು ಕೈ ಸೇರಿ ಚಪ್ಪಾಳೆ ಎಂಬಂತೆ ಒಂದು ಕುಟುಂಬ ಎಂದಾಗ ಬೇಕಾದರೆ ಗಂಡು - ಹೆಣ್ಣು ಸಮವಾದ ಪಾತ್ರ ವಹಿಸಬೇಕಾಗುತ್ತದೆ.

ಸ್ವಾತಂತ್ರ ಬೇಕು ಆದರೆ ಅದರ ಇತಿಮಿತಿಗಳನ್ನೂ ನಾವು ಅರಿತಿರಬೇಕು. ಹೆಚ್ಚಾದರೆ ಅಮೃತವೂ ವಿಷವಾಗುತ್ತದೆ ಎಂಬಂತೆ ಸ್ವಾತಂತ್ರಾಭಿಲಾಷೆ ಹಠ ಅಹಂಕಾರದಿಂದ ಕೂಡಿದರೆ ಮೌಲ್ಯಗಳ ವಿಷಯದಲ್ಲಿ ವಿಸಂಗತವಾದ ತರ್ಕಕ್ಕೆ ಒಳಗಾಗುವಂತೆ ಮಾಡುತ್ತದೆ.

ಆ. ಪರಂಪರೆ ಮತ್ತು ಆಧುನಿಕತೆ:

ಪರಂಪರೆ ಮತ್ತು ಆಧುನಿಕತೆ ಎಂಬ ವಿಚಾರ ಬಂದಾಗ ಪರಂಪರೆ ಹೇಳುತ್ತದೆ ಹೆಣ್ಣುಮಕ್ಕಳಿಗೆ ಸ್ವಾತಂತ್ರ ಒಳ್ಳೆಯದಲ್ಲ ಹೆಚ್ಚು ಕಲಿಯಬಾರದು ಪತಿಯೇ ಪರದೈವ ಎಂದು ತಿಳಿದು ಬಾಳಬೇಕೆಂದು. ಆದರೆ ಆಧುನಿಕತೆ ದೃಷ್ಟಿಯಿಂದ ನೋಡಿದಾಗ ಹೆಣ್ಣುಮಕ್ಕಳು ಹೆಚ್ಚಿನ ಶಿಕ್ಷಣ ಪಡೆಯಬೇಕು ಗಂಡಿನಂತೆ ಸಮಾನಳು ಸರ್ವ ಸ್ವತಂತ್ರಳು ಎಂಬ ವಿಚಾರವನ್ನು ನೀಡುತ್ತದೆ. ಮೋಹಿನ ಆಧುನಿಕ ಯುವತಿ, ವಿದ್ಯಾವಂತೆ ಗಂಡ ಅವಳನ್ನು ಸರಿಯಾಗಿ ನಡೆಸಿಕೊಳ್ಳದಿದ್ದಾಗ ಸ್ವಾತಂತ್ರ್ಯವನ್ನು ಬಯಸಿದವಳು.

ಪರಂಪರೆಯ ದೃಷ್ಟಿಯಿಂದ ನೋಡಿದಾಗ ಅದು ತಪ್ಪು, ಮದುವೆಯಾದವಳು ಮನೆಬಿಟ್ಟು ಬರುವುದು ಒಳ್ಳೆಯದಲ್ಲ. ಗಂಡು - ಹೆಣ್ಣು ನಿರ್ಭೀತವಾಗಿ ಮಾತನಾಡುವುದು, ಒಟ್ಟಿಗೆ ಇರುವುದು ತಪ್ಪಾಗಿಕಾಣುತ್ತದೆ. ಹೆಣ್ಣು ಮಕ್ಕಳು ಅದರಲ್ಲೂ ವಿವಾಹಿತ ಸ್ತ್ರೀಯರು ಚಿತ್ರಪ್ರಪಂಚವನ್ನು ಸೇರಬಾರದು ಎಂಬುದು ಪರಂಪರೆಯ ಮಾತು. ಕಾರಣ ಬೇರೆ ಬೇರೆ ಗಂಡರೊಂದಿಗೆ ಬೆರೆಯ ಬೇಕಾಗುತ್ತದೆ. ಶೀಲವಂತರಲ್ಲ ಎಂಬ ವಿಚಾರ ಹೇಳುತ್ತದೆ.

ಆಧುನಿಕತೆಯು ರೀತಿ ಬೇರೆ, ಅದೊಂದು ಕಲೆ ಸೇವೆ ಎಂಬ ವಿಚಾರವಿದೆ. ಚಿತ್ರರಂಗ ಪ್ರವೇಶಿಸಿದ ಮೋಹಿನ ಅಪಾರವಾದ ಕೀರ್ತಿ, ಯಶಸ್ಸು, ಹಣ ಎಲ್ಲಾ ಸಂಪಾದಿಸುತ್ತಾಳೆ. ಆದರೆ ಮನಸ್ಸಿನ ಸಮಾಧಾನವನ್ನು ಕಳೆದುಕೊಳ್ಳುತ್ತಾಳೆ.

ಈ ಪರಂಪರೆ ಮತ್ತು ಆಧುನಿಕತೆಯನ್ನು ಸಮನಾಗಿ ತೂಗಿಸಿಕೊಂಡು ಹೋಗುವ ಪಾತ್ರವಾಗಿ ವಸಂತ ಕಾಣುತ್ತಾನೆ ಎನಿಸುತ್ತದೆ.

ತನ್ನ ಬಳಿ ಸಮಸ್ಯೆಗಳನ್ನು ಚರ್ಚಿಸಲು ಬಂದ ಮೋಹಿನಿಯೊಂದಿಗೆ ಸಹಕಾರ, ಸಹಾನುಭೂತಿ ತೋರಿಸಿ ಮನ ಬಿಚ್ಚಿ ಮಾತನಾಡುತ್ತಾನೆ. ಆನಂದ ಮತ್ತು ಮೋಹಿನಿಯರನ್ನು ಒಂದು ಗೂಡಿಸಬೇಕೆಂದು ಹಲವು ಭಾರಿ ಪ್ರಯತ್ನವನ್ನೂ ಮಾಡುತ್ತಾನೆ. ಒಂದೊಂದು ಸಾರಿ ಅವನೂ ತಪ್ಪು ಮಾಡುತ್ತಿದ್ದಾನೆ ಎಂದು ಕೊಳ್ಳುತ್ತಿದ್ದಂತೆ ಸಮಚಿತ್ತತೆ ಪಡೆದು ಸಂಯಮವನ್ನು ಕಾಪಾಡಿಕೊಳ್ಳುತ್ತಾನೆ. ಸಾಂಸಾರಿಕ ಜೀವನವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುತ್ತಾನೆ. ಹೆಂಡತಿಗೆ ನಿಷ್ಠಾವಂತನಾಗಿ ಮೋಹಿನಿ ಸಹಾಯ ಬೇಡಿದಾಗ ಅವನ ಕೈಲಾದ ಸಹಾಯ ಮಾಡುತ್ತಾ ತೂಕದ ವ್ಯಕ್ತಿಯಾಗಿ ಕಾಣುತ್ತಾನೆ. ಅಕ್ಕ – ಭಾವ, ಆನಂದ, ಮೋಹಿನಿ, ಶಕುಂತಲೆ ಎಲ್ಲರೊಂದಿಗೂ ಆತ ನಡೆದುಕೊಳ್ಳುವ ರೀತಿ ಪರಂಪರೆ ಹಾಗೂ ಆಧುನಿಕತೆಯನ್ನು ಸಾಮರಸ್ಯವಾಗಿ ಕಂಡು ಬರುತ್ತದೆ.

ಪರಂಪರೆ ಹಾಗೂ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಉಳಿಯುವಂತಹ ಮೋಹಿನಿಯ ತಾಯಿಗೆ ಮೋಹಿನಿಯ ನಿರ್ಧಾರದಿಂದ ನೋವಾಗುತ್ತದೆ. ಆನಂದನೊಂದಿಗೆ ಮತ್ತೆ ಸೇರಿಸುವ ಪ್ರಯತ್ನ ಮಾಡಿ ವಿಫಲವಾಗುತ್ತಾಳೆ.

ಮಗಳು ಎಂಬ ಅನುಕಂಪವಿದ್ದರೂ ಕೂಡ ಪ್ರೀತಿ ಇದ್ದರೂ ಕೂಡ ಅವಳು ಸಂಪಾದಿಸುತ್ತಿರುವ ಹಣ ಅನೀತಿಯಿಂದ ಎಂದು ಒಂದು ಕಾಸನ್ನು ಬಳಸದೆಯೇ ಅವಳಿಗೇ ಹಿಂತಿರುಗಿಸುತ್ತಾಳೆ. ಪರಂಪರೆಯ ದೃಷ್ಟಿಕೋನದಿಂದಲೇ ನೋಡುವ ಈಕೆಗೆ ಆಧುನಿಕ ಆಲೋಚನೆಯನ್ನು, ವಿಚಾರಗಳು ಒಪ್ಪಿಕೊಳ್ಳುವುದು ಸಾಧ್ಯವಾಗುವುದಿಲ್ಲ ಕೆಲವು ಬಾರಿ ಮಾತಿನಲ್ಲೂ ವಿರೋಧವನ್ನು ಪರೋಕ್ಷವಾಗಿ ವ್ಯಕ್ತಪಡಿಸುತ್ತಾಳೆ.

ಇ. ಹಠ ಮತ್ತು ಸ್ವಾಭಿಮಾನದಿಂದ ದುರಂತಕ್ಕೆ ಒಳಗಾದ ಮಹಿಳೆ:

ಜೀವನವನ್ನು ಗಂಭೀರವಾಗಿ ನೋಡುವ ಮನೋಧರ್ಮವನ್ನು ನಾವು "ದುರಂತ ದೃಷ್ಟಿ" ಎನ್ನಬಹುದಾಗಿದೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ಬರುವ **Tragic ending** ಸಂವಾದಿಯಾಗುತ್ತದೆ. ಕಥೆ, ನಾಟಕ, ಕಾದಂಬರಿ ಯಾವುದೇ ಆಗಿರಲಿ ಅಲ್ಲಿ ದುರಂತದಲ್ಲಿ ಅದು ಪರ್ಯಾವಸನ ಗೊಳ್ಳುತ್ತದೆ ಎಂದಷ್ಟೇ ಅಲ್ಲ ಬದುಕನ್ನು ಸಮಗ್ರವಾಗಿ, ಗಂಭೀರವಾಗಿ ನೋಡುವುದಾಗಿರುತ್ತದೆ.

ಇನಾಂದಾರರು ಸಾಮಾನ್ಯವಾಗಿ ಬರೆದ ಎಲ್ಲಾ ಕಾದಂಬರಿಗಳಲ್ಲಿಯೂ ಒಂದು ಗಂಭೀರ ದರ್ಶನ, ವಿಚಾರಶೀಲ ಮನೋಧರ್ಮ ಹಾಸುಹೊಕ್ಕಾಗಿ ಹೆಣೆದು ಕೊಂಡಿರುವುದನ್ನು ಕಾಣಬಹುದು. ಸ್ವರ್ಗದ ಬಾಗಿಲು, ಶಾಪ, ಈ ಪರಿಯ ಸೊಬಗು. ಮೋಹಿನಿ ಎಲ್ಲವೂ ದುರಂತ ಕಾದಂಬರಿಗಳಾಗಿವೆ.

ವಿದ್ಯಾವಂತೆಯಾದ ಮೋಹಿನಿಯು ಆದರ್ಶದ ಬೆನ್ನುಹತ್ತಿ ವೈಯಕ್ತಿಕ ಬದುಕನ್ನು ಕಡೆಗಾಣಿಸಿ ನಡೆಯುವ ದಿಟ್ಟ ಮಹಿಳೆಯಾಗಿ ಕಾಣುತ್ತಾಳೆ. ಕಥಾನಾಯಕಿ ತನ್ನ ಗೆಲುವಿನ ದಾರಿಯಲ್ಲಿ ಎದುರಾಗುವ ಅಪಾಯವನ್ನು, ತಾನು ಗಳಿಸಿದ ಯಶಸ್ಸಿನ ವಿಫಲತೆಯನ್ನು ತಡವಾಗಿ ಅರ್ಥಮಾಡಿಕೊಳ್ಳುತ್ತಾಳೆ ಎನಿಸುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಮೋಹಿನಿ ತಾಯಿ ಮತ್ತು ಅಜ್ಜನ ಆಶ್ರಯದಲ್ಲಿ ಬೆಳೆದವಳು. ಕಾದಂಬರಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವಳ ತಾಯಿಯಲ್ಲಿ ಇದ್ದ ಸ್ವಾಭಿಮಾನ ಹಠದ ಗುಣಗಳು ಇವಳಿಗೂ ಸ್ವಾಭಾವಿಕವಾಗಿ ಬಂದಿರಬೇಕೇನೋ ಎನಿಸುತ್ತದೆ.

ಹೆಂಡತಿಯಾಗಿ ಪರಿಮಿತ ಸ್ವಾತಂತ್ರ್ಯವನ್ನು ಒಪ್ಪಿದ ಆಕೆಗೆ ಸಿಗಬೇಕಾದ ಸುಖ, ಸಂತೋಷ ದೊರೆಯದಾಗುತ್ತದೆ.

ಅತ್ಯಂತ ರೂಪವತಿ, ಬುದ್ಧಿವಂತಳಾದ ಮೋಹಿನಿ ಕೇವಲ ಎರಡು ಹೊತ್ತಿನ ಊಟ ತಲೆಯ ಮೇಲೆ ಒಂದು ಸೂರು ಇದರಲ್ಲೇ ತೃಪ್ತಳಾಗಿ ಬಾಳಬೇಕೆಂಬುದರಲ್ಲಿ ಯಾವ ನ್ಯಾಯವಿದೆ ಎಂಬ ಪ್ರಶ್ನೆ ಏಳುತ್ತದೆ.

ಈ ರೀತಿ ಬದುಕಬೇಕಾದರೆ ಪ್ರಾಣಿಗಳಿಗೂ ಅವಳಿಗೂ ಯಾವ ವ್ಯತ್ಯಾಸವೇ ಇಲ್ಲ ಎಂದಾಗುತ್ತದೆ. ಯಾವಾಗಲೂ ಸಿಡಿಮಿಡಿಗೊಳ್ಳುವ ಅತ್ತಿಗೆ, ಕಾಮಾಂಧನಾದ ಭಾವ, ಷಂಡನಂತಹ ಗಂಡ ಯಾವ ಮಾನವ ಜೀವಿಯೂ ಬಂಡೇಳಬೇಕಾದ ಪರಿಸ್ಥಿತಿ ಅದರಂತೆ ಮೋಹಿನಿಯೂ ವರ್ತಿಸುತ್ತಾಳೆ. ಮೋಹಿನಿಯು ಇಲ್ಲಿ ದಿಟ್ಟ ಹೆಣ್ಣಾದ್ದರಿಂದ ಸಾವಿಗೆ ಶರಣಾಗದೆ ತನ್ನ ಬದುಕನ್ನು ಬೇರೆಯಾಗಿ ರೂಪಿಸಿಕೊಳ್ಳಲು ಛಲದಿಂದ ಮುನ್ನುಗ್ಗುತ್ತಾಳೆ.

ಸಾಮಾನ್ಯವಾಗಿ ಅವಳಲ್ಲಿದ್ದ ಹಠ, ಸ್ವಾಭಿಮಾನಗಳೇ ಅವಳ ದುರಂತ ಅಂತ್ಯಕಾಣಲು ಕಾರಣ ಆನಂದ ಮತ್ತೆ ಅವಳ ಮನೆಯ ಬಾಗಿಲಿಗೆ ಬಂದಾಗ ಅವನನ್ನು ಸ್ವೀಕರಿಸಿದ್ದರೆ ಸುಖಾಂತ್ಯ ಕಾಣಬಹುದಿತ್ತು ಎನಿಸುತ್ತದೆ. ಆದರೆ ಆನಂದ ಮತ್ತೆ ಅದೇ ತಪ್ಪುಗಳನ್ನು ಮಾಡುವುದಿಲ್ಲ ಎಂದು ಹೇಗೆ ಹೇಳಲು ಸಾಧ್ಯ ಎಂಬ ಪ್ರಶ್ನೆಯೂ ಏಳುತ್ತದೆ.

ಅವಳಲ್ಲಿ ಇದ್ದದ್ದು ಸ್ತ್ರೀ ಸಹಜವಾದ ಸಾಮಾನ್ಯವಾದಂತ ಆಸೆಗಳು. ಅದು ಕೈಗೆಟುಕದಿದ್ದಾಗ ಹಠದ ದಾರಿಯಲ್ಲಿ ನಡೆಯುತ್ತಾಳೆ. ಯಾರೂ ತಡೆಯದ ಸ್ವಾತಂತ್ರ ಅವಳದಾಗುವುದು ನಿಜ ಆದರೆ ಅದು ಅವಳ ಗುರಿಯಾಗಿರಲಿಲ್ಲ.

ಸಂಸಾರ, ಮಕ್ಕಳು, ಸುಖ, ನೆಮ್ಮದಿ ಎಲ್ಲವನ್ನೂ ತಿರಸ್ಕರಿಸಿ ಸ್ವೇಚ್ಛೆಯಿಂದ ಜೀವನ ನಡೆಸುತ್ತ ಹಣ ಸಂದಾದಿಸುವುದೂ ಅವಳ ಆಸೆಯಾಗಿರಲಿಲ್ಲ. ಪರಿಸ್ಥಿತಿಯ ಕೈಗೊಂಬೆಯಾಗಿ ಸಂಸ್ಕೃತಿ, ಸಮಾಜದ ಕಟ್ಟುಪಾಡುಗಳು ಅವಳನ್ನು ಈ ಸ್ಥಿತಿಗೆ ತಂದು ನಿಲ್ಲಿಸುತ್ತದೆ ಎಂದು ಹೇಳಬಹುದಾಗಿದೆ.

ಕನ್ನಡ ಚಿತ್ರದ ಮೇರು ನಟಿ "ಮಿನುಗುತಾರೆ" ಎಂದೇ ಪ್ರಸಿದ್ಧವಾದ ಕಲ್ಪನಾರವರ ಬದುಕನ್ನು ನೋಡಿದಾಗ ಅನೇಕ ಆಸೆಗಳನ್ನು ಹೊತ್ತು ಚಲನಚಿತ್ರ ರಂಗವನ್ನು ಪ್ರವೇಶಿಸಿ ಅತ್ಯಂತ ಯಶಸ್ಸನ್ನು ಪಡೆದವಳು. ಆದರೆ ವೈಯಕ್ತಿಕ ಜೀವನದಲ್ಲಿ ತಾನು ಬಯಸಿದ್ದು ದೊರೆಯದಿದ್ದಾಗ ಕೊನೆಗೆ ಆಕೆ ಸಾವಿಗೆ ಶರಣಾಗಿ **Tragidy Queen** ಎಂಬ ಹೆಸರನ್ನು ಪಡೆಯುತ್ತಾರೆ.

ಆದರೆ ಮೋಹಿನಿ ಪಾತ್ರ ಇವರಂತೆ ಎಂದಿಗೂ ಯೋಚಿಸದೆ ಸಾವಿಗೆ ಶರಣಾಗದೆ ಕೊನೆಯವರೆಗೂ ಗಟ್ಟಿಯಾಗಿ ನಿಲ್ಲುತ್ತಾಳೆ. ದುರಂತ ಅಂತ್ಯ ಎನಿಸಿದರೂ ಕೂಡ ಒಂದು ಮಗ್ಗುಲಿನಿಂದ ನೋಡಿದಾಗ, ಸಾಂಸಾರಿಕ, ಸುಖ, ನೆಮ್ಮದಿ, ಪ್ರೀತಿ ದೊರೆಯದಿದ್ದರೂ ದಿಟ್ಟತನದಿಂದ ಯಶಸ್ಸನ್ನು ಪಡೆದ ಮಹಿಳೆಯಾಗಿ ಕಾಣುತ್ತಾಳೆ.

(ಹಠ ಎಂಬುದು ಇರಬೇಕು ಆದರೆ ಅದು ಒಳ್ಳೆಯ ಕಾರಣಕ್ಕಾಗಿದ್ದರೆ ಒಳಿತು ದ್ರೌಪತಿಯ ಹಠದಿಂದಾಗಿ ಕೌರವರ ನಾಶವಾಗಿ ಪಾಂಡವರಿಗೆ ಜಯವಾಯಿತು. ಕೆಟ್ಟ ಹಠ ಎಂದಿಗೂ ಕೆಡುಕನ್ನೇ ತಂದೊಡ್ಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ.)

ಅಧ್ಯಾಯ ೭.

ಕಾದಂಬರಿಯ ಇತರ ಆಯಾಮಗಳು

ಅಧ್ಯಾಯ ೭.

ಕಾದಂಬರಿಯ ಇತರ ಆಯಾಮಗಳು

ಅ. ಪ್ರಕೃತಿಯ ವರ್ಣನೆ :

ಪ್ರಕೃತಿಯ ಮರುಸೃಷ್ಟಿ ಕಾರ್ಯವನ್ನು ಕಾದಂಬರಿಗಳಲ್ಲಿ ಅದ್ಭುತವಾಗಿ ಮಾಡಿದವರು ಕುವೆಂಪುರವರು. ನವೋದಯ ಕಾಲದ ಲೇಖಕರಲ್ಲಿ ಹಲವರು ತಮ್ಮ ಬರಹದಲ್ಲಿ ಪ್ರಕೃತಿಯನ್ನು ಅದ್ಭುತವಾಗಿ ನೀಡಿದ್ದಾರೆ. ಪ್ರಕೃತಿ ವರ್ಣನೆಯಲ್ಲಿ ಲೇಖಕರು ಭಾವಪರವಶರಾಗುವುದು ಸಹಜ. ಅಂತಹ ಸಂದರ್ಭಗಳಲ್ಲಿ ಅವರ ಮನಸ್ಸು ಹುಚ್ಚೆದ್ದು ಕುಣಿಯುವುದೂ ಉಂಟು. ಬರಹವು ಅತ್ಯಂತ ಭರದಿಂದ ಸಾಗುತ್ತದೆ. ಇನಾಂದಾರರು ತಮ್ಮ 'ನವಿಲುನೌಕೆ' ಹಾಗೂ 'ಈ ಪರಿಯ ಸೊಬಗು' ಕಾದಂಬರಿಯಲ್ಲಿ ಪ್ರಕೃತಿಯ ವರ್ಣನೆಯನ್ನು ಹೆಚ್ಚಾಗಿ ಬಳಸಿದ್ದಾರೆ.

ಪ್ರಸ್ತುತ ಮೋಹಿನಿ ಕಾದಂಬರಿಯಲ್ಲಿ ಅಲ್ಲಲ್ಲಿ ಬರುವ ಪ್ರಕೃತಿಯ ವರ್ಣನೆಗಳು ಮನಸ್ಸನ್ನು ಸೂರೆಗೊಳ್ಳುತ್ತದೆ. ಕಾದಂಬರಿಯು ಪುಣೆ ಮತ್ತು ಮದ್ರಾಸಿನ ಮಹಾನಗರಗಳಲ್ಲಿ ನಡೆಯುವುದರಿಂದ ಸಮುದ್ರದ ತೀರಗಳು ಹಾಗು ಸೂರ್ಯೋದಯ ಮತ್ತು ಸೂರ್ಯಾಸ್ತದ ವರ್ಣನೆಗಳು ಹೆಚ್ಚಾಗಿ ಕಂಡು ಬರುತ್ತದೆ.

ಇನಾಂದಾರರು ಕಾದಂಬರಿಯಲ್ಲಿ ನಿಸರ್ಗದ ಪಾತ್ರ ಹಿರಿದೆಂದು ಹೇಳಬಹುದು, ಕೇವಲ ನಿಸರ್ಗದ ಬಹಿರಂಗ ವರ್ಣನೆಗಳಲ್ಲಿಯೇ ತೃಪ್ತಿಯಾಗದೆ ಅದರ ನಿಗೂಢತೆಯತ್ತ ಗಮನ ಹರಿಯುತ್ತದೆ. ವಿಭಿನ್ನ ಸನ್ನಿವೇಶಕ್ಕೆ ಅನುಗುಣವಾಗಿ ವರ್ಣನೆ ಉದ್ದೇಶಕ್ಕೆ ತಕ್ಕಂತೆ ಪಾತ್ರದ ಮನಸ್ಥಿತಿಯನ್ನು ಸೂಚಿಸಲು ಸಹ ಸಹಕಾರಿಯಾಗುವಂತೆ ಚಿತ್ರಿಸಿದ್ದಾರೆ.ಪ್ರಕೃತಿಯ ವರ್ಣನೆ ಎಲ್ಲೂ ಕಾಲ್ಪನಿಕವೆನಿಸದೆ ವಾಸ್ತವತೆಗೆ ಧಕ್ಕೆ ತಗುಲದಂತೆ ನೈಜ ಚಿತ್ರದ ಅನುಭವ ತರುತ್ತದೆ.

ಮಹಾನಗರಗಳ ಆವರಣದಲ್ಲಿ ಕಾದಂಬರಿ ಸಾಗಿದ್ದರೂ ನಿಸರ್ಗದ ವರ್ಣನೆ ಅತಿರಂಜಕ ಎನಿಸದೆ ನಿಚ್ಚಳವಾದ ವಿವರಣೆ ಸಂಜೆ ಮುಂಜಾವುಗಳ ವರ್ಣನೆಗೆ ಪೂರಕವಾಗಿದೆ.

ಕೆಲವು ಉದಾಹರಣೆಗಳನ್ನು ನಾವಿಲ್ಲಿ ಗಮನಿಸೋಣ:

ಮೋಹಿನಿ ತನ್ನ ತವರು ಮನೆಗೆ ಬಂದಿರುತ್ತಾಳೆ. ಮುಂಬಯಿಯಿಂದ ಹೊರಟು ಬಂದಾಗಿನಿಂದ ಅವಳ ಮನಸ್ಸಿನಲ್ಲಿ ಒಂದು ಯೋಚನೆ ಆಗಾಗ ಕಾಡುತ್ತಿರುತ್ತದೆ. ಕನಸಿನಲ್ಲಿ ಮೋಹಿನಿ ಜುಹುವಿನ ಕಡಲ ದಡದಲ್ಲಿ ವಸಂತನೊಂದಿಗೆ ವಿಹರಿಸುತ್ತಿದ್ದ ಸಂದರ್ಭದಲ್ಲಿ ಬರುವಂತಹ ಒಂದು ಕನಸಿನ ವರ್ಣನೆ ಹೀಗಿದೆ.

" ಸೂರ್ಯ ಮುಳುಗುತ್ತಿದ್ದ, ಅದೇ ನೀರು ಹಾಯ್ದು ಹೋದ ಮಳಲು ಹೊನ್ನ ಬಣ್ಣದ ಕನ್ನಡಿಯಾಗಿತ್ತು. ನೀಲಾಕಾಶ ಶಾಂತವಾಗಿ ತೂಗಾಡುತ್ತಿತ್ತು. ಸುಳಿಗಾಳಿಯ ಮೇಲೆ ತೇಲಿ ಬರುತ್ತಿದ್ದ ಹೊನ್ನ ಕಿರಣಗಳು ಮಾಲೆ ಮಾಲೆಯಾಗಿ ದೂರದವರೆಗೂ ನಿಂತ ತೆಂಗಿನ ಮರಗಳ ಗರಿಗಳಲ್ಲಿ ಸಿಲುಕಿ ಅವುಗಳ ಹಿಂದಿನ ನೀಲ ಗಗನದಲ್ಲಿ ಲೀನವಾಗುತ್ತಿದ್ದವು. ಮೋಹಿನಿ ಅತ್ತಿತ್ತ ನೋಡುತ್ತ ಮುಂದಕ್ಕೆ ಸಾಗಿದ್ದಳು"*೧

ಕೇವಲ ಒಂದು ಕನಸನ್ನು ಕಂಡಳು ಎಂದು ಹೇಳುವುದಕ್ಕೂ ಮೋಹಿನಿಯ ಮನಸ್ಸಿನಲ್ಲಿ ಆಗುತ್ತಿದ್ದ ಹೊಯ್ದಾಟವನ್ನು ಲೇಖಕರು ಪ್ರಕೃತಿಯೊಂದಿಗೆ ಸಮೀಕರಿಸಿ ಚಿತ್ರಿಸಿರುವುದು ಹೆಚ್ಚು ರಸವತ್ತಾಗಿ ಕಾಣಬಹುದಾಗಿದೆ. ಓದುಗನಿಗೆ ರಸದೌತಣವನ್ನು ಉಣಿಸುತ್ತದೆ.

ಮೋಹಿನಿ ರಂಗನಾಥನೊಂದಿಗೆ ಮದ್ರಾಸಿಗೆ ಹೊರಡ ಬೇಕಾದ ಸಂದರ್ಭ ಅವಳಿಗೆ ಮದ್ರಾಸಿಗೆ ಹೋಗುವುದು ಇಷ್ಟವಿಲ್ಲದಿದ್ದರೂ ಹೊರಡ ಬೇಕಾದ ಸಂದರ್ಭ ಒದಗುತ್ತದೆ. ಹೊರಡುವ ಮೊದಲು ತಾಯಿಯನ್ನು ನೋಡಿ ಬರಲು ಹೋಗುತ್ತಾಳೆ. ನಂತರ ವಸಂತ ಹಾಗೂ ಶಕುಂತಲೆಯರನ್ನು ಭೇಟಿ ಮಾಡಿ ಮದ್ರಾಸಿಗೆ ಹೊರಟ ಸಂದರ್ಭ:

"ಬಾಂದ್ರಾ ಮಾಹೀಮ್ ಸೇತುವೆಗಳನ್ನು ದಾಟಿ ಬರುತ್ತಿದ್ದಾಗ ದಿನದ ಬೆಳಕು ಪೂರ್ತಿಯಾಗಿ ಕಂಕಿತ್ತು. ಪಶ್ಚಿಮದ ಕ್ಷಿತಿಜದಲ್ಲಿಯ ಕೆಂಪು ಕಪ್ಪಿಟ್ಟು ಕತ್ತಲೆಯಲ್ಲಿ ಕರಗುವುದರಲ್ಲಿತ್ತು"*೨

---

*೧ (ಮೋಹಿನಿ-೧) ಕನಸಿನ ಮನೆ ಪುಟ ೧೦, (ಮೋಹಿನಿ - ೩) *೨ ಬಾಡಿದ ಹೂ ಪುಟ ೧೭೧ ಭಾಗ ೨೫,

ಇನಾಂದಾರರು ಸೂರ್ಯಾಸ್ತದ ವರ್ಣನೆಯ ಹಿನ್ನೆಲೆಯಲ್ಲಿಯೇ ಮೋಹಿನಿಯ ಮನಸ್ಥಿತಿಯನ್ನು ನೀಡಿದ್ದಾರೆ. ಸೂರ್ಯಾಸ್ತದ ಚಿತ್ರ ಬರಿಯ ವಿವರವಾಗಿರದೆ ದೃಶ್ಯಾತ್ಮಕವಾಗಿದೆ. ತನ್ನ ಜೀವನದಲ್ಲಿ ಆಕೆ ಏನನ್ನೋ ಕಳೆದು ಕೊಂಡಂತೆ ಅನಿಸುತ್ತಿದ್ದ ಹಾಗೆ, ಮುಂದೆ ಅವಳ ಜೀವನ ದುರಂತದೆಡೆಗೆ ಸಾಗುತ್ತದೆ. "ಕತ್ತಲೆಯ ಕಡಲಿನಲ್ಲಿ" ಆಕೆ ಮುಳುಗುವ ಸೂಚನೆಯನ್ನು ಇಲ್ಲಿ ಕಾಣಬಹುದಾಗಿದೆ.

"ದೂರದ ಬೆಟ್ಟಗಳು ಹತ್ತಿರ ಬರುತ್ತಿದ್ದವು ಬಯಲು ಮುಂದೆ ಬಂದು ಬೆಟ್ಟಗಳ ಮೇಲೆ ಅಪ್ಪಳಿಸುತ್ತಿದ್ದ ಹಾಗೆ ಭಾಸವಾಗುತ್ತಿತ್ತು. ಕ್ಷಣಕ್ಷಣಕ್ಕೂ ಹತ್ತಿರವಾಗುತ್ತಿದ್ದ ಬೆಟ್ಟಗಳ ಸಾಲು ಆ ಬೆಳಗಿನ ಬೆಳಗಿನಲ್ಲಿ ಪ್ರೇಕ್ಷಣೀಯವಾಗಿತ್ತು".*೧

ಈ ವರ್ಣನೆಯಲ್ಲಿ ಪ್ರಕೃತಿ ರಮ್ಯವಾಗಿದ್ದರೂ ಕೂಡ ಮೋಹಿನಿಯ ಮನಸ್ಸಿನ ಹೊಯ್ದಾಟ, ತೊಳಲಾಟಗಳು ಅವಳ ಮನಸ್ಸನ್ನು ಹಿಡಿದಿಡಲಾರದಂತೆ ಅವಳ ಗಮನ ಬೇರೆಡೆ ಇರುವುದನ್ನು ಕಾಣಬಹುದಾಗಿದೆ.

"ವಸಂತ ರಾತ್ರಿಯಾಗಿ ಹೋಯಿತಲ್ಲ, ನನಗೇಕೋ ಹೆದರಿಕೆಯಾಗುತ್ತಿದೆ", "ಹೆದರಿಕೆ ಯಾಕೆ ಮೋಹಿನಿ? ಜೊತೆಯಲ್ಲಿ ನಾನಿಲ್ಲವೇ? ಎಂದ ವಸಂತ........
ಆಸ್ಪತ್ರೆಯಲ್ಲಿ ಮೋಹಿನಿ ಕಂಡ ಕನಸು, ಹಳವಂಡ ಮನಸ್ಸು ದಿಕ್ಕುದಾರಿ ತಪ್ಪಿಕೊಂಡು ಅಸ್ತವ್ಯಸ್ತವಾಗಿ ಅನಿಯಂತ್ರಿತವಾಗಿ ಹಿಂದೆ ಮುಂದೆ ಅತ್ತ ಇತ್ತ ಎಂದು ಎಲ್ಲೆಲ್ಲೋ ಹರಿದಾಡುತ್ತಿದೆ..... ಬಾನಿನಲ್ಲಿ ಚಂದ್ರನಿಲ್ಲ, ಮೆತ್ತನ್ನ ಮಳಲಿನಲ್ಲಿ ಹೆಜ್ಜೆ ಬೀಳುತ್ತಿತ್ತು.......ಎಂಥ ಕತ್ತಲೆಯಿದು, ವಸಂತ ನನ್ನ ಕೈಬಿಡಬೇಡ"*೨

ಮೋಹಿನಿ ಮೊದಲ ಕನಸಿನಲ್ಲಿ ಇದ್ದ ಮಧುರತೆ ಈ ಕನಸಿನಲ್ಲಿ ಇಲ್ಲವಾಗಿದೆ ಅಂತೆಯೇ ಪ್ರಕೃತಿಯ ಚಿತ್ರಣವನ್ನೂ ನೀಡುತ್ತಾರೆ, ಅಲ್ಲಿನ ಚಿತ್ರಣ ಸುಂದರವಾದರೆ ಇಲ್ಲಿಯ ರಾತ್ರಿಯ ವರ್ಣನೆಯಲ್ಲಿ ಮಧುರವಿಲ್ಲ ಭಯಾನಕ ಹಾಗೂ ಭೀಕರತೆ ಕಾಣಸಿಗುತ್ತದೆ. ಒಟ್ಟಾರೆಯಾಗಿ ಮೋಹಿನಿ ಕಾದಂಬರಿಯಲ್ಲಿ ಬರುವ ವರ್ಣನೆಗಳು ಸಹಜವಾಗಿ ಮನಸ್ಸನ್ನು ಸೆಳೆಯುತ್ತದೆ. ಕಾದಂಬರಿಕಾರರು ಕೊಡುವ ಹೋಲಿಕೆಗಳ ಸೊಗಸು ಒಂದು ರೀತಿಯದ್ದಾದರೆ ಪಾತ್ರದ ಮನಸ್ಥಿತಿಯನ್ನು ಸಹಜವಾಗಿ ತರುವುದು ಮತ್ತೊಂದು ರೀತಿ ಗಮನ ಸೆಳೆಯುತ್ತದೆ ಎಂದು ಹೇಳ ಬಹುದು.

---

* ೧. ಬಾಡಿದ ಹೂ ಪುಟ ೧೭೧, * ೨. ಕತ್ತಲೆಯ ಕಡಲು ಪುಟ ೨೩೦,೨೩೧

ಆ. ಭಾಷೆ - ಶೈಲಿ

ಒಂದೇ ಮನೋಧರ್ಮದ, ಒಂದೇ ಪರಂಪರೆಯ ಲೇಖಕರಾದರೂ ಪ್ರತಿಯೊಬ್ಬ ಲೇಖಕನ ಭಾಷೆ ಮತ್ತು ಶೈಲಿ ಭಿನ್ನವಾಗಿಯೇ ಇರುತ್ತದೆ. ಲೇಖಕನ ಪ್ರತಿಭೆಯಲ್ಲಿ ಮೂಡುವಂತಹ ಒಂದು ಕಲಾಕೃತಿಯು ಆಯಾ ವ್ಯಕ್ತಿಯ ವೈಯಕ್ತಿಕತೆಯನ್ನು ಪ್ರತಿಬಿಂಬಿತ್ತದೆ. ನವೋದಯ ಸಂದರ್ಭದ ಲೇಖಕರು ಒಂದೇ ಆಶಯವನ್ನು ಹೊಂದಿದ್ದರೂ ಕೂಡ ಭಾಷಾ ಶೈಲಿ ಮಾತ್ರ ಪ್ರತಿಯೊಬ್ಬರದ್ದೂ ಭಿನ್ನ ಎಂದೇ ಹೇಳಬಹುದು.

ಇನಾಂದಾರರ ಭಾಷೆ ಮೋಹಿನಿ ಕಾದಂಬರಿಯ ನಾಲ್ಕೂ ಭಾಗಗಳಲ್ಲಿ ಅತ್ಯಂತ ಸರಾಗವಾಗಿ ಯಾವ ಅಡೆತಡೆ ಇಲ್ಲದೆ ಸಾಗುತ್ತದೆ. ಲೇಖಕರು ಕಾದಂಬರಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಜೋಡಿಸುತ್ತಾ ಹೋಗದೆ ಅಲ್ಲಲ್ಲಿ ಕೆಲವು ಜೀವನಕ್ಕೆ ಬೇಕಾದಂತಹ ಅತ್ಯಮೂಲ್ಯ ಜಾಣ್ಮೆಯ ನುಡಿಗಳನ್ನು ನೀಡಿದ್ದಾರೆ. ಅವು ಅವರ ಅನುಭವದ ಆಳವನ್ನು, ವಿಚಾರದ ಅರಿವನ್ನು ತೋರಿಸುತ್ತವೆ.

ಕೆಲವು ಅಂತಹ ನುಡಿಗಳನ್ನು ನಾವು ಇಲ್ಲಿ ಗಮನಿಸಬಹುದು.

ವಸಂತ ಮತ್ತು ಮಾಲತಿಯರ ನಡೆಯುವ ಸಂಭಾಷಣೆಯನ್ನು ಗಮನಿಸೋಣ:

"ಓದು ಬೇಸರವಾಗಿಲ್ಲ , ಪರೀಕ್ಷೆ ಬೇಸರವಾಗಿದೆ. ಏನಾದರೂ ಇದೇ ಕೊನೆಯದು, ಓದುವುದೆಂದರೆ ಕೂಲಿ ಕೆಲಸ ಮಾಡಿದಂತೆ"*೧

ಪರೀಕ್ಷೆಗಾಗಿ ಓದುವುದು ಓದಲ್ಲ , ಅದು ಕೇವಲ ಕೂಲಿ ಕೆಲಸದಂತೆ. ಓದು ಈ ರೀತಿಯದ್ದಾಗಬಾರದು. ಅದೊಂದು ವ್ಯರ್ಥವಾದ ಓದಾಗುತ್ತದೆ ಎಂಬ ಅಭಿಪ್ರಾಯ ಕೇವಲ ಒಂದು ಕೆಲಸ ಗಿಟ್ಟಿಸಿಕೊಳ್ಳಲು ಪರೀಕ್ಷೆ , ಪದವಿಪಡೆಯುವುದಕ್ಕಿಂತ ಜೀವನ ರೂಪಿಸುವಂತಹ ಓದಾಗಬೇಕೆಂಬುದು ಸೂಕ್ಷ್ಮವಾಗಿ ತಿಳಿಸುತ್ತದೆ.

"ಊರು ಅಡವಿಯಾಗಿತ್ತು, ಮನೆ ಮಸಣವಾಗಿತ್ತು, ಭವಿಷ್ಯ ಕತ್ತಲೆಯ ಕಡಲಾಗಿತ್ತು"*೨

---

*೧. ಮೋಹಿನಿ - ೧ ಕನಸಿನ ಮನೆ ಪುಟ ೩೫ ,*೨. ಕನಸಿನ ಮನೆ ಪುಟ ೧೮೪

ಈ ಮಾತು ಮೋಹಿನಿ ಮನೆಯನ್ನು ಬಿಟ್ಟು ಹೊರಟ ಸಂದರ್ಭದಲ್ಲಿ ಋಹುವಿನ ಕನಸಿನ ಕೊನೆಯನ್ನು ನೆನಪಿಸುತ್ತಲೇ ಮೋಹಿನಿಯ ಬದುಕು ಹೇಗೆ ಕತ್ತಲೆಯ ಕಡೆಗೆ ಹೊರಳುತ್ತದೆ ಎಂಬ ಮುನ್ಸೂಚನೆಯನ್ನು ಈ ಮಾತುಗಳು ನೀಡುತ್ತದೆ.

"ತುಂಬಿದೀ ಊರಿನಲ್ಲಿ ಮನೆ ಇವಳಿಗಿಲ್ಲ" - ಪ್ರತಿಯೊಂದು ಕಾದಂಬರಿಯ ಶೀರ್ಷಿಕಾಪುಟದಲ್ಲಿ ಈ ರೀತಿಯ ಉದ್ಧರಣವನ್ನು ಬಳಸಿದ್ದಾರೆ. ಒಂದು ಸಾರಿ ಹೆಣ್ಣು ಹೊಸಿಲು ದಾಟಿದರೆ ಅವಳಿಗೆ ಆಶ್ರಯ ನೀಡುವುದಕ್ಕೆ ಯಾರು ಬರುವುದಿಲ್ಲ ಆಕೆ ನಿರಾಶ್ರಿತೆಯು, ಅಸಹಾಯಕಳು ಎಂದು ಹೇಳುತ್ತಾ , ಆ ಊರಿನಲ್ಲಿ ಎಷ್ಟೊಂದು ಮನೆಗಳು ಇವೆ ಆದರೆ ಇವಳ ಪಾಲಿಗೆ ಯಾರೂ ಇಲ್ಲವಾಗಿದ್ದಾರೆಂದು ಹೇಳುತ್ತಾರೆ.

"ಇದೆಲ್ಲ ಈಗ ನಾಲ್ಕು ದಿನ ಚೆಂದವಾಗಿ ಕಾಣುತ್ತದೆ. ಇಂದು ನಿನ್ನನ್ನು ಅಟ್ಟಕ್ಕೇರಿಸಿದವರೇ ಮುಂದೆ ನಿನ್ನಕಡೆಗೆ ತಿರುಗಿ ನೋಡುವುದಿಲ್ಲ. ಅರಳಿದ ಹೂವಿನ ಚೆಂದ ಎಷ್ಟುದಿನದ್ದು"*೧

ಮೋಹಿನಿಯ ಬದುಕಿನ ರೀತಿ ನೀತಿಗಳು ಅವಳ ತಾಯಿಗೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಸಂಪ್ರದಾಯ ಮನೆತನ , ಮಾನ ಮರ್ಯಾದೆಯೇ ಜೀವನ ಎಂದು ತಿಳಿದಿದ್ದ ಅವಳ ತಾಯಿ ಅಸಮಾಧಾನವನ್ನು ವ್ಯಕ್ತಪಡಿಸುವ ಮಾತುಗಳು . ಆ ಮಾತುಗಳು ಪರೋಕ್ಷವಾಗಿ ಸತ್ಯ ದರ್ಶನವನ್ನು ಮಾಡಿಸುತ್ತದೆ.

ಮೋಹಿನಿ ವಿವಾಹವಾಗಿ ಬಂದಾಗ ಗಂಡನ ಮನೆಯಲ್ಲಿ ಆಕೆ ಪಟ್ಟ ಪಾಡನ್ನು ನೆನೆದು ಕೊಂಡಾಗ ಅವಳ ಹೃದಯ ಒಳಗಿನಿಂದ ಈ ರೀತಿ ಕಿರುಚಿ ಕೊಳ್ಳುತ್ತಿದ್ದ ರೀತಿ ವಿವರಿಸುವ ಸಂದರ್ಭ: "ನೀನು ಕ್ರಯ ಕೊಟ್ಟು ತಂದ ದಾಸಿಯಲ್ಲ; ಕಟುಕ ಕೊಂಡ ದನವಲ್ಲ; ಇವರ ಬಾಗಿಲಲ್ಲಿ ಬಿದ್ದು ನರಳ ಬೇಕಾದ ನಾಯಿಯಲ್ಲ; ಮಾನವ ಪ್ರಾಣಿ ನೀನು! ಮಾನವ ಪ್ರಾಣಿಯಾಗಿಯೇ ಬಾಳು! ಎಂದು"*೨

ಸಾಮಾನ್ಯವಾಗಿ ಹೊಸದಾಗಿ ಮದುವೆಯಾಗಿ ಗಂಡನ ಮನೆಗೆ ಬಂದಂತಹ ಎಲ್ಲಾ ಹೆಣ್ಣು ಮಕ್ಕಳ ಪರಿಸ್ಥಿತಿ ಹೀಗೆ ಇರುತ್ತದೆ. ಹೋದ ಮನೆಯಲ್ಲಿ ಆಕೆಗೆ ಸರಿಯಾದ ಸ್ಥಾನ ಮಾನ ಗೌರವಗಳು ದೊರೆಯದಿದ್ದಾಗ ಈ ರೀತಿಯ ಒದ್ದಾಟಗಳು ಉಂಟಾಗುತ್ತದೆ ಅದೇ ಮೋಹಿನಿಯ ಮನಸ್ಸಿನಲ್ಲೂ ಆಗುತ್ತಿರುವುದನ್ನು ಇಲ್ಲಿ ವಿವರಿಸುತ್ತಾರೆ.

---

೧. ಬಾಡಿದ ಹೂ ಪುಟ ೧೩೦ , *೨.ಕನಸಿನ ಮನೆ ಪುಟ ೫೧

ಪ್ರಸ್ತುತ ಕಾದಂಬರಿಯು ನಗರಗಳಲ್ಲೇ ನಡೆಯುವುದರಿಂದ ಸುಶಿಕ್ಷಿತ ಕುಟುಂಬಗಳ ನಡುವೆಯೇ ಸಾಗುವುದರಿಂದ ಕಾದಂಬರಿಯು ಪೂರ್ಣ ಶಿಷ್ಟ ಭಾಷೆಯಲ್ಲಿಯೇ ಬಳಸಲಾಗಿದೆ. ಅಲ್ಲಲ್ಲಿ ಮರಾಠಿ, ಹಿಂದಿಯ ಪದಗಳು ಬಳಕೆಯಾಗಿದೆ. ಹೆಚ್ಚಾಗಿ ಆಂಗ್ಲಭಾಷೆ ಬಳಕೆ ಕಂಡುಬರುತ್ತದೆ. ಕಾರಣ ಇಲ್ಲಿ ಬರುವ ಎಲ್ಲ ಪಾತ್ರಗಳು ಸುಶಿಕ್ಷಿತರು ಹಾಗೂ ಮಹಾನಗರದಲ್ಲಿ ವಾಸಿಸಿರುವುದರಿಂದ ಎಲ್ಲೂ ಗ್ರಾಮ್ಯ ಅಥವಾ ಪ್ರಾದೇಶಿಕ ಭಾಷಾ ಬಳಕೆ ಕಾಣುವುದಿಲ್ಲ. ಜೊತೆಗೆ ಮೇಲೆ ಹೇಳಿದಂತೆ ಜೀವನಕ್ಕೆ ಬೇಕಾದಂತಹ ಅತ್ಯುತ್ತಮವಾದ ನುಡಿಮುತ್ತುಗಳನ್ನು ನೀಡುತ್ತಲೇ ಬದುಕಿನ ಪಾಠವನ್ನು ನೀಡಿದ್ದಾರೆ ಎನಿಸುತ್ತದೆ. ಹಲವು ಭಾಷೆಗಳ ಸತ್ವವನ್ನು ಹೀರಿ ಶುದ್ಧವಾದ , ನವಿರಾದ ಹಾಗು ಗಂಭೀರವಾದ ರೀತಿಯಲ್ಲಿ ಇವರ ಬರವಣಿಗೆಯು ಸಾಗುತ್ತದೆ ಎಂದು ಹೇಳ ಬಹುದು. ಭಾವಕ್ಕೆ ತಕ್ಕುದಾದ ಭಾಷೆ ಒಡಮೂಡಿದೆ. ಅನಾವಶ್ಯಕವಾಗಿ ಯಾವುದನ್ನು ತುರುಕುವ ಕೆಲಸ ಎಲ್ಲೂ ಮಾಡಿದಂತೆ ಕಾಣುವುದಿಲ್ಲ.

ಶೈಲಿ

ಲೇಖಕನ ಮನದಲ್ಲಿ ಪ್ರತಿಭೆಯೊಲಿದು, ಹೃದಯ ಉಮ್ಮಳಿಸಿ, ಪದಗಳೂ, ಪದಸಮುಚ್ಚಯಗಳೂ ಒಲಿದು ಸುಳಿಯುತ್ತಾದರೆ ಗದ್ಯವು ಕೂಡ ಪದ್ಯವನ್ನು ಮೀರಿಸಬಲ್ಲದು ಎಂಬ ಮಾತಿದೆ. "ಸೀಟಿ ಊದಿದ ಕೂಡಲೆ ಸಿದ್ಧವಾಗಿ ಸಮ್ಮುಖದಲ್ಲಿ ನಿಲ್ಲುವ ಸೈನಿಕರಂತೆ ಸಮರ್ಥ ಗದ್ಯ ರಚನೆ ನೆನೆದ ಕೂಡಲೇ ತಾಮುಂದು, ನಾಮುಂದು ಎಂದು ಪದಗಳು ನುಗ್ಗುತ್ತದೆ. ತನಗೆ ಬೇಕಾದ ಹವಣಿಕೆ ಅವನ ಪ್ರತಿಭೆಯನ್ನು ಅವಲಂಭಿಸಿರುತ್ತದೆ. ಹೀಗೆ ಭಾವ, ಭಾಷೆಗಳು ಉತ್ತಮ ಸಹಚರ್ಯ ಶೈಲಿಯಾಗಿರುತ್ತದೆ.

ಇನಾಂದಾರರು ತಮ್ಮ ಶೈಲಿಯಿಂದಲೇ ಓದುಗರ ಮನಸೆಳೆದವರು. ಇವರ ಸಂಸ್ಕೃತ, ಇಂಗ್ಲಿಷ್, ಮರಾಠಿ, ಹಿಂದಿ ಹೀಗೆ ಹಲವು ಭಾಷೆಗಳನ್ನು ತಿಳಿದು ಆಳವಾದ ಪಾಂಡಿತ್ಯವನ್ನು ಹೊಂದಿದ್ದರಿಂದ ಕಾದಂಬರಿಯ ಭಾಷಾ ಶೈಲಿ ನಿರಾಯಾಸವಾಗಿ ಎಲ್ಲೂ ಕುಂಟದೆ, ಎಡವದೆ ಸರಾಗವಾಗಿ ಸಾಗುತ್ತದೆ. ಕಾದಂಬರಿಯ ಭಾಷೆಯು ಅತ್ಯಂತ ಆನಂದದಾಯಕ ,ಹಾಗೂ ಆಹ್ಲಾದಕರವಾಗಿದೆ. ಪಾತ್ರದೊಂದಿಗೆ ಓದುಗ ಬಹಳ ನಿಕಟವಾಗುತ್ತಾನೆ. ಕೆಲವು ಸನ್ನಿವೇಶಗಳು ಕಥನವನ್ನು ಉಜ್ವಲವಾಗಿಸಿವೆ. ಸಂಭಾಷಣಾ ಶೈಲಿಯಲ್ಲಿ ನವಿರಾದ ಹಾಸ್ಯವನ್ನು ಅಲ್ಲಲ್ಲಿ ತಂದಿರುವುದಕ್ಕೆ ಕೆಲವು ಉದಾಹರಣೆಯನ್ನು ಗಮನಿಸೋಣ:

ಮಾಲತಿ: "ಹೇಗಾದವು ಪೇಪರುಗಳು?"*

ವಸಂತ: ಸಾಧಾರಣವಾಗಿಯೆ.

*ಕಟ್ಟಿದ ಮನೆ ಪುಟ ೩೧

ಮಾಲತಿ: ಇಂದು ಯಾವ ವಿಷಯವಿದ್ದಿತು?
ವಸಂತ: ಅರ್ಥಶಾಸ್ತ್ರ
ಮಾಲತಿ: ನಿಮ್ಮ ವ್ಯರ್ಥಶಾಸ್ತ್ರ
ವಸಂತ: ವ್ಯರ್ಥಶಾಸ್ತ್ರ ನಿನ್ನದು, ನನ್ನದಲ್ಲ...

ತಿಳಿ ಹಾಸ್ಯದ ಮಾತುಗಳು ಬರುವ ಮತ್ತೊಂದು ಸಂದರ್ಭವನ್ನು ಗಮನಿಸೋಣ:

ಅನುರಾಧೆ ತನ್ನ ಯಜಮಾನರನ್ನು ಪರಿಚಯಿಸುವ ಸಂದರ್ಭದಲ್ಲಿ ಆಪಟೆಯ ಉತ್ತರ:

"ಇವರು ನನ್ನ ಇವರು" - "ಮಿಸ್ಟರ್ ಅಂದರೆ ನಾನು ಸಾಕಿದ ಮಿಕ ಇದು ಎಂದಲ್ಲವೇ ಅರ್ಥ?".....
ಮೋಹಿನಿಗೆ ನಗು ತಡೆಯದಾಯಿತು.
ಆಪಟೆ: "ಈಗೇನು ಹೇಳಿದೆ ನಾನು? ಇದ್ದುದ್ದನ್ನೇ ಹೇಳಿದರೆ"

ಹೀಗೆ ಲೇಖಕರು ಅಲ್ಲಲ್ಲಿ ನವಿರಾದ ಹಾಸ್ಯವನ್ನು ಸಂದರ್ಭಕ್ಕೆ ತಕ್ಕಂತೆ ಸಂಭಾಷಣೆಯಲ್ಲಿ ತಂದಿರುವುದು ಓದುಗರ ಮನವನ್ನು ಆನಂದಗೊಳಿಸುತ್ತದೆ. ಜೊತೆಗೆ ಕಾದಂಬರಿಯ ಸೊಬಗನ್ನೂ ಹೆಚ್ಚಿಸಿದೆ ಎಂದು ಹೇಳ ಬಹುದು.

ರಸ – ಅಲಂಕಾರಗಳು ಗದ್ಯ – ಪದ್ಯಗಳ ಚೆಲುವನ್ನು ಹೆಚ್ಚಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಮೋಹಿನಿ ಕಾದಂಬರಿಯಲ್ಲಿ ಮೋಹಿನಿ ಕಂಡ ಕನಸಿನಲ್ಲಿ ಶೃಂಗಾರ ರಸವು ಸೂರೆಯಾಗಿದೆ ಎಂದು ಹೇಳ ಬಹುದು. ಲೇಖಕರು ಅಲಂಕಾರವನ್ನು ಅತ್ಯಂತ ಸೊಗಸಾಗಿ ಬಳಸಿಕೊಂಡಿದ್ದಾರೆ ಎಂದು ಹೇಳ ಬಹುದು.

"ವಸಂತನು ಮೋಹಿನಿಯನ್ನು ತನ್ನ ತೋಳುಗಳಲ್ಲಿ ಬಂಧಿಸಿ, ಗದ್ದ ಹಿಡಿದು ಅವಳ ಮುಖವನ್ನು ಮೇಲಕ್ಕೆತ್ತಿದ. ಬೆಳುದಿಂಗಳು ಅವಳ ಮುಖದ ಮೇಲೆ ಲಾಸ್ಯವಾಡುತ್ತಿತ್ತು. ಅವಳ ಕಣ್ಣುಗಳಲ್ಲಿ ಆದಿಸೃಷ್ಟಿಯ ಮಾಯೆಯಿತ್ತು."

ವಸಂತ: "ಚಂದ್ರನನ್ನು ನೋಡಿದೆಯಾ, ಮೋಹಿನಿ?"
ಮೋಹಿನಿ: "ಓ ! ಎಂಥ ಚೆಲುವು?"
ವಸಂತ: "ಆದರೆ ನಿನ್ನ ಚೆಲುವು ಅವನಿಗಿಲ್ಲ, ಮೋಹಿನಿ!"

ಮೋಹಿನಿ: " ಈ ಗಾನಸುಧೆ ಎಲ್ಲಿಂದ ಬರುತ್ತಿರ ಬಹುದು?
ವಸಂತ: "ಗಂಧರ್ವಲೋಕದಿಂದ"
ಮೋಹಿನಿ: "ನಾವು ಅಲ್ಲಿಗೆ ಹೋಗುವ ನಡೆ"

ಮೋಹಿನಿ: " ಗಂಧರ್ವರೆಲ್ಲಿ?"
ವಸಂತ: " ಅವರು ಅಪ್ಸರೆಯ ಬೆನ್ನ ಹಿಂದೆ ಹೋದರು"
ಮೋಹಿನಿ: " ಯಾಕೆ?"
ವಸಂತ: " ನಿನ್ನ ಹಿಂದೆ ನಾನು ಇಲ್ಲಿಗೆ ಬಂದುದೇಕೆ?"
ಮೋಹಿನಿ: " ಹಾಗಾದರೆ ಇಂದ್ರನೆಲ್ಲಿ?"
ವಸಂತ: " ಅದು ನೋಡು ಮುಗಿಲಲ್ಲಿ , ಚಂದ್ರನಾಗಿ ನೋಡುತ್ತಿದ್ದಾನೆ....."*೧

ಹೀಗೆಯೇ ಸಂಭಾಷಣೆ ಮುಂದುವರೆಯುತ್ತದೆ. ಇಲ್ಲಿ ಶೃಂಗಾರ ಲಾಸ್ಯರಸವು ಕಾವ್ಯದಂತೆ ಮೂಡಿ ಬಂದಿರುವುದನ್ನು ಕಾಣ ಬಹುದಾಗಿದೆ. ಕೆಲವು ಕಡೆ ಶೃಂಗಾರರಸ ಹಾಸ್ಯರಸದಂತೆ ಕಂಡರೂ ಸನ್ನಿವೇಶಕ್ಕೆ ಸೂಕ್ತವಾಗಿ ಹೃದ್ಯವೆನಿಸುತ್ತದೆ, ಎಲ್ಲಿಯೂ ಅಶ್ಲೀಲತೆ ಕಾಣುವುದಿಲ್ಲ.

ಡಾ||ಶಿವರಾಮ ಕಾರಂತರು ಹಿಂದೊಮ್ಮೆ ಹೇಳಿದಂತೆ ....." ಕದ್ದು, ಮರೆಯಲ್ಲಿ ತಮ್ಮವರಿಂದ ಅಡಗಿ ಕುಳಿತು ಓದುವ ಸಾಹಿತ್ಯ ರುಚಿಯಾಗಿರಬಹುದು. ಅದಂತೂ ಶುಚಿಯಾದ ಸಾಹಿತ್ಯವಲ್ಲ...." ಹಗಲು ಬೆಳಕಿನಲ್ಲಿ , ಹತ್ತು ಜನರ ಮುಂದೆ , ಹೆಂಗಸರು , ಮಕ್ಕಳು ನಿಸ್ಸಂಕೋಚವಾಗಿ ಓದಬಹುದಾದುದೇ ಶುಚಿಯಾದ ಸಾಹಿತ್ಯ. ಇನಾಂದಾರರ ಕಾದಂಬರಿಗಳಲ್ಲಿ ವ್ಯಭಿಚಾರ, ಬಲಾತ್ಕಾರ, ಪ್ರೇಮ - ಪ್ರಣಯಗಳು ಸನ್ನಿವೇಶಗಳು ಬೇಕಾದಷ್ಟು ಇದೆ. ಸ್ತ್ರೀರೂಪವರ್ಣನೆ ಧಾರಾಳವಾಗಿದೆ. ಆದರೆ, ನಮ್ಮ ರತ್ನಾಕರವರ್ಣಿ ಹೇಳಿದಂತೆ, ಶೃಂಗಾರದೊಡನೆ "ಉಟ್ಟಬಟ್ಟೆಯನ್ನು ಸುಲಿದುಕೊಳ್ಳುವವ ಪಂಕ್ತಿ-ಪರಂಪರೆ ಇನಾಂದರರದಲ್ಲ. ಶೃಂಗಾರದ ಎಂತಹ ಉತ್ಕಟ ಸನ್ನಿವೇಶಗಳಲ್ಲೂ ಇನಾಂದಾರರು ಲೇಖನಿ ಮರ್ಯಾದೆ ಅತಿಕ್ರಮಿಸಿಲ್ಲ ಎಂಬುದು ಅತ್ಯಂತ ಶ್ಲಾಗನೀಯ ಎನ್ನುತ್ತಾರೆ.*೨

ಒಟ್ಟಾರೆಯಾಗಿ ಮೋಹಿನಿ ಕಾದಂಬರಿಯ ನಾಲ್ಕೂ ಭಾಗಗಳಲ್ಲಿ ಇನಾಂದಾರರು ಅನುಸರಿಸಿದ ಭಾಷೆ, ವಿಧಾನ, ಸಾಂಕೇತಿಕತೆ, ತಂತ್ರ ಮೆಚ್ಚುವಂತದ್ದು. ಗದ್ಯವಾದರೂ ವರ್ಣನೆಗಳು , ಹಿತನುಡಿಗಳು, ಹಾಸ್ಯ, ರಸ ಮತ್ತು ಅಲಂಕಾರಗಳು ಮನೋಜ್ಞವಾಗಿ ಮಿಳಿತಗೊಂಡು ಓದುಗನ್ನು ರಂಜಿಸುವುದರೊಂದಿಗೆ ಮೋಹಿತರನ್ನಾಗಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

---

೧. ಕನಸಿನ ಮನೆ ಪುಟ ೧೦೧, ೧೦೨, ೧೦೩
೨. ಇನಾಂದಾರ್ ವ್ಯಕ್ತಿ- ಕೃತಿ - ಎನ್ ರಾಮಚಂದ್ರ

ಇ.ಸ್ವಗತಗಳು:

ವಸ್ತುವೊಂದನ್ನು ಅಭಿವ್ಯಕ್ತಿಸುವ ರೀತಿಯನ್ನು ತಂತ್ರವೆಂದು ಕರೆಯ ಬಹುದು. "ಕಥೆಯು ಕಾದಂಬರಿಯ ಆತ್ಮವಾದರೆ, ತಂತ್ರ ಅದರ ದೇಹವಗುತ್ತದೆ. ಹೇಳಲು ಯೋಗ್ಯವಾದ ಕಥೆಹೇಳುವ ರೀತಿ ಎರಡೂ ಹಾಸುಹೊಕ್ಕಾಗಿ ಹೊಂದಿಕೊಂಡರೆ ಆಗ ಕಾದಂಬರಿಯ ಕಲಾ ಕಟ್ಟಡವು ಸುಭದ್ರವಾಗಿ ನಿಲ್ಲುತ್ತದೆ". ಲೇಖಕನಲ್ಲಿ ಪ್ರತಿಭೆಯಿದ್ದಾಗ ಅಭಿವ್ಯಕ್ತಿ ತಂತ್ರಾತ್ಮಕವಾಗಿ ಹೊರಹೊಮ್ಮುತ್ತದೆ. ಕೆಲವೊಮ್ಮೆ ತಂತ್ರಕ್ಕಾಗಿಯೇ ಕಾದಂಬರಿ ರಚಿಸುವುದೂ ಉಂಟು. "ತಂತ್ರವೆಂದರೆ, ಲೇಖಕನ ಸಾಮಗ್ರಿಯಾದ ಅನುಭವ ತನ್ನ ಬಗ್ಗೆ ಸರಿಯಾದ ಗಮನಕೊಡಲು ಅವನನ್ನು ಒತ್ತಾಯಿಸುವ ಸಾಧನ. ತಂತ್ರವೆಂದರೆ ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು , ಶೋಧಿಸಲು, ವಿಕಾಸಗೊಳಿಸಲು ಅದರ ಅರ್ಥವನ್ನು ಸೂಚಿಸಲು ಹಾಗೂ ಕೊನೆಯದಾಗಿ ವಸ್ತುವನ್ನು ಬೆಲೆ ಕಟ್ಟಲು ಇರುವ ಏಕಮಾತ್ರ ಸಾಧನ" * ಎಂಬುದಾಗಿ ಮಾರ್ಕ್ ಶೋರರ್ ಅಭಿಪ್ರಾಯ ಪಡುತ್ತಾರೆ.

ಸಾಮಾನ್ಯವಾಗಿ ನಾವು ನೋಡುವಂತಹ ಎಷ್ಟೋ ಕೃತಿಗಳು ಬಹು ಸರಳ, ಹೇಳ ಬೇಕಾದುದನ್ನು ನೇರವಾಗಿ ಹೇಳಿ ಬಿಡುತ್ತದೆ. ಅವುಗಳಲ್ಲಿ ತಂತ್ರದ ಮಾತೇ ಇಲ್ಲ ಎಂದೆನಿಸುತ್ತದೆ. ಅನುಭವದ ಮಂತ್ರವಿಲ್ಲದಿದ್ದರೆ ತಂತ್ರಕ್ಕೆ ಏನೂ ಬೆಲೆಯಿಲ್ಲ ಅಥವಾ ವೈವಿಧ್ಯ ಮಾತ್ರಕ್ಕಾಗಿ ತಂದ ತಂತ್ರವಲ್ಲ. ಅದು ಅನುಭವದ ಅಭಿವ್ಯಕ್ತಿಗೆ ಸಮರ್ಪಕವಾದ ಸಾಧನವಾದರೆ ಅಂಥ ತಂತ್ರಕ್ಕೆ ಬೆಲೆ. ಎಷ್ಟೋವೇಳೆ ಶ್ರೀಮಂತವಾದ ಅನುಭವ ತನ್ನ ಅಭಿವ್ಯಕ್ತಿಗೆ ಯಾವ ತಂತ್ರವನ್ನೂ ಲೆಕ್ಕಿಸುವುದಿಲ್ಲ ಎಂದೇ ಹೇಳ ಬಹುದು.

ಆಧುನಿಕ ಕಾದಂಬರಿಕಾರರಲ್ಲಿ ಹೆಚ್ಚಾಗಿ "ಪ್ರಜ್ಞಾ ಪ್ರವಾಹ ತಂತ್ರ"ವನ್ನು ಬಳಸಿರುವುದನ್ನು ಕಾಣುತ್ತೇವೆ. ಈ ತಂತ್ರದಲ್ಲಿ ಕಾದಂಬರಿಕಾರ ಒಂದು ಪಾತ್ರದ ಗ್ರಹಿಕೆಗಳು, ಅನುಭವಗಳು, ಅನುಭವ, ನೆನಪು, ಇಂಪ್ರೆಶನ್, ಅವು ಆ ಪಾತ್ರದ ಮನಸ್ಸಿಗೆ ಹೇಗೆ ಬರುತ್ತದೋ ಹಾಗೆ ಅತಾರ್ಕಿಕವೆಂಬಂತೆ ತೋರುವ ಅಸ್ತವ್ಯಸ್ತವೆಂಬ ರೀತಿಯಲ್ಲಿ ದಾಖಲು ಮಾಡುತ್ತಾನೆ.

ಈ ರೀತಿ ದಾಖಲೆ ಮಾಡುವಾಗ ನಿದ್ರೆ-ಎಚ್ಚರ ಮುಂತಾದ ವಾಸ್ತವಿಕತೆಯ ನೆಲೆಯನ್ನಾಗಲಿ, ಭಾಷೆ ವ್ಯಾಕರಣವನ್ನಾಗಲಿ ಗಮನಿಸುವುದಿಲ್ಲ.

---

*ಕಾದಂಬರಿಯ ವಸ್ತು ಮತ್ತು ತಂತ್ರ, ಗಿರಡ್ಡಿ ಗೋವಿಂದರಾಜು ಪುಟ ೧೦

ಈ ತಂತ್ರ ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. ಈ ಒಂದು ತಾಂತ್ರಿಕ ಚೌಕಟ್ಟಿನಲ್ಲಿ ಪಾತ್ರಗ ಮಾನಸಿಕ ಪ್ರಕ್ರಿಯೆಯ ಎಲ್ಲಾ ವೈಶಾಲ್ಯತೆ, ಆಲೋಚನೆ, ನೆನಪು,ಭಾವನೆಗಳನ್ನು ಹಿಡಿದಿಡುವ ಪ್ರಯತ್ನ ನಡೆಯುತ್ತದೆ.

ತ.ರಾ.ಸು ಅವರ ಕಾದಂಬರಿಗಳಲ್ಲಿ ವಸ್ತು ವೈವಿಧ್ಯವನ್ನು ಗುರುತಿಸುವಂತೆಯೇ, ತಂತ್ರ ವೈವಿಧ್ಯವನ್ನೂ ಗುರುತಿಸಬಹುದು. ಇದಕ್ಕೆ ತ.ರಾ.ಸು ಅವರ ಪ್ರಯೋಗ ಪ್ರಿಯತೆಯೇ ಕಾರಣ. ಅನುಭವದ ಮಂತ್ರವಿಲ್ಲದಿದ್ದರೆ ತಂತ್ರಕ್ಕೆ ಏನೂ ಬೆಲೆಯೇ ಇಲ್ಲ, ಅಥವಾ ವೈವಿಧ್ಯ ಮಾತ್ರಕ್ಕಾಗಿ ತಂದ ತಂತ್ರವಲ್ಲ ಅದು ಅನುಭವದ ಅಭಿವ್ಯಕ್ತಿಗೆ ಸಮರ್ಪಕವದ ಸಾದನವಾದರೆ ಅಂಥ ತಂತ್ರಕ್ಕೆ ಬೆಲೆ. ಕಾರಂತರ ಕಾದಂಬರಿಗಳನ್ನು ಗಮನಿಸಿದಾಗ ಅವುಗಳಲ್ಲಿ ತಂತ್ರವಿಲ್ಲ ಎಂದಲ್ಲ ಅನುಭವ ಹರಿದದ್ದೇ ತಂತ್ರವಾಗಿದೆ.

ಇನಾಂದಾರರ ಕಾದಂಬರಿಯ ಪಾತ್ರಗಳ ಸ್ವಗತಗಳು ಭೈರಪ್ಪನವರ ಅನ್ವೇಷಣೆ ಕಾದಂಬರಿಯ ಸ್ವಗತಗಳನ್ನು ನೆನಪಿಗೆ ತರುತ್ತದೆ. ನವ್ಯರು ಈ ತಂತ್ರವನ್ನು ಹೆಚ್ಚಾಗಿ ಬಳಸಿದ್ದಾರೆ. ಇದನ್ನು "ಅಂತರಂಗದ ಏಕಾಂತ ಭಾಷಣಗಳೆಂದು" **Interior Monlogue** ವಿಧಾನವನ್ನು ಕಾದಂಬರಿಯಲ್ಲಿ ವಿಶೇಷವಾಗಿ ಬಳಸಿಕೊಂಡಿರುವಂತೆ ಕಾಣುತ್ತದೆ. ಇದೇ ರೀತಿಯಾದ ಒಂದು ತಂತ್ರ ಇನಾಂದಾರರು ತಮ್ಮ ಮೋಹಿನಿ ಕಾದಂಬರಿಯಲ್ಲಿ ಬಳಸಿದ್ದಾರೆ ಎನಿಸುತ್ತದೆ. ತಂತ್ರಕ್ಕೆ ಹೆಚ್ಚು ಒತ್ತು ಕೊಡದಿದ್ದರೂ ಕೂಡ ಇವರ ಕಾದಂಬರಿಯಲ್ಲಿ ಬರುವ ಎಲ್ಲ ಪಾತ್ರಗಳು ಸಾಮಾನ್ಯವಾಗಿ ತಮಗೆ ತಾವೇ ಮಾತನಾಡಿಕೊಳ್ಳುತ್ತವೆ. ಕನಸು ಮತ್ತು ಎಚ್ಚರದ ಸ್ಥಿತಿಯಲ್ಲಿ ಮೂಡಿ ಬರುವಂತಹ ಸ್ವಗತಗಳು ಕಾದಂಬರಿಯ ಮೆರುಗನ್ನು ಹೆಚ್ಚಿಸುವುದಷ್ಟೇ ಅಲ್ಲದೆ ನವ್ಯರ ಪ್ರಭಾವ ಆಗಿರುವಂತೆ ಜೊತೆಗೆ ಇದೊಂದು ವಿಶೇಷವಾದ ತಂತ್ರ ಇವರು ಇಲ್ಲಿ ಬಳಸಿಕೊಂಡಿರುವಂತೆ ಕಾಣುತ್ತದೆ. ಎಷ್ಟೋ ಸಂದರ್ಭದಲ್ಲಿ ಸಹಜಾಭಿವ್ಯಕ್ತಿಯೇ ನೂತನವಾದ ತಂತ್ರವಾಗಿ ಕಾದಂಬರಿಯ ಯಶಸ್ಸಿಗೆ ಕಾರಣವಾಗಿಬಿಡುತ್ತದೆ ಎನಿಸುತ್ತದೆ. ಈ ಕಾದಂಬರಿಯಲ್ಲಿ ಬರುವ ಸ್ವಗತಗಳು ವಿನೂತನವಾಗಿ ಲೇಖಕರ ಪ್ರತಿಭಾವಂತಿಕೆಯ ವೈವಿಧ್ಯಪೂರ್ಣ ತಂತ್ರದಂತೆ ವಿಶಿಷ್ಟವಾಗಿ ಮೂಡಿಬಂದಿದೆ ಎಂದು ಹೇಳ ಬಹುದಾಗಿದೆ.

ಅಧ್ಯಾಯ – ೮

ಸಮಾರೋಪ:

ಅಧ್ಯಾಯ – ೮

ಸಮಾರೋಪ:

ಮೋಹಿನಿ ಕಾದಂಬರಿಯಲ್ಲಿ ಬರುವ ವಿಶೇಷವಾದ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದೇನೆ. ಬದುಕಿನ ಜೀವಾಳಕ್ಕೆ ಸಂಬಂಧಿಸಿದ ವಸ್ತುವನ್ನೇ ಆಯ್ದುಕೊಂಡು ಅವುಗಳನ್ನು ಸೂಕ್ಷ್ಮವಾಗಿ ಹೇಗೆ ವೈಚಾರಿಕವಾದ ನೆಲೆಗೆ ತಂದು ನಿಲ್ಲಿಸುವುದೆಂಬುದರ ವಿಶ್ಲೇಷಣೆ ಮಾಡಿರುತ್ತೇನೆ.

ಮಧ್ಯಮ ವರ್ಗದ ಜನರ ಸಮಸ್ಯೆಯಾದ ಸುಶಿಕ್ಷಿತ ಪಾತ್ರಗಳ ದೃಷ್ಟಿಯಿಂದ ಇನಾಂದಾರರು ಮೋಹಿನಿ ಕಾದಂಬರಿಯ ಮೂಲಕ ಮುಂಬಯಿಯ ಮಧ್ಯಮ ವರ್ಗದ ಜೀವನ ಚಿತ್ರಣವನ್ನು ನೋಡುವುದು. ವ್ಯಕ್ತಿ ಪ್ರಧಾನವಾದ ಕಾದಂಬರಿ ಹೇಗೆ ಬೆಳೆದಿದೆ ಎಂಬುದನ್ನು ಚರ್ಚಿಸಿರುತ್ತೇನೆ.

ಇನಾಂದಾರರು ಹೆಣ್ಣಿನ ಸಿಟ್ಟು, ಅಸಹನೆ ಈ ಎಲ್ಲಾ ಬದಲಾವಣೆಗಳಿಗೂ ಮೂಲ ಎಂದು ಹೇಳುವ ಕೆಲಸವನ್ನು ಮೋಹಿನಿ ಪಾತ್ರವನ್ನು ಇಟ್ಟುಕೊಂಡು ಕಾದಂಬರಿ ಉದ್ದಕ್ಕೂ ಹೇಳುತ್ತಾಸಾಗಿರುವುದು ಒಂದು ವಿಶೇಷ ಪಾತ್ರ ಹಠಕ್ಕೆ ಬಿದ್ದು ಸ್ವತಂತ್ರದ ಮಿತಿಗಳನ್ನು ಅರಿಯದೆ ಹೇಗೆ ಅಧಃಪತನಗೊಳ್ಳುತ್ತದೆ ಎಂಬ ಅಂಶವನ್ನು ನಾನು ಈ ಕಾದಂಬರಿಯಲ್ಲಿ ಗುರುತಿಸಿರುತ್ತೇನೆ.

"ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ" ಎಂಬ ಮಾತು ಮೋಹಿನಿ ಪಾತ್ರಕ್ಕೆ ಬಹಳ ಹತ್ತಿರವಾಗಿದ್ದು. ಈ ಪಾತ್ರ ಹಠ, ಸಿಟ್ಟು, ಅಸಹಾಯಕತೆಯಿಂದ ಪ್ರತಿರೋಧ ಪಾತ್ರದಿ ನಿಂತು ತನ್ನ ಜೀವನವನ್ನು ಹಾಗೂ ತನ್ನನ್ನೇ ಬಲಿಯಾಗಿಸಿಕೊಂಡು ದುರಂತಕ್ಕೆ ಮಾಗಿಯ ಕಾಲದಲ್ಲಿ ಪ್ರಕೃತಿಯು ನಲುಗುವಂತೆ ಕತ್ತಲೆಯ ಕಡಲಿನ ಗರ್ಭದಲ್ಲಿ ಮೋಹಿನ ಮುಳುಗಿ ಹೋಗುವಂತೆ ಮಾಡುತ್ತದೆ.

ಇಲ್ಲಿ ನಾನು ಮುಖ್ಯವಾಗಿ ಈ ಕಥಾ ಛಿತ್ತ್ರವನ್ನು ಕಾಲದ ಪ್ರವಾಹದಲ್ಲಿ ಅಂದರೆ ಸರಿ ಸುಮಾರು ಮೂವತ್ತು ವರ್ಷಗಳ ಕಾಲ ಇನಾಂದಾರರು ಮೋಹಿನಿಯನ್ನು ಶೋಧಿಸುವ ಅಂದರೆ ಅವರ ಜೀವನದ ಬಹುಪಾಲು ಆಯುಷ್ಯವನ್ನು ಹೆಣ್ಣಿನ ಗತಿ-ಸ್ಥಿತಿ , ಶಕ್ತಿ - ಸಾಮರ್ಥ್ಯ ಹೆಣ್ಣಿನೆದೆಯ ಹಂಬಲಗಳನ್ನು ಹೊರ ಹಾಕುವಿಕೆಗಾಗಿ ಈ ಇಡೀ ನಾಲ್ಕು ಸಂಪುಟಗಳ ಬೃಹದಾದ ಕಾದಂಬರಿಯನ್ನು ರಚಿಸಿದ್ದಾರೆ ಎಂದು ಹೇಳಲು ಇಚ್ಛೆಸುತ್ತೇನೆ.

"Before running towards a person, make sure that, that person wont laugh at you if you stumble of fall"

ಎಂಬ ಸಾಲುಗಳಂತೆ ಅಂತಹ ಸಂಗಾತಿಯನ್ನು ಅರಸುವ, ಪಡೆಯುವ ಮಾಯಾವಿ ಹಾದಿಯನ್ನು ಎಡತಾಕಿದ ಮೋಹಿನಿಯ ಬದುಕಿನ ನಾನಾ ಘಟ್ಟಗಳ ತಿರುವುಗಳು ಪ್ರಜ್ಞಾ ಪ್ರವಾಹ ತಂತ್ರದಲ್ಲಿ ಸ್ವಗತಗಳನ್ನು ಒಳಗೊಂಡು ಹೇಗೆ ಚಿತ್ರಿತವಾಗಿದೆ ಎಂಬುದನ್ನು ಗುರುತಿಸುತ್ತ ಕಾದಂಬರಿಯಲ್ಲಿ ಕಾಣುವ ನೈತಿಕತೆ ಮತ್ತು ಸಾಮಾಜಿಕತೆಯನ್ನು ಅಲ್ಲಿ ಬರುವ ಗಂಡು - ಹೆಣ್ಣಿನ ಸಂಬಂಧಗಳ ನಡುವೆ ಹುಡುಕುವ ಪ್ರಯತ್ನ ಮಾಡಿದ್ದೇನೆ. ಜೊತೆಗೆ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸುವುದನ್ನು ಈ ಸಂಶೋಧನೆಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಇಲ್ಲಿ ಬರುವ ಮೋಹಿನಿಯ ಪಾತ್ರದ ಸುತ್ತ ಬರುವ ಕೆಲವೇ ಪಾತ್ರ ಅವಳ ಬದುಕಿನ ಜೊತೆಗೆ ಆಟವಾಡಿ ಪರದೆ ಹಿಂದೆ ಸರಿದ ಪಾತ್ರವಾಗುವ ವ್ಯಕ್ತಿಗಳ ಮನೋವಿಶ್ಲೇಷಣೆಯನ್ನು ಮಾಡಿದ್ದೇನೆ.

ಹೆಣ್ಣು ಸ್ವತಂತ್ರಳಾಗ ಬೇಕೆಂದು ಬಯಸಿದ ಆಲೋಚನೆ ಆಚರಣೆಗೆ ತರುವಲ್ಲಿ ಕುಸಿದಿದ್ದು ಇಲ್ಲಿ ಕಾಣಬಹುದು. ಹೆಣ್ಣಿನ ಅಸಹಾಯಕ ಸ್ಥಿತಿ, ಯಾತನೆ, ಸ್ತ್ರೀ ಸಹಜ ಎಂಬಂತೆ ಮಾಡುವ ಸಂಪ್ರದಾಯ ವ್ಯವಸ್ಥೆಯನ್ನು ಗುರುತಿಸುವುದನ್ನು ಇನಾಂದಾರರು ಮೋಹಿನಿ ಕಾದಂಬರಿಯಲ್ಲಿ ಮಾಡಿದ್ದಾರೆ.

ಒಂದು ಹೆಣ್ಣಿನ ಅಂತರಾಳ ಅರಿಯುವ ವ್ಯವಸ್ಥೆ ಸಂಪ್ರದಾಯ ನಿಷ್ಠ ಸ್ಥಿತಿಯಿಂದ ಹೊರ ಬರಲು ಹವಣಿಸಿದರೂ ಕೆಲವೊಂದು ಮಿತಿಯಲ್ಲಿ ಅದನ್ನು ಮೀರಲು ಸಾಧ್ಯವಿಲ್ಲ ಎನ್ನುತ್ತಾರೆ ಎಂಬುದನ್ನು ಒಪ್ಪುವಂತಹ ಸ್ಥಿತಿಯಾಗಿದೆ.

ಕುತೂಹಲಕರವಾಗಿ ಮುಂದುವರಿಯುವ ಕಥನ ಶೈಲಿ ಇವರ ಕಾದಂಬರಿಯ ಜನಪ್ರಿಯತೆಗೆ ಸಾಕ್ಷಿ. ಓದುಗರನ್ನು ಸೆರೆ ಹಿಡಿಯಬಲ್ಲ ಶಕ್ತಿಯೇ ಇವರ ಕಾದಂಬರಿಯ ಹಿರಿಮೆ. ಅದು ಕಾದಂಬರಿಯ ಕಥನ ಕೌಶಲ ಮತ್ತು ನಿರೂಪಣೆಯನ್ನು ಆಧರಿಸಿದೆ. ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಇವರ ಕೊಡುಗೆ ಗಮನಾರ್ಹ ಎಂಬ ಅಂಶವನ್ನು ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಿರುತ್ತೇನೆ.

ಗ್ರಂಥಸೂಚಿ

ಗ್ರಂಥಸೂಚಿ

ಆಕರ ಗ್ರಂಥಗಳು:

ಕೃತಿಕಾರ	ಕೃತಿ
ವಿ.ಎಂ.ಇನಾಂದಾರ್	೧. ಕನಸಿನ ಮನೆ–ಮೋಹಿನಿ ಕಾದಂಬರಿ ಭಾಗ ೧ ಧೃತಿ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ ೧೯೭೨ ದ್ವಿತೀಯ ಮುದ್ರಣ ೨೦೦೭
	೨. ಕಟ್ಟಿದ ಮನೆ– ಮೋಹಿನಿ ಕಾದಂಬರಿ ಭಾಗ ೨ ಧೃತಿ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ ೧೯೭೨ ದ್ವಿತೀಯ ಮುದ್ರಣ ೨೦೦೭
	೩. ಬಾಡಿದ ಹೂ – ಮೋಹಿನಿ ಕಾದಂಬರಿ ಭಾಗ ೩ ಧೃತಿ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ ೧೯೭೨ ದ್ವಿತೀಯ ಮುದ್ರಣ ೨೦೦೭
	೪. ಕತ್ತಲೆಯ ಕಡಲು – ಮೋಹಿನಿ ಕಾದಂಬರಿ ಭಾಗ ೪ ಧೃತಿ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ ೧೯೭೨ ದ್ವಿತೀಯ ಮುದ್ರಣ ೨೦೦೭

ಪರಾಮರ್ಶನ ಗ್ರಂಥಗಳು :

ಕೃತಿಕಾರ	ಕೃತಿ
೧. ಡಾ॥ಮೋಹನ ಕುಂಟಾರ್	ಇನಾಂದಾರರ ಕಾದಂಬರಿಗಳು ಶ್ರೇಣಿ ಪ್ರಕಾಶನ, ಉಕ್ಕಿನಡ್ಕ, ೧೯೯೪
೨. ತ.ಸು.ಶಾಮರಾಯ	ಕನ್ನಡ ಸಾಹಿತ್ಯ ಚರಿತ್ರೆ ತಳುಕಿನ ವೆಂಕಣ್ಣಯ್ಯರ ಗ್ರಂಥಮಾಲೆ, ಮೈಸೂರು, ಪರಿಷ್ಕೃತ ಮುದ್ರಣ, ೨೦೦೯
೩. ಪ್ರೊ॥ ಎಲ್. ಎಸ್. ಶೇಷಗಿರಿರಾವ್	ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ ವಸಂತ ಪ್ರಕಾಶನ, ಬೆಂಗಳೂರು, ೧೯೩೭
೪. ಡಾ॥ ಜಿ. ಎಸ್. ಆಮೂರ್	ಕನ್ನಡ ಕಥನ ಸಾಹಿತ್ಯ : ಕಾದಂಬರಿ ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೪
೫. ಪ್ರೊ॥ ಎಲ್. ಎಸ್. ಶೇಷಗಿರಿರಾವ್	ಹೊಸಗನ್ನಡ ಸಾಹಿತ್ಯ ಚರಿತ್ರೆ ಸಪ್ನ ಬುಕ್ ಹೌಸ್, ಬೆಂಗಳೂರು, ೧೯೭೨
೬. ವಿಜಯಾ (ಸಂ.)	ಇನಾಂದಾರ್ ವ್ಯಕ್ತಿ-ಕೃತಿ ಇಳಾ ಪ್ರಕಾಶನ, ಬೆಂಗಳೂರು, ೧೯೮೬

೭. ಓ. ಎಲ್. ನಾಗಭೂಷಣಸ್ವಾಮಿ — ವಿಮರ್ಶೆಯ ಪರಿಭಾಷೆ
ಅಂಕಿತ ಪುಸ್ತಕ,
ಬೆಂಗಳೂರು,
(ಪರಿಷ್ಕೃತ ಮುದ್ರಣ)
೧೯೯೮

೮. ಪ್ರೊ॥ ಎಲ್. ಎಸ್. ಶೇಷಗಿರಿರಾವ್ — ಸಾಹಿತ್ಯ: ವಿಚಾರ, ವಿಮರ್ಶೆ
ವಸಂತ ಪ್ರಕಾಶನ,
ಬೆಂಗಳೂರು,
೨೦೦೬

೯. ಸಂಪಾದಕರು:
ಡಾ॥ ಹಾ. ಮಾ. ನಾಯಕ
ಎಂ.ವಿ. ವೆಂಕಟೇಶ ಮೂರ್ತಿ — ಕಾದಂಬರಿ ಲೋಕ
ವಸಂತ ಪ್ರಕಾಶನ,
ಬೆಂಗಳೂರು,
೧೯೯೦

೧೦. ರಾಜಗೋಪಾಲಾಚಾರ್ಯ ಎಂ. (ಸಂ.) — ನವನೀತ
ಗೀತ ಬುಕ್ ಹೌಸ್ ,
ಮೈಸೂರು,
೧೯೮೪